ಕರ್ನಾಟಕ ವಿಧಾನಸಭೆ

KARNATAKA LEGISLATIVE ASSEMBLY

ಮಂಗಳವಾರ ದಿನಾಂಕ ೩೦ನೇ ಮಾರ್ಚ್ ೧೯೮೧ ಫಾಲ್ಗುಣ ೨೯, ೧೯೦೨ ಶಕ

ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಸದನವು ಬೆಳಿಗ್ಗೆ ೯-೩೦ ಗಂಟೆಗೆ ಸಮಾವೇಶಗೊಂಡಿತು.

[ಮಾನ್ಯ ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್) ಪೀಠವನ್ನು ಅಲಂಕರಿಸಿದ್ದರು]

ಶಾಸನ ರಚನಾ ಕಾರ್ಯಕಲಾಪಗಳು.

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ವಿಧೇಯಕ ೧೯೮೧. ಪರ್ಯಾಲೋಚನಾ ಪ್ರಸ್ತಾವ.

ಶ್ರೀ ಎಂ. ರಘುಪತಿ.— ಮಾನ್ಯ ಅಧ್ಯಕ್ಷರೇ, ೧೯೮೧ನೇ ಇಸವಿಯ ಕರ್ನಾಟಕ ರಾಜ್ಯ ವಿಶ್ವ ವಿದ್ಯಾನಿಲಯಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ನಾನು ಸೂಚಿಸುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಶ್ರೀ ಎಂ. ರಘುಪತಿ (ವಿದ್ಯಾ ಮಂತ್ರಿಯವರು).— ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯದಲ್ಲಿ ಏನು ೫ ವಿಶ್ವ ವಿದ್ಯಾನಿಲಯಗಳು ಇವೆ. ಈ ೫ ವಿಶ್ವ ವಿದ್ಯಾನಿಲಯಗಳನ್ನು ಸೇರಿಸಿ ೧೯೭೬ರಲ್ಲಿ ಒಂದು ಕಾಯಿದೆಯನ್ನು ಮಾಡಿದರು. ಆದರೆ ಈ ಒಂದು ಕಾಯಿದೆ ಹಲವಾರು ಲೋಪದೋಷಗಳಿಂದ ಕೂಡಿದೆ ಎಂಬ ಕಾರಣದಿಂದ ಮತ್ತು ಈ ವಿಶ್ವ ವಿದ್ಯಾನಿಲಯಗಳ ಒಂದು ಗುಣಮಟ್ಟವನ್ನು ಮೇಲೆ ಎತ್ತಬೇಕೆಂಬ ಕಾರಣದಿಂದ ಇದಕ್ಕೆ ಕೆಲವು ತಿದ್ದುಪಡಿಗಳನ್ನು ತರುವುದು ಅವಶ್ಯಕವೆಂದು ತಿಳಿದು, ಈ ಬಗ್ಗೆ ಸಲಹೆಗಳನ್ನು ನೀಡಲು ೧೯೭೯ರಲ್ಲಿ ರಾಜ್ ಆಯೋಗವನ್ನು ನೇಮಕ ಮಾಡಲಾಯಿತು. ಈ ಆಯೋಗವು ಯೂನಿವರ್ಸಿಟಿಗಳಲ್ಲಿ ಯಾವ ರೀತಿ ಕಾನೂನು ಕಟ್ಟಳೆಗಳು ಇರಬೇಕೆಂಬ ಬಗ್ಗೆ ಕೆಲವು ಶಿಫಾರಸ್ಸುಗಳನ್ನು ಮಾಡಿತು. ಅವರು ಮಾಡಿರುವ ಶಿಫಾರಸ್‌ಗಳಲ್ಲಿ ಕೆಲವನ್ನು ನಾವು ಒಪ್ಪಿದ್ದೇವೆ, ಇನ್ನೂ ಕೆಲವು ಶಿಫಾರಸ್‌ಗಳನ್ನು ನಾವು ಒಪ್ಪಲಿಲ್ಲ. ಏಕೆ ಒಪ್ಪಲಿಲ್ಲ ಎಂದರೆ, ನಾನು ಉಪ ಕುಲಪತಿಗಳೊಡನೆ ಚರ್ಚೆ ಮಾಡಿದ ಸಂದರ್ಭದಲ್ಲಿ ಯಾವುದು ಉಪಯುಕ್ತ ಎಂದು ಕಂಡುಬರುತ್ತದೆಯೋ ಅಂತಹವುಗಳನ್ನು ಮಾತ್ರ ನಾವು ಒಪ್ಪಿಕೊಂಡಿದ್ದೇವೆ. ಯಾವುದು ಬೇಡ ಎಂದು ತೀರ್ಮಾನ ಮಾಡಿದ್ದೆವೋ ಅವುಗಳನ್ನು ನಾವು ಒಪ್ಪಲಿಲ್ಲ. ಈ ಆಯೋಗವನ್ನು ಏಕೆ ಮಾಡಬೇಕಾಯಿತು ಎಂದರೆ ಮಂಗಳೂರು ಮತ್ತು ಗುಲ್ಬರ್ಗಾ ವಿಶ್ವ ವಿದ್ಯಾನಿಲಯಗಳನ್ನು ನಾವು ಸ್ಥಾಪನೆ ಮಾಡಿಯಾದ ಮೇಲೆ ಅವುಗಳಿಗೆ ಯು. ಜಿ. ಸಿ ಯವರು ಅನುದಾನವನ್ನು ಕೊಟ್ಟಿರಲಿಲ್ಲ. ಈ ಅನುದಾನ ಕೊಡದೇ ಇದ್ದ ಕಾರಣದಿಂದ ಸಮಸ್ಯೆಗಳು ಉದ್ಭವವಾಗಿ ಈ ಆಯೋಗವನ್ನು ರಚನೆ ಮಾಡಬೇಕಾಗಿ ಬಂತು. ಈ ಎರಡೂ ವಿಶ್ವ ವಿದ್ಯಾನಿಲಯಗಳಿಗೆ ಅನುದಾನವನ್ನು ಕೊಡುವ ಬಗ್ಗೆ ಶಿಫಾರಸ್‌ಗಳನ್ನು ಮಾಡಲು ಆಯೋಗವನ್ನು ರಚನೆ ಮಾಡಿದೆವು. ಈ ಆಯೋಗವು ವಿಶ್ವ ವಿದ್ಯಾನಿಲಯದ ಕಾನೂನಿಗೆ ತಿದ್ದುಪಡಿಯನ್ನು ತರಬೇಕೆಂದು ಸೂಚಿಸಿತು. ಅದು ಮಾಡಿರುವ ಸೂಚನೆ ಮೇರೆಗೆ ನಾವು ಈ ತಿದ್ದುಪಡಿಗಳನ್ನು ಸದನದ ಮುಂದೆ ತಂದಿದ್ದೇವೆ. ಈ ತಿದ್ದುಪಡಿಗಳಲ್ಲಿರುವ ಪ್ರಮುಖವಾದ ೨-೩ ವಿಷಯಗಳನ್ನು ನಾನು ಈಗ ಸದನಕ್ಕೆ ತಿಳಿಸಬಯಸುತ್ತೇನೆ. ಮೊದಲನೆಯದು ಎಂದರೆ, ಮೊದಲಿದ್ದ ಕಾನೂನು ಪ್ರಕಾರ ವಿಶ್ವ ವಿದ್ಯಾನಿಲಯಗಳ ಉಪಕುಲಪತಿಗಳನ್ನು ನೇಮಕ ಮಾಡುತ್ತಿದ್ದುದು ಸರ್ಕಾರದವರು. ಉಪಕುಲ

ಪತಿಗಳನ್ನು ನೇಮಕ ಮಾಡುವ ಬಗ್ಗೆ ಸರ್ಕಾರದವರು ಮಧ್ಯ ಪ್ರವೇಶಿಸಬಾರದೆಂದು ಆಯೋಗದವರು ಶಿಫಾರಸ್ ಮಾಡಿದ್ದಾರೆ. ಇವರು ಮಾಡಿರುವ ಶಿಫಾರಸ್‌ನ್ನು ಸರ್ಕಾರವು ಒಪ್ಪಿದೆ. ಇನ್ನು ಮುಂದೆ ಉಪಕುಲಪತಿಗಳನ್ನು ನೇಮಕ ಮಾಡುವ ಬಗ್ಗೆ ಸರ್ಕಾರ ಮಧ್ಯೆ ಪ್ರವೇಶಿಸುವುದಿಲ್ಲ. ಉಪಕುಲಪತಿಗಳನ್ನು ಇನ್ನು ಮುಂದೆ ಹೇಗೆ ನೇಮಕ ಮಾಡಲಾಗುತ್ತದೆ ಎಂದರೆ, ಅದಕ್ಕೆ ಒಂದು ಸಪರೇಟ್ ಕಮಿಟಿ ಇರುತ್ತದೆ. ಈ ಕಮಿಟಿಯಲ್ಲಿ ಚಾನ್ಸಲರ್‌ರವರ ಅಧ್ಯಕ್ಷತೆಯಲ್ಲಿ ಸಿಂಡಿಕೇಟ್‌ನಿಂದ ಆಯ್ಕೆಯಾದ ಇಬ್ಬರು ಸದಸ್ಯರು ಇರುತ್ತಾರೆ, ನಾಮಿನೇಟ್ ಆದ ಒಬ್ಬರು ಸದಸ್ಯರು ಇರುತ್ತಾರೆ. ಇವರುಗಳು ಯಾರನ್ನು ಉಪಕುಲಪತಿಗಳಾಗಬೇಕೆಂದು ಸೂಚಿಸುತ್ತಾರೋ ಅವರನ್ನು ಉಪಕುಲಪತಿಗಳನ್ನಾಗಿ ಚಾನ್ಸಲರ್‌ರವರು ನೇಮಕ ಮಾಡುತ್ತಾರೆ. ಇದರಲ್ಲಿ ಸರ್ಕಾರದ ಹಸ್ತಕ್ಷೇಪ ಏನೂ ಇರುವುದಿಲ್ಲ. ಮತ್ತೆ ರಿಜಿಸ್ಟ್ರಾರ್, ಕಂಟ್ರೋಲರ್ ಆಫ್ ಎಕ್ಸಾಮಿನೇಷನ್ ಮತ್ತು ಚೀಫ್ ಲೈಬ್ರರಿಯನ್‌ಗಳನ್ನು ಅಪಾಯಿಂಟ್ ಮಾಡಿಕೊಳ್ಳುವಾಗ, ಚಾನ್ಸಲರ್‌ರವರು ಯಾರನ್ನು ರೆಕಮಂಡ್ ಮಾಡುತ್ತಾರೋ ಅಂತಹವರನ್ನು ಸಿಂಡಿಕೇಟ್‌ನವರು ಒಪ್ಪುವ ಪದ್ಧತಿಯನ್ನು ಅಳವಡಿಸುತ್ತಿದ್ದೇವೆ. ಆಮೇಲೆ ಕೆಲವು ಗ್ರಾಜುಯೇಟ್ಸ್‌ಗಳು ಮೈಸೂರಿನಲ್ಲಿ ಇರುತ್ತಾರೆ ಎಂದುಕೊಳ್ಳಿ ಅಲ್ಲಿ ಅವರ ಓಟು ಇರುತ್ತದೆ. ಆಮೇಲೆ ಇವರು ಬೆಂಗಳೂರಿಗೆ ಬಂದು ನೆಲೆಸಿದರೆ ಇಲ್ಲಿಯೂ ಓಟಿನ ಹಕ್ಕನ್ನು ಪಡೆಯುತ್ತಾರೆ. ಈ ರೀತಿ ಎರಡೂ ಕಡೆ ಓಟಿನ ಲಿಸ್ಟ್‌ನಲ್ಲಿ ಗ್ರಾಜುಯೇಟ್ಸ್‌ಗಳು ಬರದ ಹಾಗೆ ತಡೆಗಟ್ಟುವುದಕ್ಕೆ ನಾವು ಒಂದು ನೀತಿಯನ್ನು ಮಾಡಿದ್ದೇವೆ ಇದರ ಪ್ರಕಾರ ಓಟು ಮಾಡುವ ಗ್ರಾಜುಯೇಟುಗಳು ಹಿಂದಿನ ಎರಡು ವರ್ಷಗಳು ಒಂದೇ ಸ್ಥಾನದಲ್ಲಿ ವಾಸವಾಗಿರಬೇಕು. ಇಲ್ಲದಿದ್ದರೆ ಅಂತಹ ಗ್ರಾಜುಯೇಟ್ಸ್‌ಗಳು ಓಟು ಮಾಡುವುದಕ್ಕೆ ಅರ್ಹತೆ ಹೊಂದಿರುವುದಿಲ್ಲ. ಈ ರೀತಿ ಮಾಡಿರುವುದರಿಂದ ಎರಡು ಕಡೆ ಓಟುಗಳ ಲಿಸ್ಟಿಗೆ ಸೇರುವುದನ್ನು ತಪ್ಪಿಸಬಹುದು. ಆಮೇಲೆ ವಿದ್ಯಾರ್ಥಿ ಪ್ರತಿನಿಧಿಗಳನ್ನು ಪ್ರಪ್ರಥಮವಾಗಿ ಸೆನೆಟ್‌ಗೆ ಸೇರಿಸಿಕೊಳ್ಳಲಾಗುತ್ತದೆ. ೩ ಜನ ಅಂಡರ್ ಗ್ರಾಜುಯೇಟ್ ಪ್ರತಿನಿಧಿಗಳು. ಈ ಮೂವರು ಪ್ರತಿನಿಧಿಗಳಲ್ಲಿ ಒಬ್ಬರು ಮಹಿಳೆಯರು ಇರಬೇಕಾಗುತ್ತದೆ. ಆಮೇಲೆ ಪೋಸ್ಟ್ ಗ್ರಾಜುಯೇಟ್ ಕ್ಷೇತ್ರದಿಂದ ಇಬ್ಬರು ಪ್ರತಿನಿಧಿಗಳನ್ನು ಸೇರಿಸಿಕೊಳ್ಳಲಾಗುತ್ತದೆ. ಈ ಇಬ್ಬರಲ್ಲಿ ಒಬ್ಬರು ಮಹಿಳೆಯಾಗಿರಬೇಕಾಗುತ್ತದೆ. ಆಮೇಲೆ ಇನ್ನೂ ೩ ಜನರನ್ನು ಚಾನ್ಸಲರ್‌ರವರು ನಾಮಿನೇಟ್ ಮಾಡುತ್ತಾರೆ. ಈ ಮೂರು ಜನರು ಯಾರು ಎಂದರೆ, ಒಬ್ಬರು ಎನ್. ಸಿ. ಸಿ. ಯಲ್ಲಿ ಇರುವವರು, ಇನ್ನೊಬ್ಬರು ರ‍್ಯಾಂಕ್ ಪಡೆದವರು, ಇನ್ನೊಬ್ಬರು ಸ್ಪೋರ್ಟ್ಸ್‌ನಲ್ಲಿ ಮುಂದೆ ಇರತಕ್ಕವರು. ಈ ಮೂವರನ್ನು ಚಾನ್ಸಲರ್‌ರವರು ನಾಮಕರಣ ಮಾಡುತ್ತಾರೆ. ಒಟ್ಟು ೮ ಜನ ವಿದ್ಯಾರ್ಥಿ ಪ್ರತಿನಿಧಿಗಳನ್ನು ಸೆನೆಟ್‌ನಲ್ಲಿ ಸೇರಿಸಿಕೊಳ್ಳಲಾಗುತ್ತದೆ. ಇದರ ಬಗ್ಗೆಯೂ ತಿದ್ದುಪಡಿಯನ್ನು ತರಲಾಗಿದೆ. ಮತ್ತೆ, ಹೆಡ್ ಆಫ್ ದಿ ಡಿಪಾರ್ಟ್‌ಮೆಂಟುಗಳಲ್ಲಿ ಬಹಳ ವರ್ಷಗಳಿಂದಲೂ ಒಬ್ಬರೇ ಇರುತ್ತಾರೆ ಎಂಬ ದೂರುಗಳು ಬರುತ್ತಿದ್ದವು. ಆದ್ದರಿಂದ ಇನ್ನು ಮುಂದೆ ಹೆಡ್ ಆಫ್ ದಿ ಡಿಪಾರ್ಟ್‌ಮೆಂಟ್‌ಗಳಲ್ಲಿ ಪ್ರತಿಯೊಬ್ಬರಿಗೂ ಅವಕಾಶ ಸಿಗುವಂತೆ ರೋಸ್ಟರ್ ಪದ್ಧತಿಯನ್ನು ಜಾರಿಗೆ ತರುವ ಉದ್ದೇಶದಿಂದ ಇನ್ನೊಂದು ತಿದ್ದುಪಡಿಯನ್ನು ತಂದಿದ್ದೇವೆ. ಮತ್ತೆ ಹೊಸದಾಗಿ ಕಾಲೇಜುಗಳಿಗೆ ಯೂನಿವರ್ಸಿಟಿಯವರು ಅಫಿಲಿಯೇಷನ್ ಕೊಡುವಾಗ ಸರ್ಕಾರದ ಜೊತೆ ಸಮಾಲೋಚನೆ ಮಾಡಿ ನಂತರ ತೀರ್ಮಾನ ಕೈಗೊಳ್ಳುವುದಕ್ಕೂ ತಿದ್ದುಪಡಿಯನ್ನು ತಂದಿದ್ದೇವೆ. ಆಮೇಲೆ ಇಂಟರ್ ಯೂನಿವರ್ಸಿಟಿ ಬೋರ್ಡ್‌ನ್ನು ಮಾಡಿದ್ದೇವೆ. ಈ ಬೋರ್ಡಿನಲ್ಲಿ ವಿದ್ಯಾ ಸಚಿವರು ಅಧ್ಯಕ್ಷರಾಗಿರುತ್ತಾರೆ, ಎಲ್ಲಾ ಯೂನಿವರ್ಸಿಟಿಯ ಉಪಕುಲಪತಿಗಳು, ಕೊಲಿಜಿಯೇಟ್ ಎಜುಕೇಷನ್ನಿನ ಡೈರೆಕ್ಟರವರು, ಟೆಕ್ನಿಕಲ್ ಎಜುಕೇಷನ್ನಿನ ಡೈರೆಕ್ಟರ್‌ರವರು ಮೆಡಿಕಲ್ ಎಜುಕೇಷನ್ನಿನ ಡೈರೆಕ್ಟರ್‌ರವರು, ಪ್ರೀ-ಯೂನಿವರ್ಸಿಟಿ ಎಜುಕೇಷನ್ ಬೋರ್ಡಿನ ಚೇರ್ಮನ್‌ರವರು, ಹಣಕಾಸಿನ ಇಲಾಖೆಯ ಕಾರ್ಯದರ್ಶಿಯವರು, ವಿದ್ಯಾ ಇಲಾಖೆಯ ಕಾರ್ಯದರ್ಶಿಯವರು ಈ ಬೋರ್ಡಿನಲ್ಲಿ ಮೆಂಬರುಗಳಾಗಿರುತ್ತಾರೆ. ಈ ಬೋರ್ಡಿಗೆ ಸಾಕಷ್ಟು ಅಧಿಕಾರವನ್ನು ಕೊಡಲಾಗಿರುತ್ತದೆ. ಇದರ ಬಗ್ಗೆಯೂ ತಿದ್ದುಪಡಿಯನ್ನು ತರಲಾಗಿದೆ. ಆಮೇಲೆ ಎಸ್. ಸಿ. ಮತ್ತು ಎಸ್. ಟಿ. ಹಾಗೂ ಬ್ಯಾಕ್‌ವರ್ಡ್ ಕ್ಲಾಸಸ್ ವಿದ್ಯಾರ್ಥಿಗಳಿಗೆ ಸರಿಯಾಗಿ ಸೀಟುಗಳನ್ನು ಕಾದಿರಿಸಲಾಗುತ್ತಿದೆಯೋ ಇಲ್ಲವೋ ಎಂಬುದನ್ನು ಪರಿಶೀಲನೆ ಮಾಡಿ ಸರಿಯಾದ ಸೌಲಭ್ಯಗಳನ್ನು ಈ ವರ್ಗದವರಿಗೆ ಕೊಡುವಂತೆ ಅನುಕೂಲವಾಗಲು ಒಂದು ತಿದ್ದುಪಡಿಯನ್ನು ತರಲಾಗಿದೆ. ಎಸ್. ಸಿ. ಮತ್ತು ಎಸ್. ಟಿ. ಹಾಗೂ ಬ್ಯಾಕ್‌ವರ್ಡ್ ಕ್ಲಾಸಸ್ ವಿದ್ಯಾರ್ಥಿಗಳನ್ನು ಮೆರಿಟ್ ವಿದ್ಯಾರ್ಹತೆಗೆ ಪರಿಗಣಿಸುವಾಗ ೫೦ ಅಂಕಗಳು ಹಾಗೂ ಅದರ ಮೇಲ್ಪಟ್ಟು ಎಂದು ನಮೂದಿಸಲಾಗುತ್ತಿತ್ತು. ಈಗ ಇದನ್ನು ತೆಗೆದು

ಹಾಕಿ ಯಾರು ೫೦ ಅಂಕಗಳನ್ನು ಪಡೆದಿರುತ್ತಾರೋ ಅಂತಹ ವಿದ್ಯಾರ್ಥಿಗಳನ್ನು ಮೆರಿಟ್ ವಿದ್ಯಾರ್ಥಿಗಳೆಂದೇ ಪರಿಗಣಿಸಬೇಕೆಂದು ತಿದ್ದುಪಡಿಯನ್ನು ತರಲಾಗಿದೆ. ಎಸ್. ಟಿ. ಮತ್ತು ಎಸ್. ಸಿ. ಹಾಗೂ ಬ್ಯಾಕ್‌ವರ್ಡ್ ಕ್ಲಾಸ್‌ನವರಿಗೆ ಟೈಮ್ ಬಾಂಡ್ ಪ್ರಮೋಷನ್ ಕೊಡುವುದಕ್ಕೂ ನಾವು ಉದ್ದೇಶಿಸಿದ್ದೇವೆ. ಯೂನಿವರ್ಸಿಟಿಯಲ್ಲಿರುವ ಅಧಿಕಾರವನ್ನು ವಿಕೇಂದ್ರೀಕರಣ ಮಾಡಬೇಕು ಎನ್ನುವ ಮೂಲ ಉದ್ದೇಶದಿಂದ ಈ ಎಲ್ಲಾ ತಿದ್ದುಪಡಿಗಳನ್ನು ತರಲಾಗಿದೆ. ಆದ್ದರಿಂದ ಈ ತಿದ್ದುಪಡಿ ವಿಧೇಯಕಕ್ಕೆ ಅನುಮತಿಯನ್ನು ಕೊಡಬೇಕೆಂದು ಈ ಸಭೆಯನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಕೆ. ಹೆಚ್. ಪಾಟೀಲ್ (ಗದಗ್).— ಮಾನ್ಯ ಸಭಾಧ್ಯಕ್ಷರೇ, ನಮ್ಮ ಶಿಕ್ಷಣ ಸಚಿವರು ಯೂನಿವರ್ಸಿಟಿ ಕಾನೂನಿಗೆ ತಿದ್ದುಪಡಿಯನ್ನು ತಂದಿದ್ದಾರೆ. ಈ ತಿದ್ದುಪಡಿಯಲ್ಲಿ ಮಿಶ್ರ ಧೋರಣೆಯನ್ನು ಸರ್ಕಾರದವರು ತಾಳಿದಂತಿದೆ. ನಾವು ಇದನ್ನು ಪೂರ್ತಿಯಾಗಿ ಒಪ್ಪಬೇಕು ಎನ್ನುವಂತಹ ಅಭಿಲಾಷೆ ಇದ್ದರೂ ಒಪ್ಪಲಾರದ ಕಷ್ಟ ಸ್ಥಿತಿಯನ್ನು ತಂದಿದ್ದಾರೆ. ಇದನ್ನು ಪೂರ್ತಿ ವಿರೋಧ ಮಾಡಬೇಕೆಂದು ಇದ್ದರೆ, ವಿರೋಧ ಮಾಡಲಾರದ ಪರಿಸ್ಥಿತಿಗೆ ತಂದಿದ್ದಾರೆ. ಶ್ರೀಮಾನ್ ರಘುಪತಿಯವರು ನಮ್ಮನ್ನು ಧರ್ಮಸಂಕಟದಲ್ಲಿ ಇಟ್ಟಿದ್ದಾರೆ. ಸಾರ್ವಜನಿಕ ಹಿತಕ್ಕೆ ತಂದಂಥ ಬಿಲ್‌ನ್ನು ಕೇವಲ ವಿರೋಧ ಪಕ್ಷದಲ್ಲಿದ್ದೇವೆಂದು ನಾವು ಇದನ್ನು ವಿರೋಧ ಮಾಡುತ್ತಿಲ್ಲ. ಆರ್ಥಿಕ ಸಂಕಷ್ಟದೊಳಗೂ ಸಹ ನಿಲುವನ್ನು ಮಾನ್ಯ ಸಚಿವರಿಗೆ ಹೇಳಿದರೆ ಅದು ಸಮರ್ಪಕವಾದೀತು ಎನ್ನುವ ದೃಷ್ಟಿಯಿಂದ ಅದನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವೊತ್ತು ಇಡೀ ಆಕ್ಟ್‌ನ್ನು ನಾವು ನೋಡಿದರೆ ಶಿಕ್ಷಣ ಸಚಿವರ ಮನಸ್ಸಿನಲ್ಲಿ ಈ ಯೂನಿವರ್ಸಿಟಿಗಳ ಬಗ್ಗೆ ಒಂದು ಜಿಜ್ಞಾಸೆ ಈಗಾಗಲೇ ಮೂಡಿದೆ ಎನ್ನುವಂತಹ ಭಾವನೆ ಬರುತ್ತದೆ. ಯೂನಿವರ್ಸಿಟಿಗಳು ಸರಿಯಾಗಿ ಕೆಲಸ ಮಾಡಿಲ್ಲ ಎನ್ನುವಂತಹ ಮಾತನ್ನು ಹೇಳುವಾಗ ಅವರು ನನ್ನೊಂದಿಗೆ ಹೊಂದಿಕೊಳ್ಳುತ್ತಾರೆ ಎಂದು ಭಾವನೆ ಮಾಡುತ್ತಾನೆ. ಇವೊತ್ತು ಯೂನಿವರ್ಸಿಟಿಗಳು ಏನಾಗಿವೆ ಎಂದು ಲಕ್ಷಕ್ಕೆ ತೆಗೆದುಕೊಂಡರೆ, ದಿನವೂ ಮುಂಜಾನೆಯಲ್ಲಿ ಪತ್ರಿಕೆಗಳನ್ನು ನೋಡಿದರೆ, ಮಾರ್ಕ್ಸ್‌ಗಳನ್ನು ತಿದ್ದಿದರು, ಮಾರ್ಕ್ಸ್‌ಗಳನ್ನು ಹಾಕಿದರು ಎಂಬ ವಿಷಯಗಳು ನಮ್ಮ ಗಮನಕ್ಕೆ ಬರುತ್ತದೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ಬೇರೆ ಬೇರೆ ಭಾಗಗಳಲ್ಲಿ ಬೇರೆ ಬೇರೆ ವಿಶ್ವವಿದ್ಯಾನಿಲಯಗಳು ಇವೆ. ಆದುದರಿಂದ ಒಂದರ ಗುಣಾವಗುಣಗಳು ಮತ್ತೊಂದಕ್ಕೆ ಸಂಬಂಧ ಇರುವುದಿಲ್ಲ, ಲಾಗೂ ಆಗುವುದಿಲ್ಲ. ಒಂದು ಯೂನಿವರ್ಸಿಟಿಯಲ್ಲಿ ಹೆಚ್ಚು ಮಾರ್ಕ್ಸ್‌ಗಳನ್ನು ಹಾಕುತ್ತಾರೆ, ಇನ್ನೊಂದರಲ್ಲಿ ಕಡಿಮೆ ಮಾರ್ಕ್ಸ್‌ಗಳನ್ನು ಹಾಕುತ್ತಾರೆ. ಇವುಗಳು ನಮ್ಮ ಭಾವಿ ಭವಿಷ್ಯವನ್ನು ರೂಪಾರ್ಡು ಮಾಡುವಂತಹ ವಿದ್ಯಾರ್ಥಿಗಳ ವರ್ಗಕ್ಕೆ ಬಹಳ ತೊಂದರೆದಾಯಕವಾಗಿ ಪರಿಣಮಿಸಿದೆ. ಇದು ಏತಕ್ಕೆ ಆಗುತ್ತದೆ ಎಂದರೆ, ಇದರ ಬಗ್ಗೆ ಅನೇಕ ಜನ ಶಿಕ್ಷಣ ತಜ್ಞರು ಏನು ಹೇಳುತ್ತಿದ್ದಾರೆ ಎಂದರೆ ಹಿಂದೆ ಹಾಗೂ ಇಂದು ಶಿಕ್ಷಣದ ಗುಣಮಟ್ಟವನ್ನು ನೋಡಿದರೆ ಈ ಯೂನಿವರ್ಸಿಟಿಗಳು ಕೇವಲ ನಾಮ ಮಾತ್ರವಾಗಿ ಯೂನಿವರ್ಸಿಟಿಗಳಾಗಿ ಉಳಿದಿವೆಯೋ ವಿನಹ ನಿಜವಾಗಿಯೂ ಅವು ತಮ್ಮ ಕರ್ತವ್ಯದಲ್ಲಿ ಲೋಪವಾಗಿವೆ ಎಂದು ಬಹಳಷ್ಟು ಜನ ತಜ್ಞರು ಅಭಿಪ್ರಾಯವನ್ನು ಪಟ್ಟಿದ್ದಾರೆ. ಇದನ್ನು ನಾವು ಸೂಕ್ಷ್ಮವಾಗಿ ಪರಿಶೀಲಿಸಿದರೆ ಹಿಂದಿನ ಮತ್ತು ಇಂದಿನ ಯೂನಿವರ್ಸಿಟಿಗಳ ವೈಸ್‌ಚಾನ್ಸಲರ್‌ಗಳ ಘನತೆ, ಗಾಂಭೀರ್ಯತೆ, ಇತ್ಯಾದಿಗಳನ್ನು ತುಲನೆ ಮಾಡಿದರೆ, ಈಗ ನಾವು ನಿಜವಾಗಿಯೂ ಒಂದು ಶೂನ್ಯಾವಸ್ಥೆಯಲ್ಲಿ ಇದ್ದೇವೆ ಎಂಬ ಭಾವನೆಯು ಬರುತ್ತದೆ. ಕರ್ನಾಟಕ ಯೂನಿವರ್ಸಿಟಿ ಆಕ್ಟ್ ಎಂದು ಮಾಡಿ, ಕ್ರೋಢೀಕರಣ ಮಾಡಿ, ಅನೇಕ ವಿಶ್ವವಿದ್ಯಾನಿಲಯಗಳು ಇದರ ಕಕ್ಷೆಯಲ್ಲಿ ಬರುವಂತೆ ಕೆಲವಾರು ವರ್ಷಗಳ ಹಿಂದೆ ಮಾಡಿದರು. ಮೊದಲು ಪ್ರೋಚಾನ್ಸಲರ್ ಹುದ್ದೆಯನ್ನು ತೆಗೆದುಹಾಕಿದರು. ಈಗ ಪುನ: ಪ್ರೋಚಾನ್ಸಲರ್ ಇರಬೇಕೆಂದು ಮಾಡಿದ್ದಾರೆ, ಒಂದು ವಿಚಾರ ನಿಜ, ಪ್ರೋಚಾನ್ಸಲರ್ ಇಲ್ಲದೇ ಹೋದರೆ ಸರಕಾರಕ್ಕೆ ಯೂನಿವರ್ಸಿಟಿಯಲ್ಲಿ ಯಾವ ಹಿಡಿತವೂ ಇಲ್ಲ. ಇವೊತ್ತು ಜನತಾ ಪಕ್ಷ ಅಧಿಕಾರದಲ್ಲಿರಬಹುದು, ಅವರು ಅಧಿಕಾರದಲ್ಲಿರುವವರು ಎಂಬ ಕಾರಣಕ್ಕಾಗಿ ಸರಕಾರದ ಅಧಿಕಾರವನ್ನು ಮೊಟಕುಗೊಳಿಸುವುದಕ್ಕಾಗಿ ನಾವು ಪ್ರಯತ್ನ ಮಾಡುವುದಿಲ್ಲ. ಆದರೆ ಸರಕಾರದ ನ್ಯಾಯಬದ್ಧವಾದ ಕರ್ತವ್ಯವನ್ನು ಚ್ಯುತಿ ಮಾಡದೆ ಪೂರೈಸಬೇಕೆಂದು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಬಿಲ್ಲಿನ ವಿಷಯಕ್ಕಿಂತ ಪೂರ್ವದಲ್ಲಿ ನಾವು ಈ ವಿಶ್ವವಿದ್ಯಾಲಯಗಳು ಹೇಗೆ ನಡೆದಿದೆ ಎಂದು ನೋಡಿದರೆ ತಾವು ಸ್ಥೂಲವಾದಂತಹ ಒಂದು ಚಿತ್ರದ ಪರಿಚಯವನ್ನು ಮಾಡಿಕೊಳ್ಳಬಹುದು. ಯೂನಿವರ್ಸಿಟಿ ವೈಸ್-ಚಾನ್ಸಲರ್ ರಿಂದ ಹಿಡಿದು ಪೀವನ್ ತನಕವೂ ಕೇವಲ ಜಾತೀಯತೆಯ ಭಾವನೆಯು ಅಲ್ಲಿ ತುಂಬುತುಳುಕುತ್ತಿರುವುದನ್ನು ನೋಡು

ತ್ತಿದ್ದೇನೆ. ಯಾವ ಯಾವ ಯೂನಿವರ್ಸಿಟಿಯಲ್ಲಿ ಯಾವ ಯಾವ ವೈಸ್ ಚಾನ್ಸಲರ್ ಇದ್ದಾರೆ ಅವರು ಎಷ್ಟೆ ಪರಿಶುದ್ಧರು ಇದ್ದರೂ, ಅವರು ಎಷ್ಟೇ ನಿಷ್ಪಕ್ಷಪಾತಿಗಳು ಇದ್ದರೂ ದುರ್ದೈವದಿಂದ ಇವೊತ್ತು ಅವುಗಳು ಒಂದೂ ಸುವ್ಯವಸ್ಥಿತವಾಗಿ ನಡೆಯುತ್ತಿಲ್ಲ. ಒಮ್ಮೆ ಸ್ವಾಮಿ ವಿವೇಕಾನಂದರವರ ಹತ್ತಿರ ಒಬ್ಬರು ಹೋಗಿ ನಾನು ಯಾರು ಎಂದು ಹೇಳಿ ಎಂದು ಕೇಳಿಕೊಂಡಾಗ, ಅವರು, ನೀನು ಯಾರು ಎಂದು ಹೇಳುತ್ತೇನೆ, ಮೊದಲು, ನಿನ್ನ ಹಿಂದಿರುವವರು ಯಾರು ಎಂದು ನನಗೆ ಹೇಳು ಎಂದು ಹೇಳಿದರು. ಅಂದರೆ ನಾವು ಯಾರು ಎಂತಹವರು ಎಂಬುದನ್ನು ನಮ್ಮ ಹಿಂಬಾಲಕರು ಯಾರು ಎಂದು ತಿಳಿದುಕೊಂಡರೆ ಗೊತ್ತಾಗುತ್ತದೆ ಎಂದು ಅರ್ಥ ಬರುತ್ತದೆ. ಅದೇ ರೀತಿಯಾಗಿ ವೈಸ್ ಚಾನ್ಸಲರ್ ಗಳವರು ತುಂಬಾ ಒಳ್ಳೆಯ, ತಾತ್ವಿಕರಾದ, ಉತ್ತಮವಾದ ಚಾರಿತ್ರ್ಯಗಳುಳ್ಳವರು ಸಿಕ್ಕಿದರೂ ಸಹಾ ಅವರನ್ನು ಅಡ್ಡದಾರಿಗೆ ಎಳೆಯುವಂತಹ ಅನೇಕ ಜನರು ಅವರ ಹಿಂದೆ, ಮುಂದೆ ಇದ್ದೇ ಇರುತ್ತಾರೆ. ಈ ಸದನದಲ್ಲಿಯೂ ಸಹ ಅನೇಕ ಸಾರಿ ಇದೇ ವಿಚಾರ ಬಂದಿತ್ತು. ಕಾನ್ಸಿಟಿಟ್ಯೂಷನಲ್ ಪ್ರಾಪರ್ಟಿ ಕೂಡಾ ಹಾಳಾಗಿ ಹೋಯಿತು. ಇವೊತ್ತು ವಿಶ್ವವಿದ್ಯಾನಿಲಯಗಳಿಗೆ, ಅಷ್ಟೆ ಅಲ್ಲ ಖಾಸಗಿ ರಂಗಗಳಲ್ಲಿ ಸಹ ನೀವು ನೇಮಕಾತಿ ಮಾಡುವಾಗ ಕಾನ್ಸಿಟಿಟ್ಯೂಷನಲ್ ರಿಸರ್ವೇಶನ್ ೧೮ ಪರ್ಸೆಂಟ್ ಇಡಬೇಕೆಂದು ಹೇಳುತ್ತೀರಿ. ಆದರೆ ಇವೊತ್ತಿನ ದಿವಸ ವಿಶ್ವವಿದ್ಯಾನಿಲಯಗಳು ಇಷ್ಟು ಸ್ವಾಯತ್ತ ಅಧಿಕಾರವನ್ನು ಪಡೆದಿದ್ದರೂ ಸಹ ಸಂಪೂರ್ಣವಾದಂತಹ ಜವಾಬ್ದಾರಿಯು ಸರಕಾರದ್ದು. ಅವುಗಳು ಇವೊತ್ತು ಸಹ ನೇರವಾಗಿ ಎಸ್.ಸಿ. ಯವರಿಗೆ ಕೊಡತಕ್ಕಂತಹ ಪ್ರಾತಿನಿಧ್ಯವನ್ನು ಕೊಡದಿರುವುದಕ್ಕೆ ಕಾರಣ ಏನು? ಇದಕ್ಕೆ ಯಾರನ್ನು ದೋಷಿಯಾಗಿ ಮಾಡುತ್ತೀರಿ? ಅನೇಕ ಜನಗಳು ಹೇಳಬಹುದು, ಚಾನ್ಸಲರ್ ವೈಸ್ ಚಾನ್ಸಲರ್ ಎಂದು. ಆದರೆ ಇದನ್ನು ಮಾಡತಕ್ಕಂತಹ ಕರ್ತವ್ಯ ಸರಕಾರದ್ದು. ಏತಕ್ಕೆ ಎಂದರೆ ಸರಕಾರದಿಂದ ನೇರವಾಗಿ ನಾಮಕರಣವಾದಂತಹ ಡೈರೆಕ್ಟರ್ ಇರುತ್ತಾರೆ, ಸೆಕ್ರೆಟರಿಯವರು, ಸೆನೆಟ್ ಮೆಂಬರಾಗಿರುತ್ತಾರೆ, ಅನೇಕ ಜನ ಆಫೀಸರ್ಸ್ ಇರುತ್ತಾರೆ, ಹಾಗಾದರೆ ಇವರೆಲ್ಲ ಮಜಾ ಮಾಡುವುದಕ್ಕೆ ಹೋಗುತ್ತಾರೇನು? ಅವರು ವಿಶ್ವವಿದ್ಯಾನಿಲಯದವರು ಎಲ್ಲಿ ತಪ್ಪುತ್ತಿದ್ದಾರೆ ಎಂದು ತಿಳಿದುಕೊಂಡು ಅದನ್ನು ತಮ್ಮ ರಿಪೋರ್ಟಿನ ಮೂಲಕ ತಮ್ಮ ಗಮನಕ್ಕೆ ತಂದು ಕೊಡಬೇಕು. ಇಲ್ಲದಿದ್ದರೆ ಅವರನ್ನು ಅಲ್ಲಿ ಏತಕ್ಕಾಗಿ ಇಡುತ್ತೀರಿ? ನಿಮ್ಮ ಪ್ರತಿನಿಧಿಗಳಾಗಿ ಅವರು ಅಲ್ಲಿಗೆ ಹೋದ ನಂತರ ಅಲ್ಲಿ ಅವರು ತಮ್ಮ ಕರ್ತವ್ಯವನ್ನು ಸರಿಯಾಗಿ ಮಾಡದಿದ್ದರೆ ಅವರು ನಿಜವಾಗಿಯೂ ಸರಕಾರಕ್ಕೆ ಕೆಟ್ಟ ಹೆಸರನ್ನು ತರುತ್ತಾರೆ. ಅಂತಹವರನ್ನು ಸ್ಪಷ್ಟವಾಗಿ ಮುಕ್ತರಾಗಿ ಮಾಡಿ, ಅಲ್ಲದಿದ್ದರೆ ಸರಿಯಾಗಿರುವ ರೀತಿಯಲ್ಲಿ ಕೆಲಸವನ್ನು ನಿರ್ವಹಿಸುವಂತೆ ಎಚ್ಚರಿಕೆ ನೀಡಿ. ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯವು ಅನೇಕ ಭಾಗಗಳಲ್ಲಿ, ಅನೇಕ ರೀತಿಯಾಗಿ ಈ ಕೆಲಸ ಹಂಚಿ ಹೋಗಿದೆ. ಒಂದೊಂದು ಯೂನಿವರ್ಸಿಟಿ ಒಂದೊಂದು ರೀಜನ್‌ಗೆ ಸ್ಥಾಪಿತವಾಗಿದೆ. ಆದರೆ ಯಾವ ಯಾವ ಭಾಗದಲ್ಲಿ ಯಾವ ಯಾವ ಒಂದು ಜಾತಿಯ, ಪಂಗಡದ ಜನರು ಹೆಚ್ಚಿಗೆ ಇರುತ್ತಾರೆಯೋ ಅವರ ಜನರನ್ನು ವೈಸ್ ಚಾನ್ಸಲರ್ ಮಾಡುವುದರಿಂದ ಯೂನಿವರ್ಸಿಟಿಗೆ ಅದೇ ಜಾತಿಯ ಹೆಸರು ತರುವುದಕ್ಕೆ ಅನುಕೂಲವಾಗುತ್ತದೆ. ಈ ವಿಷಯವಾಗಿ ಅನೇಕ ಜನರು ಕದ್ದುಮುಚ್ಚಿ ಮಾತನಾಡುತ್ತಾರೆ. ಹಾಗೆ ಮಾತನಾಡುವ ಅವಶ್ಯಕತೆ ಈಗ ಇಲ್ಲ, ಏಕೆಂದರೆ ನಾವುಗಳು ಈಗ ಆ ಸ್ಥಿತಿಗೆ ಮುಟ್ಟಿದ್ದೇವೆ, ಆ ಪರಿಸ್ಥಿತಿಯನ್ನು ಇಂದು ನಿವಾರಣೆ ಮಾಡಬೇಕು. ಮಾನ್ಯ ರಘುಪತಿಯವರು ಬಹಳ ಹಿಂದುಳಿದ ಸಮಾಜದಿಂದ ಬಂದಿರತಕ್ಕಂತಹವರು, ಅವರ ಕೈಯೊಳಗೆ ಶಿಕ್ಷಣ ಖಾತೆಯು ಇದೆ. ಈ ಖಾತೆಯು ಒಂದು ಖಡ್ಗ ಇದ್ದ ಹಾಗೆ. ಇದರಿಂದ ಹತ್ಯೆ ಮತ್ತು ರಕ್ಷಣೆ ಎರಡನ್ನೂ ಮಾಡಬಹುದು ಅದು ರಕ್ಷಣೆ ಮಾಡುತ್ತದೆಯೋ ಅಥವಾ ಹತ್ಯೆಯನ್ನು ಮಾಡುತ್ತದೆಯೋ ಎಂದು ಅದರ ಮೇಲೆ ಮನುಷ್ಯನ ಯೋಗ್ಯತೆಯನ್ನು ಅಳೆಯಬಹುದು. ಕೇವಲ ಭಾಷಣ ಕ್ರಿಯರಾದ ಶಿಕ್ಷಣ ಸಚಿವರು ಇದ್ದರೆ ಸಾಲದು, ಕ್ರಿಯಾಶೀಲರಾಗಿರತಕ್ಕಂತಹ ಸೃಜನಶೀಲರಾಗಿರತಕ್ಕಂತಹ, ಶಿಕ್ಷಣ ಸಚಿವರು ಇವರು ಆಗಿರಬೇಕು. ಇದು ನನ್ನ ಭಾವನೆ. ಈ ಕಾನೂನಿನಲ್ಲಿ ಪ್ರೋಚಾನ್ಸಲರ್ ಹುದ್ದೆಯನ್ನು ಹಾಕಿದ್ದಾರೆ; ಆದರೆ ಪ್ರೋಚಾನ್ಸಲರ್ ಅಧಿಕಾರವನ್ನು ನಿಗದಿತಗೊಳಿಸುವುದರಲ್ಲಿ He can preiside over the convocation if the Chancellor is absent ಚಾನ್ಸ್‌ಲರ್ ಅಬ್ಸೆಂಟ್ ಇದ್ದಾಗ ಅವರು ಪ್ರಿಸೈಡ್ ಮಾಡಬೇಕೆನ್ನುವುದು ತಪ್ಪಲ್ಲ. ಆದರೆ ಅದರಲ್ಲಿ ನಿಜವಾದಂತಹ, ಯೋಗ್ಯವಾದಂತಹ ಕಾನೂನು ಬೇಕಾಗಿತ್ತು, ಪ್ರೋಚಾನ್ಸಲರ್ ರವರಿಗೆ ಯಾವುದಾದರೂ ಅಧಿಕಾರ ಇರಬೇಕು. ಚಾನ್ಸಲರ್‌ಗೆ ಕಾಗದವನ್ನು ಕಳುಹಿಸುವಾಗ ಪ್ರೋಚಾನ್ಸಲರ್ ಮುಖಾಂತರ ಕಳುಹಿಸುವಂತಹ ಒಂದು ವಿಶಿಷ್ಟವಾದಂತಹ ಧೋರಣೆ ಇರಬೇಕು. ಏಕೆಂದರೆ ನೀವು ನೇರವಾಗಿ ಜನರ ಪ್ರತಿನಿಧಿಗಳು ಚಾನ್ಸ್‌ಲರ್ ರಾಷ್ಟ್ರಪತಿಯವರಿಂದ ನೇಮಕವಾಗಿರುವವರು,

ಚಾನ್ಸಲರ್‌ಗಿಂತ ಪ್ರೋಚಾನ್ಸಲರ್‌ಗೆ ನೇರವಾಗಿ ಜನರ ಸಂಪರ್ಕ ಇರುವುದರಿಂದ ನೀವು ಮಾಡತಕ್ಕಂತಹ ನ್ಯಾಯಾನ್ಯಾಯಗಳು ಈ ಸದನದಲ್ಲಿ ವಿಚಾರಣೆಗೆ ಅರ್ಹವಾಗುತ್ತವೆ. ಆದರೆ ಅದೇ ಚಾನ್ಸಲರ್ ಮಾಡಿದರೆ ನಾವು ವಿಚಾರಣೆಯನ್ನು ಸಾಕಷ್ಟು ಬಿಚ್ಚು ಮನಸ್ಸಿನಿಂದ ಮಾಡುವುದಕ್ಕೆ ಆಗುವುದಿಲ್ಲ, ಹಾಗೆ ಮಾಡುವುದಕ್ಕೆ ಹೋಗುವುದಿಲ್ಲ. ಆ ದೃಷ್ಟಿಯಿಂದ ನೀವು ಪ್ರೋಚಾನ್ಸಲರ್ ಹುದ್ದೆಯನ್ನು ಹಾಕಿದ್ದರೂ ಸಹ ಅದಕ್ಕೆ ಗಮನವನ್ನು ಕಡಿಮೆ ಮಾಡಿದ್ದೀರಿ. ಅದಕ್ಕಾಗಿ ನೀವು ನಿಜವಾಗಿಯೂ ಈ ಬಿಲ್ಲನ್ನು ತರುವುದಕ್ಕಿಂತ ಪೂರ್ವದಲ್ಲಿ ವಿಚಾರ ಮಾಡಬೇಕಾಗಿತ್ತು. ತಾವು ದುಡುಕಿನ ದೃಷ್ಟಿಯಿಂದ ಈ ಬಿಲ್ಲನ್ನು ತಂದಿದ್ದೀರಿ. ಇದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಏಕೆಂದರೆ ನೀವು ಹೇಳಬಹುದು, ಕೇಂದ್ರ ಸರಕಾರದವರು ಇದನ್ನು ವಿಚಾರ ಮಾಡಿದ್ದಾರೆ, ಅವರು ಒಪ್ಪಿದ್ದಾರೆ ಎಂದು ಹೇಳಬಹುದು. ಆದರೆ ಹೊಸ ಬಿಲ್ಲು ಬರಬೇಕು, ಹೊಸ ರೂಪರೇಶೆ ಕೊಡಬೇಕೆಂದು ಇದೆ, ಇವೊತ್ತಿನ ದಿವಸ ೨-೩ ತಿದ್ದುಪಡಿಗಳನ್ನು ತಂದಿದ್ದೀರಿ. ಈ ತಿದ್ದುಪಡಿಯನ್ನು ನೋಡಿದರೆ ಈ ಬಿಲ್ಲಿನಲ್ಲಿ ತಾವುಗಳು ಸಂಪೂರ್ಣವಾಗಿ ವಿಚಾರ ಮಾಡಿದಂತೆ ಕಾಣಲಿಲ್ಲ. ಈ ಕುರಿತು ತಾವು ವಿಚಾರ ಮಾಡಲಿಲ್ಲ, ಸಾಕಷ್ಟು ಚರ್ಚೆ ಮಾಡಿದ್ದರೆ ಎಷ್ಟೆಷ್ಟೋ ತಿದ್ದುಪಡಿಗಳನ್ನು ಮಾಡುವುದಕ್ಕೆ ಸಾಧ್ಯವಾಗುತ್ತಿತ್ತು. ಆ ದೃಷ್ಟಿಯಿಂದ ಇನ್ನಷ್ಟು ತಡ ಮಾಡಿದ್ದರೆ ಪ್ರಗತಿಯಲ್ಲಿ ನಾವು ಅಡ್ಡವಾಗುತ್ತವೆಯೋ ಎನ್ನುವ ಭಾವನೆಯಿಂದ ಇಲ್ಲಿ ತಂದಿದ್ದೀರಿ. ಇದು ಸಮರ್ಪಕವಾದಂತಹ ಬಿಲ್ ಅಲ್ಲ. ಕೆಲವು ದಿವಸಗಳ ಮೇಲಾದರೂ ಇದಕ್ಕೆ ತಿದ್ದುಪಡಿ ಮಾಡೋಣ. ಏಕೆಂದರೆ ಎಲ್ಲಾ ಇವೊತ್ತೇ ಮಾಡಬೇಕೆಂದು ಜನರ ಮೇಲೆ ಮಹಾಘಾತ ಆಗುತ್ತದೆ. ಅಂದರೆ ನಿನ್ನೆ ಮಾಡಿದಂತಹ ಲ್ಯಾಂಡ್ ರಿಫಾರ್ಮ್ಸ್ ಬಿಲ್ಲಾಗಲಿ ಇಂತಹ ಬಿಲ್ ಆಗಲೀ, ಜನರ ಕುತ್ತಿಗೆಯನ್ನು ಕೊಯ್ಯುವಂತಹ ಬಿಲ್‌ಗಳು ಆಗಿವೆ, ಆದರೆ ಇದು ಹೀಗೆ ಇಲ್ಲ ಎನ್ನುವ ದೃಷ್ಟಿಯಿಂದ ಅನೇಕ ತಿದ್ದುಪಡಿಗಳನ್ನು ಒಳಗೊಳ್ಳುವ ಅವಕಾಶ ಇದ್ದರೂ ಮುಂದೆ ನೀವು ವಿಚಾರ ಮಾಡಿ ವಿರೋಧ ಪಕ್ಷದವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ವಿಚಾರ ಮಾಡಬೇಕು. ಈ ಬಿಲ್ಲಿನಲ್ಲಿ ಅತ್ಯಾವಶ್ಯಕವಾಗಿ ಇರುವಂತಹ ಅನೇಕ ಸಲಹೆಗಳನ್ನು ಕಂಡುಕೊಳ್ಳಬಹುದು, ತಮಗೆ ಗೊತ್ತಿದೆ, ವಿಶ್ವವಿದ್ಯಾನಿಲಯಗಳಲ್ಲಿ ಅನೇಕ ಕಡೆಗಳಲ್ಲಿ ಲಕ್ಷಗಟ್ಟಲೆ, ಕೋಟಿಗಟ್ಟಲೆ ಹಣ ಹಾಳಾಗಿ ಹೋಗುತ್ತಾ ಇದೆ. ಅದಕ್ಕೆ ಒಂದು ನೀತಿ ನಿಯಮ ಇಲ್ಲ. ಈ ವಿಚಾರದಲ್ಲಿ ನೀವು ಕಮಿಷನ್ ನೇಮಕ ಮಾಡಿದ್ದೀರಿ, ಅದರ ರಿಪೋರ್ಟ್ ಬಂದು ಅನಂತರವೂ ಸಹ ಇನ್ನೂ ತನಕ ಸಂಬಂಧೀತರ ಮೇಲೆ ಕ್ರಮ ತೆಗೆದುಕೊಳ್ಳದೆ, ಅದು ಕಸದ ಬುಟ್ಟಿಗೆ ಹೋಗತಕ್ಕಂತಹ ಕಾರಣ ಇದೆ. ಇದೇ ಯಾರಾದರೂ ಒಬ್ಬ ಅಸೆಂಬ್ಲಿಯ ಜವಾನನಾಗಲಿ, ಅಥವಾ ಒಬ್ಬ ಕ್ಲರ್ಕ್ ಆಗಿರಲಿ ಅವನು ಸಣ್ಣ ತಪ್ಪು ಮಾಡಿದರೆ ತಾವುಗಳು ನೇರವಾಗಿ ಶಿಕ್ಷೆ ಮಾಡುವಂತಹ ಸಾಹಸಕ್ಕೆ ಕೈಹಾಕುತ್ತಿದ್ದೀರಿ. ಆದರೆ ಕೋಟಿಗಟ್ಟಲೆ ಹಣವನ್ನು ಅಧಿಕಾರದ ದುರುಪಯೋಗ ಮಾಡಿಕೊಂಡು, ತಮ್ಮ ಹದ್ದು ಮೀರಿ, ತನ್ನ ಹೆಸರಿನಲ್ಲಿ ಟ್ರಸ್ಟ್ ಮಾಡಿ, ಆ ಟ್ರಸ್ಟಿನ ಹಣವನ್ನು ದುರುಪಯೋಗ ಮಾಡಿದಂತಹ ವೈಸ್ ಚಾನ್ಸಲರ್‌ನ್ನು ಏನು ಮಾಡಿದ್ದೀರಿ? ಇನ್ನೂ ಮೇಲಕ್ಕೆ ಎತ್ತುವುದರೊಳಗೆ ಇದ್ದೀರೆ ಹೊರತು ಅವನ ಮೇಲೆ ಕ್ರಮ ತೆಗೆದುಕೊಳ್ಳುವ ವಿಚಾರದಲ್ಲಿ ಇಲ್ಲ.

ಕೇಂದ್ರ ಸರ್ಕಾರದಲ್ಲಿ ಸಮಗ್ರ ಶಿಕ್ಷಣ ಮಸೂದೆಯನ್ನು ತರಬೇಕೆಂದು ಪ್ರಧಾನ ಮಂತ್ರಿಗಳಾದಂಥ ಶ್ರೀಮಾನ್ ರಾಜೀವ್‌ಗಾಂಧಿಯವರು ಯೋಚನೆ ಮಾಡುತ್ತಿದ್ದಾರೆ. ಅವರು ಅಧಿಕಾರಕ್ಕೆ ಬಂದ ತಕ್ಷಣ ಶಿಕ್ಷಣಕ್ಕೆ ಹೆಚ್ಚು ಮಹತ್ವವನ್ನು ಕೊಟ್ಟಿದ್ದಾರೆ. ಉತ್ತಮ ಶಿಕ್ಷಣವನ್ನು ಕೊಡುವುದರಿಂದ ನಾವು ಈ ದೇಶದಲ್ಲಿ ಉತ್ತಮ ಭಾವೀ ಜನಾಂಗವನ್ನು ನಿರ್ಮಾಣ ಮಾಡಿದಂತೆ ಆಗುತ್ತದೆ. ನಾವು ಕೊಡತಕ್ಕಂಥ ಶಿಕ್ಷಣ ಜನರಿಗೆ ಮಾತ್ರ ಅಲ್ಲ, ಭಾವೀ ಜನಾಂಗದ ಅಭ್ಯುದಯಕ್ಕಾಗಿ ಇವರ ಅಭ್ಯುದಯವಾಗಬೇಕಾದರೆ ಸೂಕ್ತ ಶಿಕ್ಷಣವೇ ನಾಂದಿಯಾಗಿರಬೇಕು. ಈ ಕೆಲಸವನ್ನು ನಮ್ಮ ಮಾನ್ಯ ಶಿಕ್ಷಣ ಮಂತ್ರಿಗಳು ಮಾಡಬೇಕಾಗಿದೆ. ಇವತ್ತು ಅವರು ಯೂನಿವರ್ಸಿಟಿಗಳ ಲೆಕ್ಕ ಪತ್ರಗಳನ್ನು ಮತ್ತು ಯೂನಿವರ್ಸಿಟಿಗಳ ಆಡಳಿತಾತ್ಮಕದಲ್ಲಿ ಹೆಚ್ಚು ಅಭಿವೃದ್ಧಿಯನ್ನು ಮಾಡುವ ಸಲುವಾಗಿ ಒಂದು ತಿದ್ದುಪಡಿಯನ್ನು ತರಬೇಕಾಗಿತ್ತು. ಅಂತಹ ಒಂದು ತಿದ್ದುಪಡಿಯನ್ನು ತಾವು ತಂದಿದ್ದರೆ ನಿಜವಾಗಿಯೂ ಕೂಡ ನಾನು ಅದನ್ನು ಸ್ವಾಗತ ಮಾಡುತ್ತಿದ್ದೆ. ತಾವೀಗ ಏನು ಮಾಡಿದ್ದೀರಿ ಎಂದರೆ ಪ್ರೋ-ಚಾನ್ಸಲರ್ ಮತ್ತು ವೈಸ್-ಚಾನ್ಸಲರ್‌ಗಳನ್ನು ನೇಮಕ ಮಾಡುವಾಗ ಬೋರ್ಡ್‌ನಲ್ಲಿ ಸರ್ಕಾರದ ಪ್ರತಿನಿಧಿಗಳು ಇರಬಾರದೆಂದು ಹೇಳಿದ್ದೀರಿ. ಮತ್ತೊಂದು ಕಡೆ ಏನು ಹೇಳಿದ್ದೀರಿ ಎಂದರೆ ಕಾಲೇಜುಗಳ ನೊಂದಾವಣಿಗೆ ಯೂನಿವರ್ಸಿಟಿಗೆ ಕಾಗದ ಪತ್ರಗಳು ಬಂದಾಗ ಆ ಕಾಗದ ಪತ್ರಗಳನ್ನು ಸರ್ಕಾರದ ಕಡೆ

ಕಳುಹಿಸಿ ಕೊಡಬೇಕು, ಮತ್ತು ಸರ್ಕಾರ ರೆಕ್‌ಮೆಂಡ್ ಮಾಡಬೇಕೆಂದು ಇದೆ. ಇದು ಸರಿಯಾದ ಪದವಲ್ಲ. ಇದರ ಬದಲಾಗಿ ತಾವು ಡೈರೆಕ್ಷನ್ಸ್ ಎಂದು ಹೇಳಬಹುದಿತ್ತು. ವಿಶ್ವವಿದ್ಯಾನಿಲಯಗಳು ಸ್ವಾಯುತ್ತ ಸಂಸ್ಥೆಗಳು ಈ ಪ್ರಜಾಪ್ರಭುತ್ವದಲ್ಲಿ ಮಂತ್ರಿಗಳಾಗಿರತಕ್ಕಂಥವರು ಸಭೆಗೆ ಜವಾಬ್ದಾರರಾಗಿರತಕ್ಕಂಥಾದ್ದು ಅನಾವಶ್ಯಕವೇ? ಅಂಥಾದ್ದರಲ್ಲಿ ಸರ್ಕಾರಕ್ಕೆ ಕಾಗದ ಪತ್ರಗಳನ್ನು ವಿಶ್ವವಿದ್ಯಾನಿಲಯದವರು ಕಳುಹಿಸಿಕೊಟ್ಟು ಆ ನಂತರ ತಾವು ರೆಕ್‌ಮೆಂಡ್ ಅಥವಾ ನಾಟ್ ರೆಕ್‌ಮೆಂಡ್ ಮಾಡುವಂತಹ ಅಧಿಕಾರ ಇಟ್ಟುಕೊಂಡಿದ್ದೀರಿ. ಇದು ಬೇಕಾಗಿರಲಿಲ್ಲ. ನೀವು ಬರೀ ಅಫಿಲಿಯೇಷನ್ ಮಾತ್ರ ಇಟ್ಟುಕೊಳ್ಳಬಹುದಿತ್ತು. ವಿಶ್ವವಿದ್ಯಾನಿಲಯಗಳಲ್ಲಿ ಸೆನೆಟ್, ಸಿಂಡಿಕೇಟ್, ಸೇರಿ ಒಮ್ಮತಕ್ಕೆ ಬಂದು ಅದನ್ನು ಸರ್ಕಾರಕ್ಕೆ ಕೊಟ್ಟರೆ ಸರ್ಕಾರ ಮಾನ್ಯತೆ ಕೊಡುವುದು ಇತ್ತು. ಸರ್ಕಾರವನ್ನು ಕೇಳದೆ ಅವರು ಮಾನ್ಯತೆ ಮಾಡುವುದಕ್ಕೆ ಅಡ್ಡಿ ಇಲ್ಲ. ಆ ಅಧಿಕಾರ ತಾವೇತಕ್ಕೆ ಇಟ್ಟುಕೊಳ್ಳುತ್ತೀರಿ? ನೇರವಾಗಿ ಅಪ್ಲಿಕೇಷನ್ಸ್ ಕಳುಹಿಸಿಕೊಡುವಾಗ ಸರ್ಕಾರ ಏತಕ್ಕೆ ರೆಕಗ್ನೈಜ್ ಮಾಡಬೇಕು? ಅನೇಕ ಸಂದರ್ಭಗಳಲ್ಲಿ ತಮಗೆಲ್ಲರಿಗೂ ಗೊತ್ತಿರುವ ಹಾಗೆ ಕಾಲೇಜುಗಳಿಗೆ ಮಾನ್ಯತೆಯನ್ನು ಕೊಟ್ಟಿದ್ದಾರೆ. ವಿಶ್ವವಿದ್ಯಾನಿಲಯದವರು ಅನೇಕ ದರ್ಜೆಯ ಕಾಲೇಜುಗಳಿಗೆ ಮಾನ್ಯತೆಯನ್ನು ಕೊಟ್ಟಿದ್ದಾರೆ. ಈಗ ಬಿಜಾಪುರ ಜಿಲ್ಲೆಯಲ್ಲಿ ಬಿ.ಎಂ. ಪಾಟೀಲ್‌ರಂತಹವರು ಉತ್ತಮವಾದಂಥ ಸೇವೆಯನ್ನು ವಿದ್ಯಾ ಕ್ಷೇತ್ರದಲ್ಲಿ ಸಲ್ಲಿಸುತ್ತಿದ್ದಾರೆ. ಅವರು ಮೆಡಿಕಲ್ ಕಾಲೇಜು ಬೇಕೆಂದು ಕೇಳಿದರೆ ಅವರಿಗೆ ಸರ್ಕಾರದವರು ಮಾನ್ಯತೆ ಕೊಡಲಿಲ್ಲ. ಇದಕ್ಕೆ ಕಾರಣ ಕೇಳಿದಾಗ ಹೈಕೋರ್ಟಿನವರು ನಮಗೆ ಸೂಚನೆ ಕೊಟ್ಟಿದ್ದಾರೆಂದು ಹೇಳಿದರು. ತಾವು ಹೈಕೋರ್ಟಿನ ಪ್ರಕಾರ ಕೆಲಸ ಮಾಡುತ್ತೀರಾ? ಆಮೇಲೆ ಮೆಡಿಕಲ್ ಕಾಲೇಜ್‌ಗಳನ್ನು ಕೊಟ್ಟಿದ್ದೀರಿ. ನಾನು ಒಂದಾನೊಂದು ಕಾಲದಲ್ಲಿ ಒಂದು ಆರ್ಟ್ಸ್ ಕಾಲೇಜು ತೆಗೆಯಬೇಕೆಂದು ವಿಶ್ವಪ್ರಯತ್ನ ಮಾಡಿದೆ. ಆದರೆ ಅದೇ ಪರಿಸ್ಥಿತಿ ಇವೊತ್ತು ಇಲ್ಲ. ಹಿಂದೆ ಇದ್ದಂಥವರ ಮನಸ್ಸಿನಲ್ಲಿ ಏನಿತ್ತು ಎಂದರೆ ಕೆ.ಹೆಚ್. ಪಾಟೀಲರಿಗೆ ಆರ್ಟ್ಸ್ ಕಾಲೇಜು ತೆಗೆಯುವುದಕ್ಕೆ ಅವಕಾಶ ಕೊಟ್ಟರೆ ಆ ಜನಾಂಗದ ಅಭಿವೃದ್ಧಿಯಾಗಿ ಬಿಡುತ್ತದೆಂದು ತಿಳಿದು ನಾನು ಕಾಲೇಜು ತೆಗೆಯುವುದಕ್ಕೆ ಅವಕಾಶ ಕೊಡಲಿಲ್ಲ. ಆಗ ಇದ್ದಂಥ ಪರಿಸ್ಥಿತಿ ಇವೊತ್ತು ಇಲ್ಲ. ಈ ಕಾಲೇಜುಗಳನ್ನು ಕೊಡುವುದು ಈಗ ಯೂನಿವರ್ಸಿಟಿಗೆ ಇಲ್ಲ. ಯೂನಿವರ್ಸಿಟಿಗಳಲ್ಲಿ ರಾಜಕೀಯ ಹಸ್ತಕ್ಷೇಪಗಳು ಬರಬಾರದು. ಯೂನಿವರ್ಸಿಟಿ ಎನ್ನುವುದು ಒಂದು ದೇಗುಲವಿದ್ದಂತೆ. ಆ ದೇಗುಲದಲ್ಲಿರುವ ದೇವರನ್ನು ಹೊರಗೆ ಕಳುಹಿಸಿಕೊಡುವ ಮಟ್ಟಕ್ಕೆ ಇವೊತ್ತು ನಾವು ಬಂದಿದ್ದೇವೆ. ಈಗ ನಾವು ವೈಸ್ ಚಾನ್ಸಲರ್ ಹುದ್ದೆಯನ್ನು ನಾಮಿನೇಟ್ ಮಾಡುವ ಮೂಲಕ ಮಾಡುತ್ತೇವೆ. ಅವರಿಗೆ ಒಂದು ವಿಶೇಷವಾದಂಥ ಸ್ವಾಯತ್ತತೆಯನ್ನು ಕೊಟ್ಟಿದ್ದೇವೆ. ಸರ್ಕಾರದ ಪ್ರತಿನಿಧಿಗಳು ಬೋರ್ಡಿನಲ್ಲಿ ಇರುವುದಿಲ್ಲವೆಂದು ಹೇಳಿದ್ದೀರಿ. ಆದರೆ ವಿಶ್ವವಿದ್ಯಾನಿಲಯಗಳಿಗೆ ವೈಸ್ ಚಾನ್ಸಲರ್ ಅನ್ನು ನಾಮಿನೇಟ್ ಮಾಡುತ್ತೀರಿ ಜೊತೆಗೆ ಚಾನ್ಸಲರ್ ಇಲ್ಲದೆ ಇರುವಾಗ ಕಾನ್ವೋಕೇಷನ್ ಸಲುವಾಗಿ ಒಬ್ಬ ಪ್ರೋ-ಚಾನ್ಸಲರ್ ನೇಮಕ ಮಾಡುತ್ತಿದ್ದೀರಿ. ಇವರು ಆ ವ್ಯವಹಾರ ನೋಡಿಕೊಳ್ಳುತ್ತಾರೆ. ಅವರು ಅಕ್ಸೆಪ್ಟ್ ಮಾಡಿದಂಥಾದ್ದು ಅನುಕೂಲವಾಗಬೇಕು. ಈ ದೃಷ್ಟಿಯಿಂದ ತಾವು ದೀರ್ಘವಾಗಿ ಯೋಚನೆ ಮಾಡಿ. ನಾನು ಈ ತಿದ್ದುಪಡಿಯನ್ನು ಸ್ವಾಗತ ಮಾಡುತ್ತೇನೆ. ಬಹುಶಃ ಕೇಂದ್ರ ಸರ್ಕಾರದ ಶಿಕ್ಷಣ ಸಚಿವರ ರೂಪುರೇಷೆಗಳ ಉಲ್ಲೇಖದಂತೆ ಇದನ್ನು ತರಲಾಗಿದೆ ಎಂದು ಕೇಳಿದ್ದೇನೆ. ಇಂತಹ ಒಂದು ಸಲಹೆಯ ಅವಶ್ಯಕತೆ ಇತ್ತು. ಇದರ ಜೊತೆಗೆ ಫೈನಾನ್‌ಷಿಯಲ್ ಕಂಟ್ರೋಲ್ ಅನ್ನು ಸೇರಿಸಿದರೆ ನಾನು ಬಹಳ ಮೆಚ್ಚಿಕೊಳ್ಳುತ್ತಿದ್ದೆ. ಯೂನಿವರ್ಸಿಟಿಗಳಲ್ಲಿ ಹಣವನ್ನು ಅಥವಾ ಗ್ರ್ಯಾಂಟ್ ಅನ್ನು ಹಂಗಿನಲ್ಲಿ ಖರ್ಚು ಮಾಡುವಂತಹ ರೀತಿಯಲ್ಲಿ ಖರ್ಚು ಮಾಡುತ್ತಿದ್ದಾರೆ. ಈಗ ಮೈಸೂರು ಯೂನಿವರ್ಸಿಟಿಯಲ್ಲಿ ಜ್ಯೂಬಿಲಿ ಉತ್ಸವವನ್ನು ಆಚರಣೆ ಮಾಡಿದರು. ಆ ಸಂದರ್ಭದಲ್ಲಿ ಲಕ್ಷಾಂತರ ರೂಪಾಯಿಗಳ ಗ್ರ್ಯಾಂಟ್ ಅನ್ನು ಗ್ರಾಂಟ್ ಮಾಡಿ ಒಬ್ಬ ಮಾನ್ಯ ಸದಸ್ಯರ ಹೆಸರಿನಲ್ಲಿ ಟ್ರಸ್ಟ್ ಮಾಡಿ ಆ ಟ್ರಸ್ಟ್‌ನಲ್ಲಿ ಅವರೊಬ್ಬರೆ ಕಾರುಬಾರು ನಡೆಸುವಂತೆ ಮಾಡಿಟ್ಟರು. ಅವರು ಈಗ ಆರಾಮವಾಗಿ ಆ ಹಣವನ್ನು ಖರ್ಚು ಮಾಡುತ್ತಿದ್ದಾರೆ. ಆಮೇಲೆ ಆ ಯೂನಿವರ್ಸಿಟಿಯಲ್ಲಿ ಓದಿದಂಥವರು ಹೊರಗಡೆ ರಾಜ್ಯಗಳಲ್ಲಿ ಅಂದರೆ ಬೊಂಬಾಯಿ ಅಥವಾ ಬೇರೆ ಕಡೆ ಇದ್ದರೆ ಅವರು ಏತಕ್ಕೆ ಪದವೀಧರರಿಗೆ ಮತ ಚಲಾವಣೆ ಮಾಡುವುದಕ್ಕೆ ಅವಕಾಶ ಇಲ್ಲ. ಇದರಿಂದ ಒಂದು ಜಿಜ್ಞಾಸೆ ಉಂಟಾಗಿತ್ತು.

ಶ್ರೀ ಎಂ. ರಘುಪತಿ.—ಆ ಪದ್ಧತಿ ಈಗಲೂ ಇದೆ. ಅವರು ಎಲ್ಲಿಯೋ ಇದ್ದರೂ ಸಹ ಮತ ಚಲಾವಣೆ ಮಾಡಬಹುದು.

ಶ್ರೀ ಕೆ.ಹೆಚ್. ಪಾಟೀಲ್.—ಬದಲಾವಣೆಯಾಗಿದೆಯೋ ಏನೋ ಗೊತ್ತಿಲ್ಲ. ಇದ್ದರೆ ಒಳ್ಳೆಯದು ಇಲ್ಲಿ ನಮ್ಮ ಪಕ್ಷ ನಿಮ್ಮ ಪಕ್ಷ ಎನ್ನುವುದು ಬರುವುದಿಲ್ಲ. ಎರಡು ವರ್ಷಗಳ ಕಾಲ ಕರ್ನಾಟಕ ರಾಜ್ಯದಲ್ಲಿಯೇ ವಾಸ ಮಾಡಿರಬೇಕೆಂದು ಏನೋ ಒಂದು ಅವಕಾಶ ಇದೆ. ಆ ಒಂದು ಅಧಿಕಾರ ಇಲ್ಲದಿದ್ದರೆ ಬಹುಪಾಲು ಜನರಿಗೆ ಅನ್ಯಾಯ ಮಾಡಿದಂತೆ ಆಗುತ್ತದೆ. ಒಂದು ವೇಳೆ ಅದು ಇಲ್ಲದಿದ್ದರೆ ಈಗಲೂ ಸಹ ತಿದ್ದುಪಡಿ ಮಾಡಿ. ಇನ್ನು ಯೂನಿವರ್ಸಿಟಿ ಪರೀಕ್ಷೆಗಳಲ್ಲಿ ಎಗ್ಸಾಮಿನರ್ಸ್ ಇತರೆ ಜನರ ನಡುವೆ ಘಟನಾವಳಿಗಳು ನಡೆದು ಕೌಂಟರ್ ಫೈಟ್ ನಡೆದಿರುವುದನ್ನು ನೋಡಿದ್ದೇವೆ. ಎಲ್ಲಾ ಕಡೆ ವೈಸ್ ಚಾನ್ಸಲರ್ ನೇರವಾಗಿ ಹೋಗಿ ನೋಡಿಕೊಳ್ಳುವುದಕ್ಕೆ ಆಗುವುದಿಲ್ಲ. ಶ್ರೀಮಾನ್ ನಂಜುಂಡಪ್ಪನವರು ವೈಸ್ ಚಾನ್ಸಲರ್ ಆಗಿದ್ದರು. ಅವರು ಉತ್ತಮ ಕೆಲಸ ಮಾಡಿದ್ದಾರೆ. ಅವರ ಸೇವೆಯನ್ನು ಯಾರೂ ಮರೆಯುವಂತೆ ಇಲ್ಲ. ಅವರು ಪರೀಕ್ಷೆಗಳ ಸಮಯದಲ್ಲಿ ಪರೀಕ್ಷೆಗಳನ್ನು ಕಾಲಕ್ಕೆ ಸರಿಯಾಗಿ ನಡೆಸುತ್ತಿದ್ದರು. ಪರೀಕ್ಷೆಗಳನ್ನು ಮುಂದಕ್ಕೆ ಹಾಕುತ್ತಿರಲಿಲ್ಲ. ಅದಕ್ಕೆ ಕೆಲವು ಜನ ಚಳುವಳಿಗಳನ್ನು ಮಾಡುತ್ತಿದ್ದರು.

ಅದಕ್ಕಾಗಿ ಮಾನ್ಯ ಅಧ್ಯಕ್ಷರೇ, ಈ ಪರೀಕ್ಷೆಯಲ್ಲಿ ಆಗತಕ್ಕಂಥ ಪ್ರಮಾದಗಳಿಗೆ ವೈಸ್ ಚಾನ್ಸಲರ್‌ರವರನ್ನೇ ಗುರಿ ಮಾಡಿದರೂ ಅದು ಹೆಚ್ಚು ಸಮರ್ಪಕವಾಗಿ ಕಾಣುತ್ತದೆ. ಅದಕ್ಕಿಂತ ಒಂದು ಹೆಜ್ಜೆ ಮುಂದೆ ಹೋಗಿ ನಾನು ಹೇಳುತ್ತಿದ್ದೇನೆ, ಎಲ್ಲಾದರೂ ಇಂತಹ ಘಟನೆಗಳು ಘಟಿಸಿದರೆ ಅದಕ್ಕೆ ಮಾನ್ಯ ವಿದ್ಯಾ ಸಚಿವರು ರಾಜೀನಾಮೆ ಕೊಡಬೇಕೆಂದು ಹೇಳುತ್ತೇನೆ. ಹಿಂದೆ ಈ ರೀತಿ ನಡೆದಿದೆ, ಎಲ್ಲೋ ರೈಲ್ ಗಾಡಿ ಬಿದ್ದರೆ ಮಾನ್ಯ ಲಾಲ್‌ಬಹದ್ದೂರ್ ಶಾಸ್ತ್ರಿಯವರು ರಾಜೀನಾಮೆ ಕೊಟ್ಟರು. ಆ ಒಂದು ತತ್ವವನ್ನು ನಡೆಸಿಕೊಂಡು ಹೋಗುವುದಕ್ಕಾಗಿ ಅವರು ರಾಜೀನಾಮೆ ಕೊಟ್ಟರು. ಅವರೇನೂ ಆ ಗಾಡಿಯ ಡ್ರೈವರ್ ಆಗಿರಲಿಲ್ಲ, ಕ್ಲೀನರ್ ಆಗಿರಲಿಲ್ಲ. ಈ ದೃಷ್ಟಿಯಿಂದ ಇವೊತ್ತು ವಿಶ್ವವಿದ್ಯಾಲಯಗಳಿಗೆ ಸ್ವಾಯತ್ತತೆ ಕೊಟ್ಟಿರುವಾಗ ಅದರ ಹೆಡ್ ಯಾರು ಎಂದರೆ ವೈಸ್ ಚಾನ್ಸಲರ್. ಪ್ರೊಚಾನ್ಸಲರ್ ಮತ್ತು ಚಾನ್ಸಲರ್‌ರವರು ಇದ್ದರೂ ಅವರು ನಿಮಿತ್ತ ಮಾತ್ರವಾಗಿ ಇರುತ್ತಾರೆಯೇ ವಿನಃ ಸಂಪೂರ್ಣವಾದ ಅಧಿಕಾರ ವೈಸ್ ಚಾನ್ಸಲರ್‌ರವರಿಗೆ ಇದೆ. ಆದಕಾರಣ ಇದಕ್ಕೆ ಹೆಚ್ಚು ಲಕ್ಷ್ಯ ಕೊಡಬೇಕು. ನಿಮ್ಮ ಅಮೆಂಡ್‌ಮೆಂಟ್‌ನಲ್ಲಿ ಈ ಸೆನೆಟ್ ಮತ್ತು ಸಿಂಡಿಕೇಟ್‌ಗಳಲ್ಲಿ ಎಂತೆಂತಹ ಜನ ಇರಬೇಕೆನ್ನುವುದರ ಬಗ್ಗೆ ಉಲ್ಲೇಖವನ್ನು ಇಲ್ಲಿ ಮಾಡಿರುತ್ತೀರಿ. ಸಿಂಡಿಕೇಟ್ ಮತ್ತು ಸೆನೆಟ್‌ಗಳಲ್ಲಿ ಇನ್ನಾದರೂ ನೌಕರ ವರ್ಗದವರಿಗಾಗಲೀ, ಷೆಡ್ಯೂಲ್ಡ್ ಕ್ಯಾಸ್ಟ್, ಷೆಡ್ಯೂಲ್ಡ್ ಟ್ರೈಬ್‌ನವರಿಗೆ, ಯೋಗ್ಯವಾದ ಪ್ರಾತಿನಿಧ್ಯ ಕೊಡುತ್ತೇವೆ ಎಂದು ಅಮೆಂಡ್‌ಮೆಂಟ್ ತಂದಿರುತ್ತೀರಿ. ಇದು ನಿಜವಾಗಿಯೂ ಸ್ವಾಗತಾರ್ಹವಾಗಿ ಇದೆ.

ಅದೂ ಅಲ್ಲದೆ ಮಾನ್ಯ ಸಭಾಧ್ಯಕ್ಷರೇ, ಈ ಯೂನಿವರ್ಸಿಟೀಸ್ ಹೇಗೆ ಕಾರ್ಯ ಮಾಡುತ್ತವೆ ಎಂಬುದನ್ನು ತಾವು ನೋಡಬೇಕು. ಅನೇಕ ಕಾಲೇಜುಗಳಿಗೆ ಮೂರು ನಾಲ್ಕು ವರ್ಷ ಮುಗಿದಮೇಲೆ, ಆ ಕಾಲೇಜುಗಳಿಗೆ ಒಂದು ಪರ್ಮನೆಂಟ್ ರೆಕಗ್ನಿಷನ್ ಕೊಡಬೇಕು ಆದರೆ ಈ ರೀತಿ ಪರ್ಮನೆಂಟ್ ರೆಕಗ್ನಿಷನ್ ಕೊಡಲಾರದಂಥ ಕಾಲೇಜುಗಳು ಯೂನಿವರ್ಸಿಟಿ ಕಕ್ಷೆಯೊಳಗೆ ಎಷ್ಟು ಇವೆ? ಅವು ಅದೇ ರೀತಿ ಇವೆ, ಇದರ ಬಗ್ಗೆ ಯಾವ ತರಹದ ಉಲ್ಲೇಖವೂ ಇಲ್ಲಿ ಇಲ್ಲ. ಯೂನಿವರ್ಸಿಟಿ ಗ್ರಾಂಟ್ಸ್ ಕಮಿಷನ್ ಕಾಲೇಜುಗಳಿಗೆ ಹೇರಳವಾಗಿ ಹಣವನ್ನು ಕೊಡುತ್ತಿದೆ. ಈ ಹಣವನ್ನು ಯಾರಿಗೆ ಕೊಡುತ್ತಿದೆ ಎಂದರೆ ಯಾವುವು ಸಂಪೂರ್ಣವಾಗಿ ರೆಕಗ್ನೈಸ್ ಆಗಿವೆ ಆ ಇನ್‌ಸ್ಟಿಟ್ಯೂಷನ್ಸ್‌ಗೆ ಮಾತ್ರ ಇವರು ಕೊಡುತ್ತಾರೆ. ನೀವು ಗ್ರಾಂಟ್ ಕೊಡಲು ಹಣ ಇಲ್ಲ ಎಂದು ಮುಂದಕ್ಕೆ ಹಾಕಬಹುದು, ಆದರೆ ಯೂನಿವರ್ಸಿಗೆ ರೆಕಗ್ನಿಷನ್ ಕೊಡುವುದಕ್ಕೆ ತೊಂದರೆ ಏನಿದೆ? ಅವರಿಗೆ ಲೈಬ್ರರಿ ಕಟ್ಟುವುದಕ್ಕೆ, ಸೈಂಟಿಫಿಕ್ ಇನ್‌ಸ್ಟಿಟ್ಯೂಷನ್ ಕಟ್ಟಲಿಕ್ಕೆ, ಯೂನಿವರ್ಸಿಟಿ ಗ್ರಾಂಟ್ ಕಮಿಷನ್‌ನವರು ಕೊಡಮಾಡಿದ ಹಣವನ್ನು ಸಾಗಿಸಲಿಕ್ಕೆ ತೊಂದರೆ ಏನು? ಇಂತಹ ನಿಯಮಗಳನ್ನು ರಚನೆ ಮಾಡಿ, ವಿಹಿತವಾಗಿ ಇದನ್ನು ಮಾಡಿದ್ದರೆ ಚನ್ನಾಗಿತ್ತು, ಅದನ್ನು ಮಾಡಲಿಲ್ಲ. ಇನ್ನಾದರೂ ತಾವು ಅದನ್ನು ಮಾಡಬೇಕು. ಯೂನಿವರ್ಸಿಟಿ ವಿಷಯವಾಗಿ ಎಷ್ಟು ಮಾತನಾಡಿದರೂ ಕಡಿಮೆ ಇದೆ. ಇವರಲ್ಲಿ ಇರತಕ್ಕಂಥ ಅನೇಕ ಕಮಿಟಿಗಳು ಇವೆ. ಅಕಾಡೆಮಿಕ್ ಕೌನ್ಸಿಲ್ ಎಂದು ಇದೆ, ಅಡ್ಮಿನಿಸ್ಟ್ರೇಟೀವ್ ಕೌನ್ಸಿಲ್ ಎಂದು ಇದೆ, ಬೇರೆ ಬೇರೆ ವಿಧವಾದ ಅನೇಕ ಕಮಿಟಿಗಳು ಇವೆ. ಇನ್‌ಸ್ಪೆಕ್ಷನ್ ಮೆಂಬರ್ಸ್ ಎಂದು ಮಾಡಿದ್ದಾರೆ. ಇವರು ಬಂದು ಇನ್‌ಸ್ಪೆಕ್ಷನ್ ಮಾಡುತ್ತಾ ಇರುತ್ತಾರೆ. ಇವರು ಇನ್‌ಸ್ಪೆಕ್ಷನ್ ಒಳಗೆ ಏನು ಮಾಡುತ್ತಾರೆ ಎಂದರೆ, ಇವರು ಈ ರೀತಿ ಬರೆಯುತ್ತಾರೆ. ''ಕೃಷಿ'' ಕಾಲೇಜಿನಲ್ಲಿ ಈ ವರ್ಷ ೨೦ ಲಕ್ಷ

ರೂಪಾಯಿಗಳನ್ನು ಹೆಚ್ಚಾಗಿ ಬಿಲ್ಡಿಂಗ್‌ಗೆ ಖರ್ಚು ಮಾಡಬೇಕು. ಹತ್ತು ಲಕ್ಷ ರೂಪಾಯಿಗಳನ್ನು ಹೆಚ್ಚು ಪುಸ್ತಕಕ್ಕೆ ಖರ್ಚು ಮಾಡಬೇಕು, ಎಂದು ಬರೆಯುತ್ತಾರೆ. ಆದರೆ ಯಾವ ಬಿಲ್ಡಿಂಗ್ ಯಾವ ಪುಸ್ತಕ ಎಂದು ಇವರಿಗೇ ಗೊತ್ತಿರುವುದಿಲ್ಲ. ಇವತ್ತಿಗೂ ಸಹ ಒಂದು ಪರ್ಮನೆಂಟ್ ಸಿಲಿಬಸ್ ಕರ್ನಾಟಕದಲ್ಲಿ ಇಲ್ಲ. ನೀವು ತಯಾರು ಮಾಡತಕ್ಕ ವಿದ್ಯಾರ್ಥಿ ವಿದ್ಯಾರ್ಥಿನಿಯರು ಒಂದೇ ಸರಕಾರದ ಕಕ್ಷೆಯೊಳಗೆ ಬರುತ್ತಿದ್ದಾರೆ, ಒಂದೇ ಸರ್ಕಾರದ ಹಿಡಿತದಲ್ಲಿ ಬರುತ್ತಿದ್ದಾರೆ, ಒಂದೇ ತರಹ ನೌಕರಿಯನ್ನು ಅಪೇಕ್ಷೆ ಮಾಡುತ್ತಾ ಇರುತ್ತಾರೆ. ಆದರೆ ಬೆಂಗಳೂರಿನಲ್ಲಿರತಕ್ಕ ಸಿಲಿಬಸ್ ಮೈಸೂರಿನಲ್ಲಿ ಇಲ್ಲ, ಮೈಸೂರಿನಲ್ಲಿ ಇರತಕ್ಕದ್ದು ಗುಲ್ಬರ್ಗಾದಲ್ಲಿ ಇಲ್ಲ, ಗುಲ್ಬರ್ಗಾದಲ್ಲಿ ಇರತಕ್ಕದ್ದು ಮಂಗಳೂರಿನಲ್ಲಿ ಇಲ್ಲ, ಮಂಗಳೂರಿನಲ್ಲಿ ಇರತಕ್ಕದ್ದು ಕರ್ನಾಟಕದಲ್ಲಿ ಇಲ್ಲ, ಈ ರೀತಿ ಆಗಿದೆ. ಒಂದೊಂದು ಯೂನಿವರ್ಸಿಟಿಯಲ್ಲಿ ಒಂದೊಂದು ತಾರತಮ್ಯ ಇದೆ. ಹೀಗಾದರೆ ಶಿಕ್ಷಣ ಹೇಗಾಗಬೇಕು? ನೀವು ಕರ್ನಾಟಕ ಯೂನಿವರ್ಸಿಟಿ ಕಕ್ಷೆಯಲ್ಲಿರತಕ್ಕಂಥ ಕಾಲೇಜಿನಲ್ಲಿರುವ ವ್ಯಕ್ತಿಯನ್ನು ಮೈಸೂರಿಗೋ, ಬೆಂಗಳೂರಿಗೋ ಟ್ರಾನ್ಸ್‌ಫರ್ ಮಾಡಿದರೆ ಅವನ ಕಥೆ ದೇವರಿಗೆ ಗೊತ್ತು. ಅಲ್ಲಿ ಅವನಿಗೆ ಸಿಕ್ಕಿದಂಥ ಶಿಕ್ಷಣದ ರೀತಿ ನೀತಿಗಳು ಬೇರೆ. ಇಲ್ಲಿಯ ಶಿಕ್ಷಣದ ರೀತಿನೀತಿಗಳು ಬೇರೆ ನೀವು ಸುಮ್ಮನೆ ಕನ್ನಡ ಕನ್ನಡ ಎಂದು ಹೇಳಿಕೊಂಡು ಪಾಟೀಲ ಪುಟ್ಟಪ್ಪನವರನ್ನು ಕಾವಲುಗಾರರನ್ನಾಗಿ ನೇಮಿಸಿದ್ದೀರಿ. ನಿಜವಾಗಿ ಶಿಕ್ಷಣದ ಮಟ್ಟವನ್ನು ಎತ್ತುವ ರೀತಿಯಲ್ಲಿ ಕರ್ನಾಟಕದ ಕನ್ನಡ ಸರ್ಕಾರ ಏನು ಮಾಡಿದೆ ಎಂದು ಕೇಳುತ್ತಿದ್ದೇನೆ. ಮಾನ್ಯ ಅಧ್ಯಕ್ಷರೆ, ಇವತ್ತಿನವರೆಗೂ ಸಹ ಯಾವ ಯಾವ ಶಿಕ್ಷಣ ಸಂಸ್ಥೆಗಳಲ್ಲಿ ಏನೇನು ಪುಸ್ತಕಗಳನ್ನು ಇಡಬೇಕು, ಏನು ಲೈಬ್ರರಿ ಇಡಬೇಕು, ಯಾವ ರೀತಿಯ ಉಪಕರಣಗಳನ್ನು ಇಡಬೇಕು ಎಂಬ ಕಾಮನ್‌ಲಿಸ್ಟ್ ಇನ್ನೂ ಇಲ್ಲ. ಇದಕ್ಕೆ ಒಂದು ಕಾಮನ್ ಲಿಸ್ಟ್ ಮಾಡದೇ ಹೋದರೆ ಶಿಕ್ಷಣದ ಮಟ್ಟ ಎಲ್ಲಿಗೆ ಹೋಗುತ್ತದೆ. ತಾವು ಅನೇಕ ಸಲ ಭಾಷಣಗಳಲ್ಲಿ ಹೇಳುತ್ತಿರುತ್ತೀರಿ. ಯಾವುದಾದರೂ ಕಾಲೇಜಿನವರು, ಶಿಕ್ಷಣ ಮಟ್ಟವನ್ನು ಕಡಿಮೆ ಮಾಡಿದರೆ, ನಿಜವಾದ ಮಟ್ಟವನ್ನು ಎತ್ತಿ ಹಿಡಿಯದಿದ್ದರೆ, ಆ ಕಾಲೇಜನ್ನು ನಾನು ರದ್ದುಗೊಳಿಸುತ್ತೇನೆ, ಆ ಕಾಲೇಜನ್ನು ನಾನು ಸರ್ಕಾರದ ವಶಕ್ಕೆ ತೆಗೆದುಕೊಳ್ಳುತ್ತೇನೆ ಎಂದು ಹೇಳುತ್ತೀರಿ. ಹಾಗಾದರೆ ಈ ಯೂನಿವರ್ಸಿಟಿಗಳನ್ನು ಯಾರ ವಶಕ್ಕೆ ತೆಗೆದುಕೊಳ್ಳುತ್ತೀರಿ? ನಾನು ನೇರವಾಗಿ ಪ್ರಶ್ನೆ ಮಾಡುತ್ತೇನೆ. ಇವತ್ತು ನಮ್ಮ ರಾಜ್ಯದಲ್ಲಿ ಎಂಜಿನಿಯರಿಂಗ್ ಕಾಲೇಜುಗಳು ಇವೆ. ಅಲ್ಲಿ ಟೆಕ್ಸ್‌ಟೈಲ್ ಎಂಜಿನಿಯರಿಂಗ್ ಇದೆ, ಕೆಮಿಸ್ಟ್ರಿ ಇದೆ, ಕಂಪ್ಯೂಟರೈಸೇಷನ್ ಕೋರ್ಸ್ ಇವೆ, ಇವೆಲ್ಲಾ ಕೋರ್ಸ್‌ಗಳಿಗೆ, ಇವತ್ತು ನೀವು ಯಾವ ಪುಸ್ತಕಗಳನ್ನಾಗಲೀ, ಅಥವಾ ಮೆಷಿನರಿಗಳನ್ನಾಗಲೀ, ಅಥವಾ ಇತರೇ ಎಕ್ವಿಪ್‌ಮೆಂಟ್ಸ್‌ಗಳನ್ನಾಗಲೀ, ಇಡುವುದಕ್ಕೆ ನಿಮ್ಮಲ್ಲಿ ಒಂದು ಸ್ಟ್ಯಾಂಡರ್ಡ್ ಲಿಸ್ಟ್ ಇಲ್ಲ. ನಾನು ಇದರ ಬಗ್ಗೆ ಸತತವಾಗಿ ಸರ್ಕಾರಕ್ಕೆ ಬರೆಯುವುದಕ್ಕೆ ಹತ್ತಿದ್ದೇನೆ. ಹಿಂದೆ ೧೯೪೯ರಲ್ಲಿ ತಯಾರು ಮಾಡಿದಂಥ ಲಿಸ್ಟನ್ನು ಫಾಲೋ ಮಾಡುತ್ತಿದ್ದಾರೆ. ನಿಮ್ಮಲ್ಲಿ ಯಾವುದೂ ಇಲ್ಲ. ಇದರ ಬಗ್ಗೆ ತಮಗೆ ಭಿನ್ನಹ ಮಾಡುತ್ತೇನೆ. ಇಂತಹದನ್ನು ನೀವು ತೀವ್ರವಾಗಿ ತರಿಸಿ, ಸೆಲೆಕ್ಟ್ ಲಿಸ್ಟ್ ಅಥವಾ ಕಾಮನ್ ಲಿಸ್ಟ್ ಮಾಡಬೇಕು, ಆರ್ಟ್ಸ್ ಕಾಲೇಜಿಗೆ ಏನು ಮಾಡಬೇಕು, ಸೈನ್ಸ್ ಕಾಲೇಜಿಗೆ ಏನು ಮಾಡಬೇಕು, ಎಂಜಿನಿಯರಿಂಗ್ ಕಾಲೇಜಿಗೆ ಏನು ಮಾಡಬೇಕು, ಮೆಡಿಕಲ್ ಕಾಲೇಜಿಗೆ ಏನು ಮಾಡಬೇಕು, ಇದನ್ನು ಮಾಡಬೇಕು. ಇವತ್ತು ಮೆಡಿಕಲ್ ಕಾಲೇಜಿಗೆ ಲೈಸೆನ್ಸ್ ಕೊಡುತ್ತಿದ್ದೀರಿ. ಮೆಡಿಕಲ್ ಕಾಲೇಜುಗಳು ಇವತ್ತು ನಿಮ್ಮ ಹಾಸ್ಪಿಟಲ್‌ಗಳನ್ನು ಅವಲಂಬಿಸಿವೆ. ಗೌರ್ನಮೆಂಟ್ ಹಾಸ್ಪಿಟಲ್ ಎಂದರೆ ದೇವರೇ ಗತಿ. ಬಳ್ಳಾರಿಯಿಂದ ಬಂದವರೊಬ್ಬರು ಹೇಳುತ್ತಿದ್ದರು, ಬಳ್ಳಾರಿ ಹಾಸ್ಪಿಟಲ್ ಎಷ್ಟೋ ಸ್ವಚ್ಛ ಇದೆ, ಬೆಂಗಳೂರು ಹಾಸ್ಪಿಟಲ್ ಸ್ವಚ್ಛ ಇಲ್ಲ. ಹೊಲಸು ವಾಸನೆ ಆಗಲಿಕ್ಕೆ ಹತ್ತಿದೆ ಎಂದು, ಇಂತಹ ಸಂಸ್ಥೆಗಳನ್ನು ನಮ್ಮ ಮುಂದಿನ ಜನರ ಕೈಯೊಳಗೆ ಕೊಟ್ಟರೆ, ನಮ್ಮ ಶಿಕ್ಷಣದ ಮಟ್ಟ ಯಾವ ರೀತಿ ಆಗುತ್ತದೆ ಎಂಬ ಬಗ್ಗೆ ಶಿಕ್ಷಣ ಸಚಿವರು ಗಮನ ಹರಿಸಬೇಕು. ಇದು ಹೆಲ್ತ್ ಡಿಪಾರ್ಟ್‌ಮೆಂಟ್‌ದು ಎಂದು ಹೇಳುವುದಲ್ಲ, ಬೇಸಿಕ್ ಆಗಿ ಇದು ಎಜುಕೇಷನ್ ಮಿನಿಸ್ಟರ್‌ಗೆ ಸಂಬಂಧಪಟ್ಟಿದ್ದು. ಈ ದೃಷ್ಟಿಯಿಂದ ಇಷ್ಟೊತ್ತು ಯಾರು ಇದರ ಬಗ್ಗೆ ನಿಗಾವಹಿಸುವುದಕ್ಕೆ ತಪ್ಪಿರುವವರು ಎಂದರೆ, ಯೂನಿವರ್ಸಿಟಿಯವರು. ನೀವು ಅವರಮೇಲೆ ಯಾವ ಕ್ರಮ ತೆಗೆದುಕೊಂಡಿದ್ದೀರಿ, ಎಂದರೆ ಅದನ್ನು ಹೇಳುವುದಕ್ಕೆ ನೀವು ತಯಾರಾಗಿಲ್ಲ. ಸಿಂಡಿಕೇಟ್ ಮೀಟಿಂಗ್‌ನಲ್ಲಿ ಇದು ಚರ್ಚೆ ಆಗಬೇಕು. ಇದೊಂದು ಬಿಟ್ಟು ಉಳಿದದ್ದು ಎಲ್ಲಾ ನಡೆಯುತ್ತಿದೆ. ವಿದ್ಯಾರ್ಥಿಗಳನ್ನು ಸೆನೆಟ್‌ಗೆ ಹಾಕಿದ್ದೀರಿ. ಬಹಳ ಸಂತೋಷ. ಯಾವ ಉದ್ದೇಶದಿಂದ ಇವರನ್ನು ಹಾಕಿದ್ದೀರಿ. ಸೆನೆಟ್, ಸಿಂಡಿಕೇಟ್‌ಗೆ ವಿದ್ಯಾರ್ಥಿಗಳನ್ನು ಹಾಕುವುದರಿಂದ ನೀವು ಸಾಧಿಸುವ ಫಲಿತಾರ್ಥ ಏನು? ಯಾರು ಶಿಕ್ಷಣದಲ್ಲಿ ಅತ್ಯಂತ ಆತುರತೆ ವಹಿಸಿ, ಹೆಚ್ಚು ಮನಸಿಟ್ಟು ಅಭ್ಯಾಸ

ಮಾಡುತ್ತಿದ್ದಾರೆ ಅವರು ಹೊರಗಿನ ಆಕ್ಟಿವಿಟೀಸ್‌ಗೆ ಬರುವುದಿಲ್ಲ. ಯಾರು ಹೊರಗಿನ ಆಕ್ಟಿವಿಟೀಸ್‌ಗೆ ಬರತಕ್ಕವರು ಎಂದರೆ, ಪುಸ್ತಕದ ಬಗ್ಗೆ ಅಲರ್ಜಿ ಇರುವಂತಹ ವಿದ್ಯಾರ್ಥಿಗಳು, ಇದರಿಂದ ವಿದ್ಯಾರ್ಥಿಗಳ ಅಭಿರುಚಿಯನ್ನು ಹೆಚ್ಚು ಮಾಡುವುದಕ್ಕೆ ಪ್ರಯತ್ನ ಮಾಡಿದಹಾಗೆ ಆಗುತ್ತದೆಯೋ? ಮಾನ್ಯ ಅಧ್ಯಕ್ಷರೇ. ಮಾನ್ಯ ಶಿಕ್ಷಣ ಸಚಿವರು ತಾವು ಅಧಿಕಾರ ವಹಿಸಿದಾರಂಭ್ಯ ಬಂದು ಹೇಳುತ್ತಾ ಬಂದಿದ್ದಾರೆ. ಕ್ಯಾಪಿಟೇಷನ್ ಫೀಯನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡುತ್ತೇನೆ, ಡೊನೇಷನ್ ಕೊಡದಹಾಗೆ ಮಾಡುತ್ತೇನೆ ಎಂದು ಹೇಳುತ್ತಿದ್ದಾರೆ. ಆದರೆ ಅದು ಅವರ ಕೈಮೀರಿ ನಡೆಯುತ್ತಿದೆ. ಅವರು ಪ್ರಯತ್ನ ಮಾಡಿಲ್ಲ ಎಂದು ಅಲ್ಲ. ಅವರ ಪ್ರಯತ್ನಕ್ಕೆ ದೂರದಿಂದ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಆದರೂ ಒಂದೇಒಂದು ಮಾತು ಹೇಳುತ್ತೇನೆ. ಈ ಖದೀಮರನ್ನು ಹಿಡಿಯುವುದಕ್ಕೆ ನೀವು ಮಿನಿಸ್ಟರ್ ಶಿಪ್‌ಬಿಟ್ಟು ಹೋಗುವುದಕ್ಕೆ ತಯಾರಾಗುವವರೆಗೆ ಇದು ಆಗುವುದಿಲ್ಲ. ಅದನ್ನು ಮಾಡಬೇಕಾದರೆ ಗಟ್ಟಿ ಮನಸ್ಸು ಮಾಡಬೇಕು. ಈ ಯೂನಿವರ್ಸಿಟಿಯವರು ಏನು ಮಾಡುತ್ತಿದ್ದಾರೆ? ಒಂದು ಯೂನಿವರ್ಸಿಟಿಯವರಾದರೂ ಇಂತಹ ಕಾಲೇಜಿನವರು ಹಣ ತೆಗೆದುಕೊಳ್ಳುತ್ತಿದ್ದಾರೆ ಎಂದು ರಿಪೋರ್ಟ್ ಮಾಡಿರುತ್ತಾರೆಯೋ? ಇವರು ಇನ್‌ಸ್ಪೆಕ್ಷನ್‌ಗೆ ಹೋಗುವಾಗ, ಇನ್‌ಸ್ಪೆಕ್ಷನ್ ಅವಧಿಯಲ್ಲಿ, ಈ ಇನ್‌ಸ್ಪೆಕ್ಷನ್ ಕಮಿಟಿಯವರು ಯಾವ ಶಾಲೆಯಲ್ಲಿ ಹಣ ತೆಗೆದುಕೊಳ್ಳುತ್ತಿಲ್ಲ, ಅಲ್ಲಿಸ್ವಲ್ಪ ಹಣ ತೆಗೆದುಕೊಳ್ಳಿ ಎಂದು ಅವರಿಗೆ ಹೇಳುವುದಕ್ಕೆ ಹತ್ತಿದ್ದಾರೆ. ಇದರ ಬಗ್ಗೆ ನಿಜವಾಗಿಯೂ ನೀವು ಗಮನಹರಿಸಬೇಕು. ಇಂತಹ ವಿಷಯದಲ್ಲಿ ತಾವು ಹೆಚ್ಚು ಕೂಲಂಕಷವಾಗಿ ಅಭ್ಯಾಸ ಮಾಡಬೇಕು. ಇಲ್ಲ ಎಂದರೆ ಪ್ರಾಮಾಣಿಕವಾಗಿ ಹೇಳಿಬಿಡಿ, ನಮ್ಮ ಕೈ ಸೋತಿದೆ ಎಂದು ನಿಮ್ಮ ಕಾನೂನು ಯಾವರೀತಿ ಇದೆ ಎಂದರೆ "ಲಾಳಿ" (ಕಡಾಣಿ) ಬಿಚ್ಚಿ ಗಾಡಿ ಹೊಡೆದಹಾಗೆ ನಸೀಬು ಇದ್ದರೆ ಅದು ಓಡುತ್ತಾ ಇರುತ್ತದೆ, ನಸೀಬು ಇಲ್ಲದಾಗ ಬೀಳುತ್ತದೆ. ನಿಜವಾಗಿಯೂ ನೀವು ಆಸ್ಥೆವಹಿಸಿ ಪರಿಶುದ್ಧವಾದ ಶಿಕ್ಷಣವನ್ನು ಕೊಡಬೇಕೆಂದು ನಿಮಗೆ ಆಸ್ಥೆ ಇದ್ದರೆ, ಇವೆಲ್ಲಾ ಲೋಪದೋಷಗಳಿಗೆ ನೀವು ಯೂನಿವರ್ಸಿಟಿಯನ್ನು ಗುರಿ ಮಾಡಿ. ಯಾವ ಕಾಲೇಜಿನವರಾಗಲೀ, ಕ್ಯಾಪಿಟೇಷನ್ ಫೀಸ್ ಆಗಲೀ, ಡೊನೇಷನ್ ಆಗಲೀ ತೆಗೆದುಕೊಳ್ಳುತ್ತಾರೆ, ಅವರು ಆ ಹಣವನ್ನು ಶಿಕ್ಷಣ ಸಂಸ್ಥೆಗೆ ಚಟುವಟಿಕೆಗಳಿಗೆ ಉಪಯೋಗಿಸುತ್ತಿದ್ದಾರೆಯೋ ಇಲ್ಲ ಬೇರೆಯದಕ್ಕೆ ಉಪಯೋಗಿಸುತ್ತಿದ್ದಾರೆಯೋ ಎಂಬುದನು ನೋಡಿ. ಇದೆಲ್ಲಾ ಬೇರೆಯದಕ್ಕೆ ಉಪಯೋಗ ಮಾಡುತ್ತಿದ್ದಾರೆ. ಇದೇ ಉದ್ಯೋಗ ಮಾಡುವುದಕ್ಕೆ ಹೊರಟು ಇದೇ ಉದ್ಯೋಗವನ್ನು ಕೆಲವರು ಅವಲಂಬಿಸಿದ್ದಾರೆ. ಏನು ಉದ್ಯೋಗ ಎಂದರೆ ಸ್ಕೂಲ್ ಕಾಲೇಜ್ ಪ್ರಾರಂಭ ಮಾಡಿ ನಡೆಸುವುದೇ ಉದ್ಯೋಗ ಎಂದು ಹೇಳುತ್ತಾರೆ, ಇಂತಹವರನ್ನು ಹಿಡಿದು ಜೈಲಿ ಹಾಕಲಿಕ್ಕೆ ವ್ಯವಸ್ಥೆ ಮಾಡುತ್ತೀರಾ? ಪ್ರೈಮರಿ ಶಾಲೆಗೆ, ಕಾನ್ವೆಂಟ್ ಸ್ಕೂಲ್‌ಗೆ ಹೋಗಬೇಕಾದರೆ ಒಬ್ಬೊಬ್ಬ ಮನಷ್ಯ ಒಂದೊಂದು ಸಾವಿರ ರೂಪಾಯಿಗಳ ಡೊನೇಷನ್ ಕೊಡಬೇಕೆಂಬುದನ್ನು ನೋಡಿದರೆ ನಿಮ್ಮ ಶಿಕ್ಷಣ ಎಲ್ಲಿಗೆ ಹೋಗುತ್ತದೆ ಎಂಬುದನ್ನು ತಿಳಿದುಕೊಳ್ಳಬೇಕಾಗುತ್ತದೆ.

ಇನ್ನು ಪ್ರಾಥಮಿಕ ಶಾಲೆಗಳಲ್ಲಿ ಮಗು ಕಾನ್ವೆಂಟ್ ಶಾಲೆಗೆ ಹೋಗಬೇಕಾದರೆ, ಒಂದು ಸಾವಿರ ರೂಪಾಯಿಗಳ ಡೊನೇಷನ್ ಕೊಡಬೇಕಾಗಿದೆ. ಇದನ್ನು ನೋಡಿದರೆ, ನಮ್ಮ ಶಿಕ್ಷಣ ಯಾವ ಕಡೆಗೆ ಹೋಗುತ್ತಿದೆ ಎನ್ನುವುದನ್ನು ನಾವು ತಿಳಿದುಕೊಳ್ಳಬೇಕಾಗಿದೆ. ಯೂನಿವರ್ಸಿಟಿಯಲ್ಲಿ ಎಕ್ಸ್ಟ್ರಾ ಕರಿಕ್ಯುಲರ್ ಆಕ್ಟಿವಿಟೀಸ್‌ಗೆ, ವಿದ್ಯಾರ್ಥಿಗಳ ಸಹಾಯ ತೆಗೆದುಕೊಂಡು, ಅವರನ್ನು ಅಡ್ಡದಾರಿ ಹಿಡಿಸಿ. ಕೊನೆಗೆ ಪರೀಕ್ಷೆ ಇಲ್ಲವೇ ಪರೀಕ್ಷೆಗಳನ್ನು ಮುಂದಕ್ಕೆ ಹಾಕುವುದನ್ನು ನಾವು ನೋಡಿದ್ದೇವೆ. ವಿದ್ಯಾರ್ಥಿಗಳು ಮುಷ್ಕರ ಮಾಡುವುದರಿಂದ ಅಲ್ಲಿರತಕ್ಕ ಶಿಕ್ಷಕರಿಗೆ ಮತ್ತು ವೈಸ್‌ಚಾನ್ಸಲರಿಗೆ ಭಯಭೀತಿಗಳನ್ನು ಉಂಟು ಮಾಡುತ್ತಿದ್ದಾರೆ ವಿದ್ಯಾರ್ಥಿಗಳು ಹೇಳಿದಂತೆ ಇಂದು ಮಾಡಬೇಕಾಗಿದೆ. ಅಲ್ಲದೆ ಶಿಕ್ಷಕರಿಗೆ ಅಲ್ಲಿ ಪ್ರಮೋಷನ್ ಸಿಕ್ಕದೇ ಹೋದರೆ. ಅವರೂ ಕೂಡ ಪರೀಕ್ಷೆಗಳಲ್ಲಿ ೨೦ಕ್ಕೆ ೩೫ ೩೫ಕ್ಕೆ ೭೦ ಮಾರ್ಕ್ಸ್‌ಗಳನ್ನು ಕೊಟ್ಟು ಪರೀಕ್ಷೆಗಳನ್ನು ನಡೆಸುತ್ತಾರೆ. ಈ ರೀತಿ ಅಂಕಗಳನ್ನು ಪಡೆದು ತೇರ್ಗಡೆಯಾದ ಅಭ್ಯರ್ಥಿ ಪಿ. ಎಸ್. ಸಿ. ನಲ್ಲಿ ಬಂದು ನಿಂತಾಗ, ನಿನ್ನ ಹೆಸರೇನು ಎಂದು ಕೇಳಿದರೂ ಹೇಳುವುದಕ್ಕೆ ಬರುವುದಿಲ್ಲ ಯೂನಿವರ್ಸಿಟಿಗಳಲ್ಲಿ ಹೆಚ್ಚು ಅಂಕಗಳನ್ನು ಪಡೆದು, ಇಲ್ಲಿ ಮಾತ್ರ ಹೆಚ್ಚು ಅಂಕಗಳನ್ನು ಪಡೆಯಲಾಗುವುದಿಲ್ಲ ಇದು ಏಕೆ ಎಂದು ಕೇಳುತ್ತೇನೆ Mixed reaction for this act ನಾನು ರಘುಪತಿಯವರಿಗೆ ಈ ಆಕ್ಟ್ ಬಗ್ಗೆ ಕೆಲವು ಮಾತುಗಳನ್ನು ಹೇಳುವಾಗ ಅಭಿನಂದನೆ ಸಲ್ಲಿಸುತ್ತೇನೆ, ಇನ್ನು ಕೆಲವು ಮಾತುಗಳಲ್ಲಿ ತೀವ್ರವಾದ ವಿರೋಧವನ್ನು ವ್ಯಕ್ತಮಾಡುತ್ತೇನೆ ಈ ಆಕ್ಟ್‌ಗೆ ಸಂಬಂಧಪಟ್ಟಂತೆ ನಾನು ಎಲ್ಲಾ ಅಭ್ಯಾಸ ಮಾಡಿದ್ದೇನೆ. ಆದರೆ ಎಲ್ಲಾ ವಿಚಾರಗಳನ್ನು

ತಿಳಿಸಲು ಸಾಕಷ್ಟು ಸಮಯ ಬೇಕಾಗುತ್ತದೆ. ಇನ್ನೂ ಅನೇಕ ಸದಸ್ಯರು ಮಾತನಾಡುವವರಿದ್ದಾರೆ ಈ ದೃಷ್ಟಿಯಿಂದ ಇನ್ನೂ ಹೇಳುವುದು ಇದ್ದರೂ. ಕಾಲದ ಅಭಾವ ಇರುವುದರಿಂದ, ಹೆಚ್ಚು ಮಾತ ನಾಡದೇ, ಇದನ್ನು ಬಲವಾಗಿ ವಿರೋಧ ಮಾಡಿ, ನನ್ನ ಈ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ, ಬಸವಲಿಂಗಪ್ಪ (ಯಲಹಂಕ).—ಮಾನ್ಯ ಅಧ್ಯಕ್ಷರೇ ಶ್ರೀಮಾನ್ ರಘುಪತಿಯವರ ಈ ಒಂದು ಯೂನಿವರ್ಸಿಟಿ ಆಕ್ಟ್‌ಗೆ ತಿದ್ದುಪಡಿಯನ್ನು ತಂದಿದ್ದಾರೆ. ಮಾನ್ಯ ಮಿತ್ರರಾದ ಪಾಟೀಲರು ತಮ್ಮ ಅನುಭವಗಳಿಂದ ತಮ್ಮದೇ ಆದ ವಿಷಯಗಳನ್ನು ಸಭೆಯ ಮುಂದಿಟ್ಟಿದ್ದಾರೆ. ಅವರು ಮಾತನಾಡುವಾಗ ಮಿಶ್ರ ಪ್ರತಿಕ್ರಿಯೆ ಎಂದು ಹೇಳಿದ್ದಾರೆ. ಈ ಮಿಶ್ರ ಪ್ರತಿಕ್ರಿಯೆ ಇದ್ದೇ ಇರುತ್ತದೆ. ಇದು ಯಾವಾಗಲೂ ಇರುತ್ತದೆ. ಅದರಲ್ಲಿ ಭಿನ್ನಾಭಿಪ್ರಾಯ ಇಲ್ಲ. ಇನ್ನೂ ೧೦ ವರ್ಷವಾದ ಮೇಲೂ ಈ ಮಿಶ್ರಪ್ರತಿಕ್ರಿಯೇ ಇದ್ದೇ ಇರುತ್ತದೆ. ಕಾರಣ ಏನೆಂದರೆ, ಈ ಸಮಾಜ ಬೆಳೆಯ ತ್ತಿರುತ್ತದೆ. ಜನಗಳ ವಿಚಾರಗಳು ಕೂಡ ಬದಲಾವಣೆಯಾಗುತ್ತಿರುತ್ತವೆ. ಮತ್ತೆ ನಡೆವಳಿಕೆ ಗಳು ಏನಿವೆ ಅವೂ ಕೂಡ ಬದಲಾವಣೆಯಾಗುತ್ತಿರುತ್ತವೆ. ಆದ್ದರಿಂದ ತಿದ್ದುಪಡಿಯನ್ನು ತರಲೇ ಬೇಕಾಗುತ್ತದೆ. ಸಮಾಜ ಬದಲಾವಣೆಯಾಗಿ, ಬೆಳೆಯುತ್ತಾ, ಜನಗಳ ಭಾವನೆಗಳು ಬದಲಾವಣೆ ಆಗುತ್ತಾ ಇದ್ದರೆ, ಅದರ ಪ್ರಕಾರ ಏನು ಕಾನೂನು ಇವೆ, ಅವುಗಳಿಗೆ ಮತ್ತೆ ತಿದ್ದುಪಡಿ ತರಬೇಕು ಹೊಸ ಹೊಸ ಕಾನೂನುಗಳನ್ನು ನಾವು ಮಾಡಬೇಕಾಗುತ್ತದೆ. ಈ ಒಂದು ಹಿನ್ನೆಲೆಯಲ್ಲಿ ಮಾನ್ಯಮಿತ್ರರು ಮಾತನಾಡಿದ್ದಾರೆ. ಯೂನಿವರ್ಸಿಟಿ ಗ್ರಾಂಟ್ಸ್ ಕಮೀಷನರ್ ಆದೇಶದ ಪ್ರಕಾರ ವಿಶ್ವವಿದ್ಯಾನಿಲಯಗಳು ಹೇಗಿರಬೇಕು? ಯೂನಿವರ್ಸಿಟಿ ಮತ್ತು ಸರ್ಕಾರದವರ ಕೈವಾಡ ಕಡಿಮೆ ಇರಬೇಕು ಸ್ವಾಯತ್ತತೆ ಜಾಸ್ತಿ ಇರಬೇಕೆಂದು ಸೂಚನೆ ಇದೆ. ಆ ಒಂದು ಸೂಚನೆ ಮೇರೆಗೆ ಈ ತಿದ್ದುಪಡಿಯನ್ನು ತಂದಿದ್ದಾರೆ. ಸ್ವಾಯತ್ತತೆ ಒಳ್ಳೆಯದೇ, ಆದರೆ ಸ್ವಾಯತ್ತತೆ ಹೇಗಿರಬೇಕೆಂಬ ವಿಚಾರವನ್ನು ನಾವು ವಿಚಾರ ಮಾಡಬೇಕಾಗಿದೆ. ಇದುವರೆವಿಗೂ ಈ ಪ್ರಯೋಗ ನಡೆದೇ ಇದೆ. ಯೂನಿವರ್ಸಿಟಿ ಕಾಯಿದೆ ಇದೆ, ಅದರ ಪ್ರಕಾರ ಪ್ರಯೋಗ ನಡೆದಿದೆ. ಸರ್ಕಾರ ಜಾಸ್ತಿ ಅಧಿಕಾರ ಇಟ್ಟುಕೊಂಡು ನಡೆಸುವಾಗ, ಸರ್ಕಾರಕ್ಕೆ ಅಧಿಕಾರ ಬಿಟ್ಟು ನಡೆಸುವಾಗ ಏನು? ಸರ್ಕಾರ ಬಿಟ್ಟರೆ ಹೇಗೆ. ಕಟ್ಟಿಕೊಂಡರೆ ಹೇಗೆ ಎನ್ನುವುದನ್ನು ವಿಚಾರ ಮಾಡಬೇಕಾಗುತ್ತದೆ. ಇದುವರೆವಿಗೆ ನಡೆದಿರತಕ್ಕ ವಿಚಾರವನ್ನು ನಾವು ತುಲನೆ ಮಾಡಬೇಕಾಗುತ್ತದೆ. ಈ ಯೂನಿವರ್ಸಿಟಿ ಆವರಣದಲ್ಲಿ ಜಾತಿಗಳ ತುಮುಲು ಜಾಸ್ತಿಯಾಗುತ್ತದೆಂದು ಮಾನ್ಯ ಪಾಟೀಲರು ಹೇಳಿದ್ದಾರೆ ಈ ವಿಷಯದಲ್ಲಿ ನನಗಿಂತ ಅವರ ಅನುಭವ ಜಾಸ್ತಿ. ಕಾರಣ ಅವರನ್ನು ಕರ್ನಾಟಕ ಯೂನಿವರ್ಸಿಟಿ ಸೆನೆಟ್‌ಗೆ ಹಾಕಿದ್ದರು. ನಾನು ಯಾವ ಯೂನಿವರ್ಸಿಟಿ ಮೆಂಬರೂ ಆಗಿಲ್ಲ. ಅಲ್ಲದೆ ಹಿಂದೆ ವಿದ್ಯಾಸಚಿವ ನಾಗಿಯೂ ಕೆಲಸ ಮಾಡಿಲ್ಲ. ಆದರೆ ವಿಚಾರ ಮನವರಿಕೆಯಾಗುವಂಥದ್ದು ಏನೆಂದರೆ, ಕರ್ನಾಟಕ ರಾಜ್ಯದಲ್ಲಿ ಹಲವಾರು ಜಾತಿಗಳು ಇವೆ. ಈ ಜಾತಿಗಳು ನಿರ್ನಾಮ ಆಗಬೇಕೆಂದು ನಾವೆಲ್ಲರೂ ವಾದ ಮಾಡುತ್ತೇವೆ ಮತ್ತೆ ಜಾತಿಗಳನ್ನು ಬಿಟ್ಟು ವಾದ ಮಾಡುವುದಕ್ಕೆ ಕೆಲವು ರಾಜಕೀಯ ಪ್ರೇರೇಪಣೆ ಗಳು ಇರಬಹುದು ಮತಮಾನ್ಯಗಳ ಪ್ರೇರೇಪಣೆ ಇರಬಹುದು. ಈ ಜಾತಿಗಳು ಹೋಗಬೇಕೆಂದರೆ, ಸಮಾಜದಲ್ಲಿ ಒಗ್ಗಟ್ಟು ಆಗಬೇಕು. ಎಲ್ಲರ ಪ್ರವೃತ್ತಿ, ಭಾವನೆಗಳು, ಸಮಾಜದಲ್ಲಿ ಒಂದೇ ಇರಬೇಕೆಂದು ಹೇಳುವುದು ಎಲ್ಲರ ಉದ್ದೇಶ ಉಂಟು. ನಾವು ಇದರ ಬಗ್ಗೆ ಸಾಧನೆ ಮಾಡಬೇಕು. ಆದರೆ ಯೂನಿವರ್ಸಿಟಿಗೆ ಪೂರ್ಣ ಸ್ವಾಯತ್ತತೆ ಕೊಟ್ಟರೆ ಸರಿಯಾದ ವಾತಾವರಣ ಕಲ್ಪನೆ ಆಗುವುದಿಲ್ಲ ವೆಂದು ನನ್ನ ಸ್ಪಷ್ಟವಾದ ಅಭಿಪ್ರಾಯ. ಕಾರಣ ಈ ಸಮಾಜದ ಹಿನ್ನೆಲೆಯಲ್ಲಿ, ಯಾರ್ಯಾರೂ ವೈಸ್‌ಚಾನ್ಸಲರ್ ಆಗಿ ಅಧಿಕಾರಕ್ಕೆ ಬರುತ್ತಾರೆ, ಮತ್ತೆ ಇಲ್ಲಿ ಸೆನೆಟ್ ಮಂಡಲಿ, ಸಿಂಡಿಕೇಟ್ ಮಂಡಲಿ ಸದಸ್ಯರಾಗಿ ಬರುತ್ತಾರೆ. ಅಂತಹವರು ಈ ಯೂನಿವರ್ಸಿಟಿಗಳಲ್ಲಿ ಪವಿತ್ರವಾದ ಭಾವನೆಯನ್ನು ಬೆಳೆಸಬೇಕು, ಹುಟ್ಟಿಸಬೇಕು. ಅವರ ಮನಸ್ಸಿನಲ್ಲಿ ಇದು ಇದ್ದರೆ ಅವರಿಗೆ ಸ್ವಾಯತ್ತತೆ ಕೊಡು ವುದರಲ್ಲಿ ನನ್ನ ಅಭ್ಯಂತರ ಇಲ್ಲ. ಬಂದವರು ರಾಜಕೀಯ ಮಾಡುವುದಕ್ಕೆ ಹೊರಟರೆ ಬಹಳ ಕಷ್ಟವಾಗು ತ್ತದೆ. ವೈಸ್‌ಚಾನ್ಸಲರ್ ಆದವರು ರಾಜಕೀಯ ಮಾಡುವುದಕ್ಕೆ ಪ್ರಯತ್ನ ಮಾಡಿದರೆ, ಈ ವಿಶ್ವವಿದ್ಯಾನಿಲಯಗಳು ಹಾಳಾಗಿ ಹೋಗುತ್ತವೆ. ಇದರಲ್ಲಿ ರಾಜಕೀಯ ಪ್ರವೇಶ ಮಾಡಿದರೆ. ಅಲ್ಲಿಯ ವಾತಾವರಣ ಕೆಟ್ಟು ಹೋಗುತ್ತದೆ. ಅಲ್ಲಿಯ ಉಪಾಧ್ಯಾಯರು ಇದ್ದಾರೆ, ಅವರೂ ಕೂಡ ರಾಜಕೀಯ ಬಣ್ಣ ಕೊಡುವುದನ್ನು ಬಿಟ್ಟು, ಅವರವರ ನಡೆನುಡಿಗಳಲ್ಲಿ ಬದಲಾವಣೆ ಮಾಡಿ ಕೊಳ್ಳದೇ ಹೋದರೆ, ಅಲ್ಲಿಯ ವಾತಾವರಣ ಕೆಟ್ಟು ಹೋಗುತ್ತದೆ. ಸ್ವಾಯತ್ತತೆ ಕೊಟ್ಟು,

ಒಂದು ಕೆಟ್ಟ ವಾತಾವರಣಕ್ಕೆ ಎಡೆಕೊಟ್ಟರೆ; ಹೇಗೆ ಉತ್ತಮ ಸಮಾಜವನ್ನು, ಮುಂದಿನ ಪೀಳಿಗೆಯನ್ನು ಸೃಷ್ಟಿಮಾಡುವುದಕ್ಕೆ ಸಾಧ್ಯ ಎನ್ನುವುದನ್ನು ವಿಚಾರ ಮಾಡಬೇಕು. ಎಲ್ಲಿಯವರೆಗೆ ಈ ಸಂಕುಚಿತ ಭಾವನೆಗಳು, ಜಾತಿಗಳ ಗೊಂದಲಗಳು ಪೈಪೋಟಿ ಈ ಸಮಾಜದಲ್ಲಿ ಇರುತ್ತದೆಯೋ, ಅಲ್ಲಿಯವರೆಗೆ ಪೂರ್ಣ ಸ್ವಾಯತ್ತತೆ ಕೊಡುವುದು ಸರಿಯಲ್ಲ. ಇದನ್ನು ಎಲ್ಲಾ ಪ್ರಜ್ಞಾವಂತರೂ ವಿಚಾರ ಮಾಡತಕ್ಕ ವಿಷಯ. ತಾವೂ ಕೂಡ ಪ್ರಜ್ಞಾವಂತರು ಇದ್ದೀರೆಂದು ನನ್ನ ಭಾವನೆ. ಅಲ್ಲದೆ ಆ ಕಡೆ ಕುಳಿತಿರತಕ್ಕಂಥವರೂ ಪ್ರಜ್ಞಾವಂತರಾಗಬೇಕೆಂದು ನನ್ನ ಭಾವನೆ, ಇಂತಹ ಸಮಾಜವನ್ನು ಸೃಷ್ಟಿ ಮಾಡುವುದಕ್ಕೆ ಎಲ್ಲರೂ ಕಷ್ಟಪಡಬೇಕು. ಧ್ಯೇಯಧೋರಣೆಗಳು, ಸಾಧನೆಯ ಮಾರ್ಗಗಳು ಮತ್ತು ಒಂದೇ ಗುರಿ ಹೊಂದಿರಬೇಕು. ಅಂತಹ ಸಮಾಜವನ್ನು ಸೃಷ್ಟಿ ಮಾಡುವುದಕ್ಕೆ ನಮ್ಮ ಕಣ್ಣುಗಳ ನೆಟ್ಟ ದೃಷ್ಟಿ ಇಟ್ಟುಕೊಳ್ಳಬೇಕು. ಇದು ಆದರೆ ನನ್ನದೇನೂ ಅಭ್ಯಂತರ ಇಲ್ಲ, ಸರ್ಕಾರದವರು ಇದಕ್ಕೆ ಪ್ರವೇಶ ಮಾಡಬೇಕೇ ಮಾಡಬಾರದೇ ಎನ್ನುವುದನ್ನು ವಿಚಾರ ಮಾಡಬೇಕಾಗುತ್ತದೆ. ಸರ್ಕಾರದವರು ಕೈ ಹಾಕಬಾರದೆಂದು ಹೇಳಿದರೆ ಹೇಗೆ? ಯೂನಿವರ್ಸಿಟಿ ಗ್ರಾಂಟ್ಸ್ ಕಮೀಷನರ್ ಅವರು ಒತ್ತಾಯದ ನಿರ್ದೇಶನ ಕೊಟ್ಟರೆ, ಈಗ ಹಾಲಿ ಇರತಕ್ಕ ಪರಿಸ್ಥಿತಿಯಲ್ಲಿ. ಗೊಂದಲದಲ್ಲಿ ಸಂಕುಚಿತ ಮನೋಭಾವನೆಯಲ್ಲಿ. ಸರ್ಕಾರಕ್ಕೆ ಅಧಿಕಾರ ಇಲ್ಲದೇ ಹೋದರೆ ಜನಗಳು ಯಾರ ಹತ್ತಿರ ಹೋಗಬೇಕು: ಜನಗಳಿಗೆ ಇವುಗಳಿಂದ ಹೆಚ್ಚಿನ ನಿರೀಕ್ಷೆಗೆ ಒಳಗಾಗಿರುತ್ತಾರೆ. ಯಾರನ್ನು ಕೇಳಬೇಕು? ಯಾರ ಮುಂದೆ ಹೋಗಬೇಕು? ಅಲ್ಲಿರತಕ್ಕಂಥ ವೈಸ್‌ಚಾನ್ಸಲರ್, ಅಧಿಕಾರಿ ವರ್ಗ ಹೀಗೆ ಮಾಡಬೇಕೆಂದು ಹೇಳಿದರೆ ಯಾವ ಹತ್ತಿರ ಹೋಗಬೇಕು ನಾನು ಇದೇ ಸದನದಲ್ಲಿ ವಿದ್ಯಾಭ್ಯಾಸ ಇಲಾಖೆಯ ಬೇಡಿಕೆಗಳ ಮೇಲೆ ಮಾತನಾಡುವಾಗ ಒಂದು ಮಾತು ಹೇಳಿದೆ. ಕರ್ನಾಟಕದಲ್ಲಿ ಯೂನಿವರ್ಸಿಟಿಗಳು ೫ ಇವೆ. ಕರ್ನಾಟಕ ಯೂನಿವರ್ಸಿಟಿ, ಮೈಸೂರು ಯೂನಿವರ್ಸಿಟಿ, ಬೆಂಗಳೂರು ಯೂನಿವರ್ಸಿಟಿ, ಗುಲ್ಬರ್ಗಾ ಯೂನಿವರ್ಸಿಟಿ, ಮಂಗಳೂರು ಯೂನಿವರ್ಸಿಟಿ ಈ ರೀತಿ ಇವೆ. ಜೊತೆಗೆ ಅಗ್ರಿಕಲ್ಚರ್ ಯೂನಿವರ್ಸಿಟಿಯೂ ಇದೆ, ತನಿಖಾ ಆಧಾರದ ಮೇಲೆ ಇವುಗಳಿಗೆ ಸಂಬಂಧಪಟ್ಟಂತೆ ಕೆಲವು ಅಂಕಿ ಅಂಶಗಳನ್ನು ಇಟ್ಟೆ. ಅದರ ಪ್ರಕಾರ, ಕನಿಷ್ಟವರ್ಗ, ಬಲಹೀನ ವರ್ಗಕ್ಕೆ ಮೀಸಲಾತಿಗಳು ಇರಬೇಕೆಂದು ನಿಗಧಿ ಮಾಡಿದ್ದಾರೆ, ಆ ನಿಗಧಿಯನ್ನು ಯಾವರೀತಿ ಉಲ್ಲಂಘನೆ ಮಾಡಿ, ಬೇರೆಯವರಿಗೆ ಕೆಲಸ ಕೊಡತಕ್ಕಂಥ ಪ್ರಯತ್ನ ಮಾಡಿದ್ದಾರೆ. ಇದು ಹೀಗಾದರೆ, ಏನು ಸ್ವಾಮಿ? ಇಂತಹವು ಒಂದೆರಡಲ್ಲ ಸಾವಿರಾರು, ಇಂತಹ ಒಂದು ಅವಿವೇಕವನ್ನು ವಿಶ್ವವಿದ್ಯಾನಿಲಯದವರು ಮಾಡಿದರೆ ಈ ಜನರಿಗೆ ಯಾರು ರಕ್ಷಣೆ ಕೊಡುವವರು? ನಾನು ಸ್ವಾಯತ್ತತೆ ಕೊಡಬೇಡಿ ಎನ್ನುವುದಿಲ್ಲ. ತಪ್ಪು ಮಾಡುವವರಿಗೆ ಸ್ವಾಯತ್ತತೆ ಕೊಟ್ಟರೆ ಇನ್ನೂ ಜಾಸ್ತಿ ತಪ್ಪು ಮಾಡುತ್ತಾರೆ. ಇದಕ್ಕೆ ಪ್ರತಿಬಂಧಕ ಮಾಡಲೇಬೇಕು. ಅಡ್ಡಿ ಆತಂಕ ಒಡ್ಡಲೇಬೇಕು ಇದಕ್ಕೆ ನಾವು ಅಂಕುಶ ಹಾಕಲೇಬೇಕು. ಈ ಒಂದು ಹಿನ್ನೆಲೆಯಲ್ಲಿ ಯೂನಿವರ್ಸಿಟಿ ಗ್ರಾಂಟ್ ಕಮೀಷನರ್ ಅವರು ನಿರ್ದೇಶನ ಕೊಟ್ಟಿದ್ದಾರೆ. ಇದು ಹೇಗಿದೆ ಎಂದರೆ ''ಸಕ್ಕರೆಯ ಲೇಪನ ಮಾಡಿದ ಗುಳಿಗೆಯಂತಿದೆ'' ಈ ರೀತಿ ಸಕ್ಕರೆ ಹಾಕಿ ತಿನ್ನುವುದಕ್ಕೆ ಕೊಡುತ್ತಾರೆ, ತಾವು ಸ್ವಾಯತ್ತತೆ ಕೊಡಿ, ನಾನು ಬೇಡ ಎನ್ನುವುದಿಲ್ಲ,

ಆದರೆ ಯೂನಿವರ್ಸಿಟಿಗಳು ತಪ್ಪು ದಾರಿಯಲ್ಲಿ ನಡೆದಾಗ ತಾವು ನಿಸ್ಸಂದೇಹವಾಗಿ, ನಿರ್ಭೀತಿಯಿಂದ ಬಿಗಿಯಾಗಿ ಕೆಲಸ ಮಾಡುವ ಹಾಗೆ ಇದನ್ನು ಪರಿವರ್ತನೆ ಮಾಡಬೇಕು ಎಂದು ಹೇಳುತ್ತೇನೆ. ಈ ತಿದ್ದುಪಡಿಯಲ್ಲಿ ತಾವು ಉಪಕುಲಪತಿಗಳು ೫ ವರ್ಷ ಇರುವ ಹಾಗೆ ಮಾಡಿದ್ದೀರಿ. ಈಗ ತಪ್ಪು ನಡವಳಿಕೆಯುಳ್ಳ ವೈಸ್ ಛಾನ್ಸಲರ್ ಸಿಕ್ಕಿದರೂ ಎಂದು ಇಟ್ಟುಕೊಳ್ಳೋಣ. ನೀವು ಒಳ್ಳೆಯವರನ್ನೇ ತರಬೇಕು ಎಂದು ಚುನಾಯಿಸುತ್ತೀರಿ. ಅವರು ಒಳ್ಳೆಯವರು ಎಂದೇ ಇಟ್ಟುಕೊಳ್ಳೋಣ. ಅವರು ಒಳ್ಳೆಯವರಾಗಿದ್ದರೂ ಆ ಒಳ್ಳೆಯವರನ್ನೇ ತಪ್ಪುದಾರಿಗೆ ಹೋಗುವ ಹಾಗೆ ಆ ರೀತಿ ಅವರನ್ನು ಉಪಯೋಗಿಸಿಕೊಳ್ಳುವುದಾಗಿದ್ದರೆ, ಈ ತಿದ್ದುಪಡಿ ಪ್ರಕಾರ ಅವರನ್ನು ೫ ವರ್ಷಕ್ಕೆ ಏನು ತಂದಿದ್ದೀರೋ ಅದರಂತೆ ಅವರು ಇದರಲ್ಲಿ ೫ ವರ್ಷ ಇರುವಾಗ ಅವರ ಆಳ್ವಿಕೆಯಲ್ಲಿ ಅವರು ಒಳ್ಳೆಯವರಾದರೂ ಸಮಸ್ಯೆಗಳು ಹಲವಾರು ಬಂದು ತಪ್ಪುದಾರಿಯಲ್ಲಿ ನಡೆದರೆ ಏನು ಮಾಡುವುದು ಈ ಸಂದರ್ಭದಲ್ಲಿ ಶ್ರೀ ಡಿ.ವಿ.ಜಿ.ಯವರು ಏನು ಹೇಳಿದ್ದರು ಅದರ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ಇವೊತ್ತಿನ ದಿವಸ ಡಿ.ವಿ.ಜಿ ಇಲ್ಲ. ಅವರು ಹೇಳಿದುದನ್ನು ನಾನು ಇಲ್ಲಿ ಹೇಳಬಯಸುತ್ತೇನೆ. ಅವರು ಈ ರೀತಿ

ಹೇಳಿದ್ದಾರೆ. If you allow bad people to rule you will have the punishment rules by bad people ಎಂದು ಹೇಳಿದರು. Can you allow bad Vice-Chancellor to rule us ?Can you allow all of us to be under the control of the bad Vice-Chancellor? if that if the case, the entire University Campus will have to suffer from thi punishment rules by bad Vice Chancellor. ಮಾನ್ಯ ಅಧ್ಯಕ್ಷರೇ, ಇವೊತ್ತಿನ ದಿವಸ ನಮ್ಮ ಮುಂದೆ ಡಿ.ವಿ.ಜಿ ಯವರು ಇಲ್ಲದಿದ ರೂ ಅವರು ಒಂದು ಒಳ್ಳೆಯ ಮಾತನ್ನು ಹೇಳಿದ್ದಾರೆ. ನಾನು ಇದರಲ್ಲಿ ನಂಬಿಕೆ ಇಟ್ಟುಕೊಂಡಿರುವವನು ಆದುದರಿಂದ ನಾನು ಹೇಳುತ್ತೇನೆ. Please do not allow bad people to rule the University and spoil the University and then do not punish rhose people who are being affected by the administration of the University. This is all my submission, nothing more.

ಶ್ರೀ ಎಂ. ರಘುಪತಿ (ವಿದ್ಯಾ ಮಂತ್ರಿಗಳು).—ನಾನು ಪ್ರಥಮ ಬಾರಿಗೆ ಇದನ್ನು ತಂದಿದ್ದೇನೆ. ಮೊದಲು ಅಂಥ ವೈಸ್ ಛಾನ್ಸಲರ್ ಇದ್ದರೆ ಅವರನ್ನು ತೆಗೆಯುವುದಕ್ಕೆ ಅವಕಾಶ ಇರಲಿಲ್ಲ. ಮಾನ್ಯ ಸದಸ್ಯರು ಬ್ಯಾಡ್ ವೈಸ್ ಛಾನ್ಸಲರ್ ಅಂಥಾವರನ್ನು ತೆಗೆಯುವುದಕ್ಕೆ ಏನು ಮಾಡುತ್ತೀರಿ ಎಂದು ಕೇಳಿದ್ದಾರೆ. ಅಂಥ ಬ್ಯಾಡ್ ವೈಸ್ ಛನ್ಸಲರ್ ಇದ್ದರೆ ಅವರನ್ನು ತೆಗೆಯಬೇಕಾದರೆ ಯಾವ ರೀತಿ ತೆಗೆಯಬೇಕು ಎನ್ನುವುದನ್ನೂ ಸಹ ಈ ರೂಲ್‌ನಲ್ಲಿ ಸೇರಿಸಿದ್ದೇವೆ. ಒಟ್ಟಿನಲ್ಲಿ ಹೇಳಬೇಕಾದರೆ ಬ್ಯಾಡ್ ವೈಸ್ ಛಾನ್ಸಲರ್ ಇದ್ದರೆ you should not make the University too suffer. ತಾತ್ವಿಕವಾಗಿ ಅಂಥ ಬ್ಯಾಡ್ ವೈಸ್ ಛಾನ್ಸಲರ್‌ನ್ನು ತೆಗೆಯಬೇಕಾದರೆ ಆ ಬಗ್ಗೆ ನಿವೃತ್ತ ನ್ಯಾಯಾಧೀಶರ ಮೂಲಕ ತನಿಖೆ ಮಾಡಿಸಿ ತೆಗೆಯುವುದಕ್ಕೆ ಪ್ರಾವಿಷನ್‌ನ್ನು ಇದರಲ್ಲಿ ಮಾಡಿದ್ದೇವೆ, ಇದು ಮೊದಲು ಇರಲಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಮಂತ್ರಿಗಳು ಒಳ್ಳೆಯ ತಿದ್ದುಪಡಿಯನ್ನು ತಂದಿದ್ದಾರೆ. ಆದರೆ ಇದರ ಬಗ್ಗೆ ತನಿಖೆಯಾಗುವಾಗ ಸರಿಯಾಗಿ ತನಿಖೆಯಾಗಬೇಕು, ಇದರಲ್ಲಿ ಒಳ್ಳೆಯವರು ಇರಬಹುದು, ಕೆಟ್ಟವರೂ ಇರಬಹುದು. ಇದು ಜಾತಿವಾದ ಅಲ್ಲ. ಇದರ ಬಗ್ಗೆ ಸಂಕುಚಿತ ಭಾವನೆ ಇಟ್ಟುಕೊಳ್ಳದೇ ತನಿಖೆ ನ್ಯಾಯವಾಗಿ ಮಾಡಬೇಕು ಅಂಥವರು ಇದ್ದರೆ ಎರಡೂ ಕಡೆಗೂ ನ್ಯಾಯ ಸಿಕ್ಕುತ್ತದೆ. ಎರಡೂ ಕಡೆಯ ನ್ಯಾಯವನ್ನು ನೋಡಿ ಸರಿಯಾಗಿ ತನಿಖೆ ಮಾಡುವವರನ್ನು ನೇಮಕ ಮಾಡಿ, ಮಾಡಿಸುತ್ತೇವೆಂದು ಮಾನ್ಯ ಸಚಿವರಿಗೆ ಭರವಸೆ ಇದ್ದರೆ ಸರಿ ಮಾಡಬಹುದು ಇಲ್ಲದೇಹೋದರೆ ಕಾಲಾನುಕಾಲಕ್ಕೆ ಬುದ್ಧಿವಾದ ಹೇಳುವಂಥಾವರು ಇದರಲ್ಲಿ ಏನು ಇರುತ್ತಾರೆ ಅವರೇ ಆ ಸಂದರ್ಭದಲ್ಲಿ ಸರಿಯಾಗಿ ಬುದ್ಧಿವಾದವನ್ನು ಕೊಡದೇ ಹೋಗಬಹುದು. ಅಂಥವರನ್ನು ತಾವು ಸರಿಯಾಗಿ ನೋಡಿಕೊಳ್ಳಬೇಕು. ಇದಕ್ಕೆ ವಿರುದ್ಧವಾಗಿರುವವರನ್ನು ನೀವು ನೇಮಕ ಮಾಡಿದರೆ ಅವರಿಂದ ನೀವೂ ಕೆಟ್ಟವರಾಗಬೇಕಾಗುತ್ತದೆ. ಇದರ ಅರ್ಥ ಏನೆಂದರೆ ಸಮಾಜದಲ್ಲಿ ಅವರು ಬಡವರಾಗಿದ್ದರೆ, ಅವರಿಗೆ ಬಡವರ ಕಷ್ಟ ಯಾವ ರೀತಿ ಎನ್ನುವುದು ಗೊತ್ತಾಗುತ್ತದೆ. ಅವರಿಗೆ ಅನುಕೂಲವಾಗುವ ಹಾಗೆ ನೋಡಿಕೊಳ್ಳುತ್ತಾರೆ. ಸಮಾಜದಲ್ಲಿ ಇವೊತ್ತಿನ ದಿವಸ ಯಾರೂ ಕೂಡ ಆ ಬಡವನ ಕಷ್ಟವನ್ನು ನೋಡುವುದೇ ಇಲ್ಲ. ಯಾರಾದರೂ ಬಡವ ನನಗೆ ಹೊಟ್ಟೆಗಿಲ್ಲ ಎಂದರೆ ಬಡವನ ಕಷ್ಟ ಗೊತ್ತಿಲ್ಲದೇ ಇರುವವನು ಏನು ಹೇಳುತ್ತಾನೆ ಎಂದರೆ ನೀನು ಹಿಂದಿನ ಜನ್ಮದಲ್ಲಿ ಪಾಪ ಮಾಡಿರುವೆ ಆದರಿಂದ ನೀವು ಉಪವಾಸವನ್ನು ಅನುಭವಿಸುತ್ತಿದ್ದೀರಿ ಎಂದು ಹೇಳತಕ್ಕಂಥ ವಾದವನ್ನು ಮಾಡತಕ್ಕಂಥ ಜನ ಈ ಸಮಾಜದಲ್ಲಿ ಬಹಳ ಜನ ಇದ್ದಾರೆ. ಅಂಥವರ ಬಗ್ಗೆ ಸಹಾನುಭೂತಿಯಿಂದ ಕೇಳುವ ಜನ ಏನು ಇದ್ದಾರೆ ಅವರನ್ನು ಇಲ್ಲಿಗೆ ಹಾಕಿದರೆ ಆ ಬಡವರಿಗೆ ನ್ಯಾಯವನ್ನು ಕೊಡುವುದಕ್ಕೆ ಸಾಧ್ಯ. ಆದುದರಿಂದ ಈ ಆಡಳಿತ ವರ್ಗಕ್ಕೆ ಅಂಥವರನ್ನು ನೇಮಕ ಮಾಡಬೇಕು ಎಂದು ಹೇಳುವುದನ್ನು ತಾವು ದೊಡ್ಡ ಮನಸ್ಸಿನಿಂದ ಒಪ್ಪಿದ್ದೀರಿ. ಆದಕ್ಕಾಗಿ ನಾನು ತಮಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಶ್ರೀಮಾನ್ ರಘುಪತಿಯವರು ಈ ವಿಚಾರದಲ್ಲಿ ಒಳ್ಳೆಯ ಕೆಲಸ ಮಾಡಿದ್ದಾರೆ ಎಂದು ಹೇಳುತ್ತೇನೆ. ಅವರು ತೆರೆದ ಮನಸ್ಸಿನಿಂದ ವಿರೋಧ ಪಕ್ಷಗಳ ಜೊತೆಯಲ್ಲಿ ಚರ್ಚಿಸಿ ಈ ತಿದ್ದುಪಡಿಯಲ್ಲಿ ಯಾವ ಯಾವ ನ್ಯೂನತೆಗಳು ಇವೆ ಎನ್ನತಕ್ಕಂಥಾದ್ದನ್ನು ವಿಚಾರಮಾಡಿ ಉಳಿದ ಪಕ್ಷದವರ ಜೊತೆಯಲ್ಲೂ ಚರ್ಚೆಮಾಡಿ ಅವರು ಕೊಟ್ಟಿರತಕ್ಕಂಥ ಸಲಹೆಗಳನ್ನು ತೆಗೆದುಕೊಂಡು ಈ ತಿದ್ದುಪಡಿಯಲ್ಲಿ ಅವುಗಳನ್ನು ಅಳವಡಿಸಿ

ತಂದಿದ್ದಾರೆ. ಇದನ್ನು ಸ್ವೀಕಾರ ಮಾಡಿರತಕ್ಕಂಥದ್ದು ಬಹಳ ಸಂತೋಷ. ಅದಕ್ಕಾಗಿ ನಾನು ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಇನ್ನು ಇದರಲ್ಲಿ ಕ್ಲಾಸ್ ೩೪ರಲ್ಲಿ ಈ ಬೋರ್ಡ್ ಆಫ್ ಅಪಾಯಿಂಟ್‌ಮೆಂಟ್ಸ್ ವಿಚಾರದಲ್ಲಿ ಬ್ಯಾಕ್‌ವರ್ಡ್ ಕ್ಲಾಸ್, ಎಸ್‌ಸಿ ಮತ್ತು ಎಸ್‌ಟಿ ಇವರ ಬಗ್ಗೆ ಏನು ನ್ಯೂನತೆಗಳು ಇದನ್ನು ಸರಿಪಡಿಸುತ್ತೇವೆ, ಮುಂದೆ ಇದರಲ್ಲಿ ಯಾವ ನ್ಯೂನತೆಗಳು ಆಗದೇ ಇರುವ ಹಾಗೆ ಈ ತಿದ್ದುಪಡಿಯಲ್ಲಿ ತರುತ್ತೇವೆನ್ನುವುದನ್ನು ಒಪ್ಪಿಕೊಂಡಿದ್ದಾರೆ. ಅದಕ್ಕಾಗಿ ನಾನು ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಇನ್ನು ಸೆಕ್ಷನ್ ೪೭ರಲ್ಲಿ ಕರ್ನಾಟಕ ಯೂನಿವರ್ಸಿಟಿ, ಇಂಟರ್ ಯೂನಿವರ್ಸಿಟಿ ಬೋರ್ಡ್ ಏನು ಇದೆ ಇದರಲ್ಲಿ ಫಂಕ್ಷನ್ ಆಫ್ ದಿ ಬೋರ್ಡ್‌ನಲ್ಲಿ ಕೆಲವು ಅಧಿಕಾರಿಗಳು ಇರಬೇಕು. ಇದರ ಬಗ್ಗೆ ಮುಂದಾಲೋಚನೆ ಇಟ್ಟುಕೊಂಡು ಹಲವಾರು ಫಂಕ್ಷನ್ಸ್ ಮಾಡಬೇಕಾದದ್ದು ಇದೆ. ಜೊತೆಗೆ ಆಡಳಿತ ವರ್ಗದಲ್ಲೂ ನ್ಯೂನತೆಗಳು ಇರುತ್ತವೆ, ಅಪಾಯಿಂಟ್‌ಮೆಂಟ್ಸ್ ಬಗ್ಗೆ, ದುರ್ಬಲ ವರ್ಗದವರ ಬಗ್ಗೆ, ಎಸ್‌ಸಿ ಮತ್ತು ಎಸ್‌ಟಿ ಇವರ, ಬಗ್ಗೆ ವೀಕರ್ ಸೆಕ್ಷನ್ ಬಗ್ಗೆ ಇವೆಲ್ಲದರ ಬಗ್ಗೆ ಫಂಕ್ಷನ್ಸ್ ಗೊತ್ತು ಮಾಡುವಾಗ ಏನು ನ್ಯೂನತೆಗಳು ಬರುತ್ತವೆ ಅದನ್ನು ಈ ತಿದ್ದುಪಡಿಗೆ ಸೇರಿಸಿಕೊಳ್ಳುತ್ತೇವೆ ಎಂದು ಮಾನ್ಯ ಸಚಿವರು ಒಪ್ಪಿಕೊಂಡಿದ್ದಾರೆ. ಅದಕ್ಕಾಗಿ ನಾನು ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ನಾನು ಹೇಳಿದ ಸಲಹೆಗಳನ್ನು ಮಾನ್ಯ ಸಚಿವರು ಒಪ್ಪಿಕೊಂಡಿರುವುದರಿಂದ ಮಾನ್ಯ ಸಚಿವರು ಈ ಬಗ್ಗೆ ಏನು ಒಂದು ತಿದ್ದುಪಡಿ ತಂದಿದ್ದಾರೆ ಅದಕ್ಕೆ ನಾನು ಮನ್ನಣೆ ನೀಡಿ ಅದಕ್ಕೆ ನನ್ನ ಬೆಂಬಲವನ್ನು ಸೂಚಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಕೊನೆಯದಾಗಿ, ಒಂದು ಮಾತು ಏನೆಂದರೆ ಈಗ ಶ್ರೀಮಾನ್ ಕೆ.ಹೆಚ್. ಪಾಟೀಲರು ಇದರ ವಿರುದ್ಧವಾಗಿ ಏನು ಅಭಿಪ್ರಾಯವನ್ನು ವ್ಯಕ್ತಪಡಿಸಿದರೋ ಅದರ ಬಗ್ಗೆ ನಾನು ಒಂದು ಮಾತು ಹೇಳುತ್ತೇನೆ. ಅದೇನೆಂದರೆ ಅವರ ಮನಸ್ಸಿನಲ್ಲಿ ಮುಂದೇನಾದರೂ ಇದರ ಬಗ್ಗೆ ತೊಂದರೆಗಳು ಬರುತ್ತವೆಯೋ ಏನೋ ಎನ್ನುವ ಒಂದು ಭೀತಿಯನ್ನು ಇಟ್ಟುಕೊಂಡು ಈ ಮಾತನ್ನು ಅವರು ಹೇಳಿದ್ದಾರೆ. ನನ್ನ ಉದ್ದೇಶ ಈ ಆಡಳಿತ ವರ್ಗದಲ್ಲಿ ಮುಂದೆ ಬದಲಾವಣೆಯಾಗಬೇಕಾದಂಥ ಸಂದರ್ಭದಲ್ಲಿ ಆದರ ಬಗ್ಗೆ ತಿದ್ದುಪಡಿ ಬಂದಾಗ ಇದೇ ರೀತಿಯಾಗಿ ಸ್ವೀಕಾರ ಮಾಡುವುದಲ್ಲದೇ ಒಳ್ಳೆಯ ವ್ಯಕ್ತಿಯಿಂದ ಇದನ್ನು ಮಾಡಿಸಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ವೀರಪ್ಪಮೊಯ್ಲಿ (ಕಾರ್ಕಳ).—ಮಾನ್ಯ ಅಧ್ಯಕ್ಷರೇ, ಮಾನ್ಯ ಶಿಕ್ಷಣ ಸಚಿವರು ಈ ಸದನದ ಮುಂದೆ ಬಹಳ ಮಹತ್ವವಾದ ಕರ್ನಾಟಕ ಸ್ಟೇಟ್ ಯೂನಿವರ್ಸಿಟೀಸ್ ಅಮೆಂಡ್‌ಮೆಂಟ್ ಬಿಲ್ ಒಂದನ್ನು ತಂದಿದ್ದಾರೆ. ಇದರ ಬಗ್ಗೆ ಸನ್ಮಾನ್ಯ ಬಿ. ಬಸವಲಿಂಗಪ್ಪನವರು ಮತ್ತು ಸನ್ಮಾನ್ಯ ಕೆ.ಹೆಚ್. ಪಾಟೀಲರು ಮಾತನಾಡಿದಂಥ ವಿಚಾರವನ್ನು ನಾನು ಪುನ: ಪ್ರಸ್ತಾಪ ಮಾಡಲಿಕ್ಕೆ ಹೋಗುವುದಿಲ್ಲ. ಅವರು ಹೇಳದೇ ಇರತಕ್ಕಂಥ ಕೆಲವು ವಿಚಾರಗಳಿಗೆ ಮಾತ್ರ ನನ್ನ ಒಂದು ವಿಶ್ಲೇಷಣೆಯನ್ನು ಸೀಮಿತಗೊಳಿಸುತ್ತೇನೆ. ಈ ಒಂದು ಮಸೂದೆ ಸರಳವಾದಂಥ ಮಸೂದೆ ಎಂದು ಕಂಡರೂ ಕೂಡ ಇದು ಸಮಗ್ರವಾದಂಥ ಯೂನಿವರ್ಸಿಟಿ ಬಿಲ್‌ಗೆ ಇದು ಒಂದು ವ್ಯಾಪಕವಾದಂಥ ಮತ್ತು ಇದರ ಒಂದು ರೂಪರೇಷೆಯಲ್ಲಿ ತಂದು ಸಾಮಾನ್ಯ ಬದಲಾವಣೆ ಮಾಡತಕ್ಕಂಥ ಒಂದು ಹೆಜ್ಜೆಯನ್ನು ಇಟ್ಟಿದ್ದಾರೆ ಇದು ಸರಳವಾದಂಥ ತಿದ್ದುಪಡಿ ಮಸೂದೆ ಅಲ್ಲ ಎನ್ನುವುದನ್ನು ತಾವೂ ಒಪ್ಪುತ್ತೀರಿ ಎಂದು ನಾನು ಭಾವಿಸುತ್ತೇನೆ. ಈ ತಿದ್ದುಪಡಿಯಲ್ಲಿ ತಾವು ಈಗ ಏನು ನಮೂದಿಸಿದ್ದೀರಿ ಅದನ್ನು ನೋಡಿದರೆ ಈ ಸದನದಲ್ಲಿ ಇದನ್ನು ತರುವಾಗ ಎರಡು ವಿಚಾರಗಳು ತಮ್ಮ ಮೇಲೆ ಪ್ರಭಾವ ಬೀರಿವೆ ಎಂದು ಹೇಳಬಹುದು. ಮೊದಲನೆಯದು ಕರ್ನಾಟಕ ರಾಜ್ಯದಲ್ಲಿ ಎಲ್ಲಾ ವಿಶ್ವವಿದ್ಯಾನಿಲಯಗಳ ಚಟುವಟಿಕೆಗಳನ್ನು ಹೊಂದಿಸಿಕೊಂಡು ಈ ಸಂಶೋಧನೆ ಅಭ್ಯಾಸದ ಮತ್ತು ಆಡಳಿತದ ಬಗ್ಗೆ ಯಾವರೀತಿಯಾದಂಥ ಆಡಳಿತ ನಡೆಸಬೇಕೋ ಅದರ ಬಗ್ಗೆ ತೀವ್ರ ಸುಧಾರಣೆ ಅಗತ್ಯ ಎಂದು ನಾನು ಹೇಳುತ್ತೇನೆ, ಇದರ ಬಗ್ಗೆ ೧೯೭೯ನೇ ಇಸವಿಯಲ್ಲಿ ರಚನೆಯಾದಂಥ ರಾಜ್ ಆಯೋಗ ಯಾವುದು ಇದೆ, ಆ ರಾಜ್ ಆಯೋಗದ ಸಲಹೆಗಳನ್ನು ಅನುಷ್ಠಾನಕ್ಕೆ ತರಬೇಕು ಎನ್ನುವಂಥ ಪ್ರಮುಖವಾದಂಥ ಪ್ರಭಾವ ತಮ್ಮ ಮೇಲೆ ಇದೆ. ಎರಡನೆಯದಾಗಿ ಬೇರೆ ಬೇರೆ ಯೂನಿವರ್ಸಿಟಿಗಳ ವೈಸ್–ಛಾನ್ಸಲರ್ಸ್‌ಗೆ ತಮ್ಮ ಆಡಳಿತದಲ್ಲಿ ಮತ್ತು ಅಭ್ಯಾಸ ಪದ್ಧತಿಯಲ್ಲಿ ಇರತಕ್ಕಂಥ ತೊಂದರೆಗಳನ್ನು, ತೊಡಕುಗಳನ್ನು ನಿವಾರಿಸತಕ್ಕಂಥ ಸಲಹೆಗಳನ್ನು ಕೊಟ್ಟಿದ್ದಾರೆ ತಮ್ಮ ತಿದ್ದುಪಡಿಯ ಉದ್ದೇಶವನ್ನು ನಮೂದಿಸುವಾಗ ಇವೆಲ್ಲಾ ತಮ್ಮ ಮೇಲೆ ಪ್ರಭಾವ ಬೀರಿವೆ ಎಂದು ನನಗೆ ಕಾಣುತ್ತಾ ಇದೆ. ಮತ್ತೆ ಯೂನಿವರ್ಸಿಟಿ ಗ್ರಾಂಟ್ ಕಮಿಷನ್‌ನವರೂ ಕೂಡ ಕೆಲವು ಸೂಚನೆಗಳನ್ನು ಕೊಟ್ಟಿದ್ದಾರೆ. ಈ ರೀತಿ ಮೂರು

ವಿಧವಾದಂಥ ಪ್ರಭಾವಗಳು ಈ ತಿದ್ದುಪಡಿಗಳನ್ನು ಸದನದ ಮುಂದೆ ಸಮರ್ಪಿಸುವಂಥಾದ್ದಕ್ಕೆ ತಮ್ಮ ಮೇಲೆ ಪರಿಣಾಮ ಬಿದ್ದಿವೆ. ಇದರ ಬಗ್ಗೆ ನಾನು ತಮಗೆ ಅಭಿನಂದನೆ ಕೊಡಬೇಕು. ಈ ಕೆಲಸವನ್ನು ಎಲ್ಲಾ ಸಚಿವರೂ ಈ ಅಧಿವೇಶನದಲ್ಲಿ ಮಾಡಿಲ್ಲ. ಈ ಅಧಿವೇಶನದಲ್ಲಿ ಯಾವ ಸಚಿವರೂ ಮಾಡದೇ ಇರತಕ್ಕಂಥ ಪ್ರಜಾಪ್ರಭುತ್ವ ಸಂಪ್ರದಾಯವನ್ನು ತಾವು ಮಾಡಿದ್ದೀರಿ, ಅದಕ್ಕಾಗಿ ತಮಗೆ ಮೆಚ್ಚುಗೆ ಕೊಡಬೇಕು, ತಾವು ಇದರ ಬಗ್ಗೆ ಎಂದರೆ ಈ ಬಿಲ್ ತರುವುದಕ್ಕೆ ಮೊದಲು ಚರ್ಚೆ ಮಾಡಬೇಕಾಗಿತ್ತು. ಆದರೂ ಪರವಾಗಿಲ್ಲ ನಿನ್ನೆ ನಮ್ಮನ್ನು, ಕೆಲವರನ್ನು ಕರೆದು ಚರ್ಚೆ ಮಾಡಿದ್ದೀರಿ, ಎರಡು, ಮೂರು ತಿದ್ದುಪಡಿಗಳನ್ನು ತಂದಿದ್ದೀರಿ. ಬಹುಶ: ಹೆಚ್ಚಿನ ಚರ್ಚೆಗೆ ಆಸ್ಪದವಾದಂಥ ವಿಚಾರಗಳನ್ನು ಬದಲಾವಣೆ ಮಾಡಿ ೨-೩ ತಿದ್ದುಪಡಿಗಳನ್ನು ತಂದಿದ್ದೀರಿ. Tension area that you have removed I must congratulate you for this. ಈ ಪದ್ಧತಿ ಹಿಂದೆ ಎಲ್ಲಾ ನಡೆದುಕೊಂಡು ಬರುತ್ತಿತ್ತು ಈ ಕೆಲಸವನ್ನು ಈ ಅಧಿವೇಶನದಲ್ಲಿ ನಮ್ಮ ಎಲ್ಲಾ ಸಚಿವರೂ ಕೈಬಿಟ್ಟಿದ್ದಾರೆ. ಏಕೆಂದರೆ, ಬಹಳ ತೀವ್ರವಾದಂಥ ಪ್ರಮುಖವಾದಂಥ ಬಿಲ್‌ಗಳು ಬಂದರೂ ಕೂಡ ವಿರೋಧಪಕ್ಷದವರನ್ನು ಕೇಳುವುದು ಬೇಕಾಗಿಲ್ಲ ಎಂದು ಅವರಿಗೆ ಇರಬಹುದು. ಆದರೆ ತಾವು ಒಂದು ಸಂಪ್ರದಾಯವನ್ನು ಹಾಕಿದ್ದೀರಿ. To that extent you are an exception to it and to that extent I will congratulate you. ತಮ್ಮಲ್ಲಿ ಓಪನ್ ಮೈಂಡ್ ಇದೆ ಎನ್ನುವುದಕ್ಕೆ ಇದು ಸಾಕ್ಷಿ. ಆ ಬಗ್ಗೆ ನಾನು ತಮ್ಮನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಅದರ ಬಗ್ಗೆ ಏನೂ ಅನುಮಾನವಿಲ್ಲ. ಇನ್ನು ಕೆಲವು ವಿಚಾರಗಳು ಬೇರೆ ಇದೆ. ಅವರಲ್ಲಿ ತಿದ್ದುಪಡಿ ಮಾಡಲಿಕ್ಕೆ ನಾವು ನಿಮ್ಮ ಹತ್ತಿರ ಚರ್ಚೆಮಾಡಿಲ್ಲ. ಮೂಲಭೂತವಾದಂಥ ಮತ್ತು ತಮ್ಮ ಪಕ್ಷದ ಧೋರಣೆಗಳು ಏನಿವೆ ಅದರ ಬಗ್ಗೆ ಸದನದಲ್ಲಿ ಮಾತನಾಡಬೇಕಾಗುತ್ತದೆ. It may be a Cabinet decision. You have to reflect the character of your party in some of these legislations including the University education. ಅದನ್ನು ತಾವು ಮಾಡಿದ್ದೀರಿ. ಇದರಲ್ಲಿ ಆ ಬಗ್ಗೆ ಚರ್ಚಾಸ್ಪದ ಇನ್ನೂ ಕೂಡ ಉಳಿದಿದೆ. We have got to expose that. ಮತ್ತು ಅದರ ವಿಚಾರವನ್ನು ಜನತೆಯ ಗಮನಕ್ಕೆ ತರಬೇಕಾಗುತ್ತದೆ. ಯಾವರೀತಿ ತಿದ್ದುಪಡಿ ಮಾಡಿದ್ದೀರಿ, ಅದರಿಂದ ವಿದ್ಯಾ ಕ್ಷೇತ್ರದಲ್ಲಿ ಏನು ಪರಿಣಾಮವಾಗುತ್ತದೆ ಎನ್ನುವುದನ್ನು ನಾವು ಬಹಳ ಸೂಕ್ಷ್ಮವಾಗಿ ವಿಚಾರ ಮಾಡಬೇಕಾಗುತ್ತದೆ. ಮೊದಲನೆಯದಾಗಿ ಮೂಲಭೂತವಾದ ಪಾಯಿಂಟನ್ನು ಎತ್ತಬೇಕು ಎಂದು ನಾನು ಬಯಸುತ್ತಾ ಇದ್ದೇನೆ. ಏಕೆಂದರೆ ನಾವು ಯೂನಿವರ್ಸಿಟಿ ಬಿಲ್ಲನ್ನು ಪಾಸ್ ಮಾಡುತ್ತೇವೆ. ಆದರೆ ಲೆಜಿಸ್ಲೇಚರ್ ಮೇಲೆ ದೊಡ್ಡ ಅಪವಾದವನ್ನು ಸಾರ್ವಜನಿಕರು, ಕೋರ್ಟ್‌ನವರು, ಶಿಕ್ಷಣವೇತ್ತರು ಯಾವಾಗಲೂ ಮಾಡುತ್ತಾರೆ. ಇಂತಹ ಬಿಲ್ಲನ್ನು ನೋಡುವುದಿಲ್ಲ, ವಿಚಾರಣೆ ಮಾಡುವುದಿಲ್ಲ ಇಂಟಲೆಕ್ಚುವಲ್ ಅಪ್ರೋಚ್ ಇಲ್ಲ ಕಾನೂನಿನ ವಿಚಾರ ಮಾಡುವುದಿಲ್ಲ ಎಂದು ಕೆಲವರು ಹೇಳುತ್ತಾರೆ. ಆದುದರಿಂದ ನಾವು ಇದರ ಬಗ್ಗೆ ತರ್ಕ ಕೂಡ ಮಾಡಬೇಕಾಗುತ್ತದೆ. ಏಕೆಂದರೆ. ಕಾನ್‌ಸ್ಟಿಟ್ಯೂಷನ್ ಆಫ್ ಇಂಡಿಯಾ ಏಳನೆಯ ಷೆಡ್ಯೂಲ್ ಲಿಸ್ಟ್ ೬೬ ಅನ್ನು ತಾವು ನೋಡಿ. ಯೂನಿವರ್ಸಿಟಿ ಬಗ್ಗೆ ಒಂದು ವ್ಯಾಪಕವಾದಂಥ ವಿಚಾರವನ್ನು ಹೇಳಿದ್ದಾರೆ.

VII Schedule-List : 66.

> "Co-ordination and determination of standards in institutions for higher education or research or scientific and technical institutions.

ಈ ವಿಚಾರವನ್ನು ಈ ಬಿಲ್ ಮಾಡುವಾಗ ಆಲೋಚನೆ ಮಾಡಿದ್ದೀರೋ ಇಲ್ಲವೋ., You have to apply your mind. You may take your own decision, introduce your own amendments, that is a different matter, ಆದರೆ ಇನ್ನೊಂದು ನಮ್ಮ ಗವರ್ನರ್ ವಿಚಾರ ಬರುತ್ತದೆ. ತಾವು Spirit behind that article or list will have to be taken into consideration. Of course, it is a concurrent list. ಕನ್‌ಕರೆಂಟ ಲಿಸ್ಟ್‌ನಲ್ಲಿ ಇದೆ, ಅದರ ಮೇಲೆ ನಾವು ಮಾಡುತ್ತೇವೆ, ಅದಕ್ಕೆ ಪ್ರೆಸಿಡೆಂಟ್ ಅಸೆಂಟ್ ಎನ್ನುವ ಪ್ರಶ್ನೆ ಪ್ರತ್ಯೇಕ. ಆದರೆ.Tomorrow President may not assent to you. How do you over come this?...ಅದನ್ನು ತಾವು ವಿಚಾರ ಮಾಡಬೇಕು. ಇದನ್ನು ತಾವು ವಿಶ್ಲೇಷಣೆ ಮಾಡಿದ್ದೀರಾ? ಏಕೆಂದರೆ ತಮಗೆ ಗೊತ್ತಿದೆ. ಅದು ಕರ್ನಾಟಕ ರಾಜ್ಯದಲ್ಲಿ ಮಾತ್ರವಲ್ಲ ಎಲ್ಲಾ

ರಾಜ್ಯಗಳಲ್ಲಿ Governor is invested with certain power as far as Universiteis are concerned. Constitutional safeguards will have to be met by the Governor, ಈಗ ಗವರ್ನರ್ ಯಾರು ಬರುತ್ತಾರೆ ಅವರಲ್ಲಿ ವ್ಯಕ್ತಿಗಳು ಮುಖ್ಯವಲ್ಲ ಆದರೆ ಆ ಸ್ಥಾನ ಮುಖ್ಯ ಏಕೆಂದರೆ The office of the Governor, both as Governor and Chancellor ವೈಸ್ ಛಾನ್ಸಲರ್ ಯಾವರೀತಿ ನಿರ್ವಹಿಸಬೇಕು ಎಂದು ಸ್ಪಷ್ಟವಾದಂಥ ಆರ್ಟಿಕಲ್ಸ್ ಇಲ್ಲದೇ ಇದ್ದರೂ ಕೂಡ ಕಾನ್‌ಸ್ಟಿಟ್ಯೂಷನ್ ಆಫ್ ಇಂಡಿಯಾದಲ್ಲಿ and the list-66 attracts that. ಆದುದರಿಂದ ಯಾವ ರೀತಿ ಕೋ ಆರ್ಡಿನೇಷನ್ ಡಿಟರ್ಮಿನೇಷನ್ ಮಾಡಬೇಕು, ಸ್ಟಾಂಡರ್ಡ್ ಡಿಟರ್ಮಿನೇಷನ್ ಮಾಡಬೇಕು, ಇದರ ಬಗ್ಗೆ The Union Government has got that right because it is a Union list. ಆದುದರಿಂದ ವೈಸ್ ಛಾನ್ಸಲರ್ ಅವರನ್ನು ಬದಲಾವಣೆ ಮಾಡತಕ್ಕಂಥ ಸಂದರ್ಭದಲ್ಲಿ ತಾವು ಮಿನಿಸ್ಟ್ರಿ ಆಫ್ ಎಜುಕೇಷನ್ ಜೊತೆಯಲ್ಲಿ ವಿಚಾರ ಮಾಡಿದ್ದೀರಾ ಯೂನಿವರ್ಸಿಟಿ ಗ್ರಾಂಟ್ಸ್ ಕಮಿಷನ್‌ಗೆ ಡ್ರಾಫ್ಟ್ ಬಿಲ್ಲನ್ನು ಕಳಿಸಿದ್ದೀರಾ ? ಅದರ ಕರೆಸ್ಪಾಂಡೆನ್ಸ್ ಇದ್ದರೆ Please place all the details before this House.

ಶ್ರೀ ಎಂ. ರಘುಪತಿ.—ಯೂನಿವರ್ಸಿಟಿ ಗ್ರಾಂಟ್ಸ್ ಕಮಿಷನ್ ಜೊತೆಯಲ್ಲಿ ಚರ್ಚೆ ಮಾಡಿದ್ದೇವೆ ಮತ್ತು ಗವರ್ನರ್ ಜೊತೆಯಲ್ಲೂ ಚರ್ಚೆ ಮಾಡಿದ್ದೇವೆ ಎರಡೂ ಕಡೆ ಮಾಡಿದ್ದೇವೆ. ನಾಳೆ ಬಿಲ್ ಪ್ಲೇಸ್ ಮಾಡಲೇಬೇಕಾಗುತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಗವರ್ನರ್‌ರವರ ಹತ್ತಿರ ವೈಯುಕ್ತಿಕವಾಗಿ ಚರ್ಚೆ ಮಾಡತಕ್ಕಂಥ ಪ್ರಶ್ನೆ ಇಲ್ಲಿಲ್ಲ. Governor should also conform to the spirit which is enueniated in the Constitution of India. ಏತಕ್ಕೆಂದರೆ, ಅವರ ಅಭಿಪ್ರಾಯ ಇಲ್ಲಿ ಮುಖ್ಯವಲ್ಲ. Governor may feel that he will be influenced by actions which is governed at that time. That is not important. ಅವರಿಗೆ ತಾವು ಜವಾಬ್ದಾರಿ ನಿರ್ವಹಿಸಬೇಕು, ಯಾವುದು ನಿರ್ವಹಿಸಬಾರದು ಎನ್ನುವುದು ಮುಖ್ಯವಲ್ಲ. But as a Chancellor and Governor what right he has to exercise under the Constitution, that is important. ಇಲ್ಲದೇ ಹೋದರೆ ಯೂನಿವರ್ಸಿಟಿ ಆಕ್ಟ್‌ನಲ್ಲಿ ಛಾನ್ಸಲರ್‌ಗೆ ಸೀಮಿತವಾದಂಥ ಕೆಲವು ಅಧಿಕಾರಗಳನ್ನು ಏಕೆ ಕೊಡಬೇಕು ? ಇದನ್ನು ಮಾಡಲೇಬೇಕಾಗಿಲ್ಲ. In exercising the authority, the Chancellor has to maintain certain standards. Letter and spirit behind the constitution has to be looked into.

AN HON. MEMBER.—Statement of Objects and Reasons ನಲ್ಲಿ It is based on the recommendations of the Review Commission...ಎಂದು ಇದೆ.

Sri M. Veerappa Moily.—You please tell us in your reply, what are the recommendations of the University Grants Commission ? All these amendments are not from University Grants Commission. There may be few. Again it is a debatable point. Have you gone into the item-66 in the 7th Schedule of Union List ? Have you examined the implications arising out of this ? ಡಾ॥ ಕೆ. ಎನ್. ರಾಜ್‌ರವರ ಅಧ್ಯಕ್ಷತೆಯಲ್ಲಿ ಶ್ರೀ ಜಗನ್ನಾಥ ರೆಡ್ಡಿಯವರು ಅದರ ಸದಸ್ಯರಾಗಿದ್ದರು. ಅವರು ಆಂಧ್ರ ಯೂನಿವರ್ಸಿಟಿಯಲ್ಲಿ ವೈಸ್‌ಚಾನ್ಸಲರ್ ಆಗಿದ್ದವರು. ಅದರಲ್ಲಿ ಶ್ರೀ ಸಿ ಎನ್. ಆರ್. ರಾವ್‌ರವರೂ ಇದ್ದಾರೆ. ಅವರೂ ಕೂಡ ಪ್ರಮುಖರಾದಂಥವರು. ಇವರೆಲ್ಲರೂ ಸೇರಿ ದಿನಾಂಕ ೫-೮-೮೦ರಂದು ಸರ್ಕಾರಕ್ಕೆ ವರದಿಯನ್ನು ಕೊಟ್ಟಿದ್ದಾರೆ. ಅದನ್ನು ಜಾರಿ ಮಾಡಬೇಕೆಂದು ಹೇಳಿದ್ದಾರೆ. ಆ ವರದಿಯನ್ನು ಕೊಟ್ಟ ಮೇಲೆ ಸಾಕಷ್ಟು ಚರ್ಚೆಯಾಯಿತು. ನಮ್ಮ ಸರ್ಕಾರವಿರುವಾಗ ಕೂಡ ಸಾಕಷ್ಟು ಚರ್ಚೆಯಾಗಿದೆ. ನಾನು ಅನೇಕ ಅಮೆಂಡ್‌ಮೆಂಟ್‌ಗಳನ್ನು ನೋಡಿದ್ದೇನೆ. ಕೆಲವು ಪ್ರಮುಖವಾದಂತಹ ಅಮೆಂಡ್‌ಮೆಂಟ್‌ಗಳನ್ನು ಮಾಡಿದ್ದೀರಿ ಆದರೆ. ಅದು ರಾಜ್ ಕಮಿಷನ್ ವರದಿಗನುಗುಣವಾಗಿಲ್ಲವೆಂದು ಹೇಳಬೇಕಾಗುತ್ತದೆ. ಇಂಟರ್ ಯೂನಿವರ್ಸಿಟಿ ಬೋರ್ಡ್ ಎಂದ

ಇಲ್ಲಿ ಮಾಡಿದ್ದೀರಿ. ಸೆಕ್ಷನ್ ೬೧–ಬಿ ಯಲ್ಲಿ ಇಂಟ್ರಡ್ಯೂಸ್ ಮಾಡಿ ಕ್ಲಾಸ್ ೪೨ರಲ್ಲಿ ತಂದಿದ್ದೀರಿ. ರಾಜ್ ಕಮಿಷನ್ ವರದಿಯ ಪ್ರಕಾರ ಇಂಟರ್ ಯೂನಿವರ್ಸಿಟಿ ಬೋರ್ಡ್ ಯಾವುದಕ್ಕೆ ಉಪಯೋಗವಾಗಬಹುದೆಂದು ಪ್ರಸ್ತಾಪ ಮಾಡಿದ್ದಾರೆ. Sir, I am readnig from Raj Commission Report, para 2.5 wherein it is observed thus;

> "Moreover, problems such as those posed by migration can be resolved in other ways, such as through some liason organisation set up by the Universities in the State for promoting co-ordination and closer interaction between. We recommend the formation of a State Inter-University Board for this purpose."

Therefore. it is only intended to be a liason office. But, you have given a very high status to this State Inter-University Board. In fact, it is meant for P.R.O. job. Are you going to become a Glorified Public Relations Officer of University ? Your status is higher than the Vice-Chancellor. Why do you want to become P.R.O. ? The Inter-Univrsity Board is only a glorified Public Relation Office is according to Raj Commission Report. It is only intended to be a liason office in the matters of migration and to sort out Inter-University problems. At the most, it will be like a public Grievances Cell. However, you have given a very different status which is not recommended by the Raj Commission. You heve probably mistaken this Inter-University Board concept to the University Reviw Commission. There is a mistake which has been committed by you, othewise, there was no necessety of putting this Clause 61 (b). Clause-61 refers to University Review Commission In fact, the extire Chapter-11 of the original Act pertains to Review Commission. Its scope is differnt. ರಾಜ್ ಕಮಿಷನ್ ಮಾಡಿದ ಹಾಗೆ ಆಗಾಗ ಬದಲಾವಣೆ ಮಾಡಬೇಕಾದರೆ ಮತ್ತೆ ಕಮಿಷನ್ ನೇಮಕ ಮಾಡತಕ್ಕಂತಹ ಹಕ್ಕು ಇಂತಕ್ಕಂಥ ಚಾಪ್ಟರ್‌ನಲ್ಲಿ ಇಂಟರ್ ಯೂನಿವರ್ಸಿಟಿ ಬೋರ್ಡ್ ಅನ್ನು ಏಕೆ ಸೇರಿಸಿದ್ದೀರಿ? I do not understand the bringing in of this Inter-University Board here. perhaps the framers in the Law Department while drafting might have mistaken. You connot place any thing any where. please redraft it. The concept of Review Commission is totally different. Some important recommendations have been made by Raj Commission. They have recommended a State Commission for Higher Education which will be consisting of educational experts from time to time. ಮಾನ್ಯ ಕೆ.ಹೆಚ್. ಪಾಟೀಲರು ಹಾಗೂ ಇನ್ನೂ ಕೆಲವು ಸದಸ್ಯರುಗಳು ಕೆಲವು ಯೂನಿವರ್ಸಿಟಿಯಲ್ಲಿ ಕಡಿಮೆ ಮಾರ್ಕ್ಸ್ ಕೊಡುತ್ತಾರೆಂದು ಹೇಳಿದರು. ಈಗ ನಾವು ಯೂನಿವರ್ಸಿಟಿಯಲ್ಲಿ ಸಿಲಬಸ್, ಸ್ಟ್ಯಾಂಡರ್ಡ್ ಮೈಂಟೇನ್ ಮಾಡುವುದಿಲ್ಲ. ಸೌತ್ ಕೆನರಾದ ಯೂನಿವರ್ಸಿಟಿಯಲ್ಲಿ ಮಾರ್ಕ್ಸ್ ಕಡಿಮೆ ಕೊಡುತ್ತಾರೆ ಧಾರವಾಡದಲ್ಲಿ ಯೂನಿವರ್ಸಿಟಿಯು ಹೆಚ್ಚು ಮಾರ್ಕ್ಸ್ ಕೊಡುತ್ತಾರೆ ಈಗ ಮಾರ್ಕ್ಸ್ ನೋಡಿ ಉದ್ಯೋಗ ಕೊಡುವ ಕಾಲ ಬಂದಿದೆ. ಸ್ಟ್ಯಾಂಡರ್ಡ್ ಹಾಗೂ ಡಿಸಿಪ್ಲಿನ್ ಅನ್ನು ಇವರು ಮೈಂಟೇನ್ ಮಾಡಬೇಕು. By this the

brilliant students will suffer. The less intelligent students will climb over the ladder. There fore, I suggest, Let there be a State Commission for Higher Education.

ಆದುದರಿಂದ ತಾವು ಉನ್ನತ ಶಿಕ್ಷಣಕ್ಕಾಗಿ ಒಂದು ರಾಜ್ಯ ಮಟ್ಟದ ಕಮಿಷನ್ ಇರಲಿ ಎಂದು ಒಂದು ಅಮೆಂಡ್‌ಮೆಂಟ್ ತರಬೇಕಾಗಿತ್ತು. ಅದು ಬಹಳ ಪ್ರಮುಖ್ಯವಾದುದು. ಆದರೆ ತಾವು ಆ ಕೆಲಸ ಮಾಡಲಿಲ್ಲ. ಇದು ಇಡೀ ರಾಜ್ ಕಮಿಷನ್‌ನ ವರದಿಯ ಒಂದು ತಿರುಳು. ಅದನ್ನು ಬಿಟ್ಟು ನೀವು ಉಳಿದ ಎಲ್ಲಾ ವಿಚಾರಗಳಿಗೆ ತಿದ್ದುಪಡಿ ತಂದಿದ್ದೀರಿ. ಇದು ಏನಾಗಿದೆ ಎಂದರೆ, you will be running a ship without a Captain. ನೀವು ಅಕ್ಯಾಡಮಿಕ್ ಸ್ಟೇಟಸ್ ಮೇಲೆ, ಅಡ್ಮಿನಿಸ್ಟ್ರೇಷನ್ ಮೇಲೆ, ಕೋ-ಆರ್ಡಿನೇಶನ್ ಮೇಲೆ ಒಂದು ಹಿಡಿತವನ್ನು ಇಟ್ಟುಕೊಳ್ಳಬೇಕು. ಇಂದು ವಿಶ್ವವಿದ್ಯಾನಿಲಯಗಳಿಗೆ ಆಟಾನಮಿ ಕೊಡತಕ್ಕ ಅವಶ್ಯಕತೆ ಇದೆ. ತಾವು ಇದನ್ನೆಲ್ಲಾ ಬಿಟ್ಟರೆ, Each University may become an empire for each caste, or for some group of people or for some vested interests. Like stagnated water, it may stink. I expected you to bring an amendment for State Commission for higher education because Raj Commission wanted that first. But you did not do it. Instead, you seem to have given that status to the Inter-University Board which is supposed to be a glorified Public Relations Office for which you want to be the Chairman. My suggestion is that the Education Minister should not become the Chairman after the Inter-University Board is constituted. Why should he come to that position of becoming a Public Relation Officer for all the Universities put together? Let some educational experts or some non-officials or intellactuals become the Chairman of that Board and not the Hon'ble Minister for Education. Otherwise, when there is hearing, as the Education Minister he has to sit over the judgement and he will be deprived of that right. The Education Minister should always sit as a higher pedant and look at the machinery ಯಾವ ಯಾವ ಮೆಷಿನರಿ ಯಾವ ರೀತಿ ಕೆಲಸ ಮಾಡುತ್ತಿದೆ, ಎಲ್ಲೆಲ್ಲಿ ಬ್ಯಾಲೆನ್ಸ್ ಡಿಸ್ಟರ್ಬ್ ಆಗುತ್ತಿದೆ ಆ ಬ್ಯಾಲೆನ್ಸನ್ನು ಮೈಂಟೇನ್ ಮಾಡತಕ್ಕ ಒಂದು ಅಥಾರಿಟಿಯನ್ನು ತಾವು ಇಟ್ಟುಕೊಳ್ಳಬೇಕು ಇಲ್ಲದಿದ್ದರೆ you become a party in settling some of the disputes and ultimately you become unpopular, whether Sri Raghupathy is the Education Minister or some other is the Education Minister. ಮತ್ತು ಇಂಟರ್ ಯೂನಿವರ್ಸಿಟಿ ಬೋರ್ಡ್‌ಗೆ ಯಾವ ಸ್ಟೇಟಸ್‌ನ್ನು ಕೊಡಬೇಕು ಎಂದು ರಾಜ್ ಕಮಿಷನ್‌ನವರು ಹೇಳಿದ್ದಾರೆ ಅದನ್ನು ಸೀಮಿತಗೊಳಿಸುವ ತಿದ್ದುಪಡಿಯನ್ನು ತರುವುದು ಯೂನಿವರ್ಸಿಟಿಗಳ ಆರೋಗ್ಯ ದೃಷ್ಟಿಯಲ್ಲಿ ಕ್ಷೇಮ ಎಂದು ನನಗೆ ತೋರುತ್ತದೆ. ಇಲ್ಲದಿದ್ದರೆ ಇದಕ್ಕೆ ಯಾವ ಆಟಾನಿಮಿಯನ್ನು ಕೊಡಬೇಕು ಎಂದು ತಾವು ಹೇಳುತ್ತಿದ್ದೀರಿ ಅದನ್ನು ಮತ್ತೊಂದು ಕೈಯಿಂದ ಕಿತ್ತುಕೊಂಡ ಪ್ರಸಂಗ ಬರಬಹುದು. ಮುಂದೆ ಈ ಪವರ್ ಕೊಡಿ, ಆ ಪವರ್ ಕೊಡಿ ಎಂದು ಒಂದೊಂದಕ್ಕೂ ಅಮೆಂಡ್‌ಮೆಂಟ್ ಬರಬಹುದು ಮತ್ತು ಈ ರೀತಿ ಪ್ರತಿಯೊಂದಕ್ಕೂ ಅಮೆಂಡ್‌ಮೆಂಟ್ ತಂದು you go on acquiring power and ultimately you become the Director of Higher education and the rest of of the people will become non-entities. In such case, Vice-Chancellor will have to come to you frequently. Please don't make the Vice-Chancellor to como to your office. I could recall that last year or before that one of the Vice-Chancellor was sitting in the

Officers' Gallery. I don't want to mention his name. Why should they come to Vidhana Soudha? Even they go to the Section Officers and Under-Secretaries. ನೀವು ಇಂಟರ್ ಯೂನಿವರ್ಸಿಟಿ ಬೋರ್ಡ್ ಮಾಡಿದರೆ ಖಂಡಿತ ಉಪಕುಲಪತಿಗಳು ಸೆಕ್ಷನ್ ಆಫೀಸರ್ಸ್ ಮತ್ತು ಅಂಡರ್ ಸೆಕ್ರೆಟರಿಗಳ ಹತ್ತಿರ ಬಂದು ವ್ಯವಹಾರ ಮಾಡತಕ್ಕ ಪ್ರಸಂಗ ಬರಬಹುದು ಎಂದು ನನಗೆ ಭಯವಾಗುತ್ತಿದೆ. ಏಕೆಂದರೆ ಕುಲಪತಿಗಳಿಂದ ಅಧಿಕಾರವನ್ನು ಕಿತ್ತುಕೊಳ್ಳುತ್ತಿದ್ದೀರಿ ಮತ್ತು ಇಂಟರ್ ಯೂನಿವರ್ಸಿಟಿ ಬೋರ್ಡನ್ನು ನಿಮ್ಮ ಕೈಯಲ್ಲಿ ತೆಗೆದುಕೊಳ್ಳುತ್ತಿದ್ದೀರಿ. Inter-University Board of which you are the Chairman and the rest of the officers are the heads. Therefore, indirectly you will be controlling the entire Board. I know Hon'ble Minister Sri M Raghupathy has an imposing physical personality to dominate.

ಶ್ರೀ ಬಿ. ಬಸವಲಿಂಗಪ್ಪ.—ಈಗ ಮಾನ್ಯ ಸದಸ್ಯರಾದ ಮೊಯಿಲಿಯವರು ಏನು ಒಂದು ವಾದವನ್ನು ಈ ಸಭೆಯ ಮುಂದಿಟ್ಟಿದ್ದಾರೆ ಅದನ್ನು ನಾನು ಕೇಳಿದ್ದೇನೆ. ಉಪಕುಲಪತಿಗಳು ಕೆಟ್ಟವರಾಗಿದ್ದರೆ, ದಾರಿ ಬಿಟ್ಟು ನಡೆದರೆ, ನೀತಿಗೆಟ್ಟರೆ, ನ್ಯಾಯದ ವಿರುದ್ಧ ನಡೆದರೆ, ಅಂತಹ ಸಂದರ್ಭದಲ್ಲಿ ಸರ್ಕಾರಕ್ಕೆ ಅಧಿಕಾರ ಇರಬೇಕು ಅಂತಹವರನ್ನು ದಾರಿಗೆ ತರಬೇಕು. ಆದರೆ ಅವರು ಸೂಪರ್ ಹ್ಯೂಮನ್ ಬಿಯಿಂಗ್, ಅವರು ಸೆಕ್ರೆಟರಿಯಟ್‌ಗೆ ಬರಬಾರದು, ಗ್ಯಾಲರಿಯಲ್ಲಿ ಕುಳಿತುಕೊಳ್ಳಬಾರದು ಎಂದು ಏನು ಮಾನ್ಯ ಮೊಯಿಲಿಯವರು ಹೇಳಿದ್ದಾರೆ ಅದಕ್ಕೂ ಮಾನ್ಯ ಶಿಕ್ಷಣ ಸಚಿವರು ಉತ್ತರ ಕೊಡಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ.— ಆದುದರಿಂದ ತಾವು ಈ ಒಂದು ಇಂಟರ್ ಯೂನಿವರ್ಸಿಟಿ ಬೋರ್ಡ್‌ಗೆ ಏನು ಒಂದು ಸ್ಟೇಟಸ್ ಮಾಡಿದ್ದೀರಿ ಅದನ್ನು ದಯಮಾಡಿ ತೆಗೆಯಿರಿ. ಯಾವ ಉದ್ದೇಶಕ್ಕಾಗಿ ಇಂಟರ್ ಯೂನಿವರ್ಸಿಟಿಯನ್ನು ಮಾಡಬೇಕೋ ಆ ಉದ್ದೇಶಕ್ಕಾಗಿ ಮಾಡಿ. ಆದರೆ ಹೆಚ್ಚು ಅಧಿಕಾರವನ್ನು ತಾವು ಇಟ್ಟುಕೊಳ್ಳತಕ್ಕಂತಹ ಒಂದು ಇಂಟರ್ ಯೂನಿವರ್ಸಿಟಿ ಬೋರ್ಡ್ ಬೇಕಾಗಿಲ್ಲ. ಅದಕ್ಕೆ ಬದಲಾಗಿ ರಾಜ್ ಕಮಿಷನ್ ವರದಿ ಪ್ರಕಾರ ತಾವು ಕಮಿಷನರ್ ಫಾರ್ ಹೈಯರ್ ಎಜುಕೇಷನ್ ಎಂದು ಮಾಡುವುದು ಲೇಸು.

ರಾಜ್ ಕಮಿಷನ್ ವರದಿ ಪ್ಯಾರಾ ೨.೪೧ ನ್ನು ನಾನು ಈಗ ಉಲ್ಲೇಖ ಮಾಡುತ್ತೇನೆ. "Among the functions of the proposed State Commission for Higher Education, important one is that it should make available funds for the development of under-graduate colleges. As indicated earlier, these are also included to make available such supplementary funds."

There is a very big chapter on the proposals for improvement. ನಿಜವಾದಂತಹ ಆಟಾನಮಿಯನ್ನು ಇವುಗಳಿಗೆ ಕೊಡಬೇಕೆಂಬ ಇಚ್ಛೆ ತಮಗಿದ್ದರೆ, ಉಳಿದ ಪವರ್ಸ್ ಏನು ಕೊಟ್ಟಿದ್ದೀರಿ, ಅವುಗಳನ್ನು ಆಯಾ ವಿಶ್ವವಿದ್ಯಾನಿಲಯಗಳು ವ್ಯವಸ್ಥಿತವಾಗಿ ನಿರ್ವಹಿಸುವುದು ಅತ್ಯಗತ್ಯ ಅದನ್ನು ತಾವು ವಿಚಾರಮಾಡಬೇಕೆಂದು ನಾನು ವಿನಂತಿಸಿಕೊಳ್ಳುತ್ತೇನೆ. ಮತ್ತು ಇಂಟರ್ ಯೂನಿವರ್ಸಿಟಿ ಬೋರ್ಡ್‌ನಲ್ಲಿ ಎಲ್ಲಾ ಅಧಿಕಾರಿಗಳೇ ಇದ್ದು ಎಲ್ಲಾ ಅಧಿಕಾರವನ್ನು ನೀವೇ ನಿರ್ವಹಿಸತಕ್ಕ ಒಂದು ಪ್ರಯತ್ನವನ್ನು ನಾನು ಕಾಣುತ್ತಿದ್ದೇನೆ. ಈ ವಿಷಯದಲ್ಲಿ ಹೆಚ್ಚು ವಿಸ್ತರಣೆ ಮಾಡುವುದಕ್ಕೆ ನಾನು ಹೋಗುವುದಿಲ್ಲ. ಇನ್ನೂ ಅನೇಕ ಉತ್ತಮವಾದಂತಹ ಕೆಲವು ತಿದ್ದುಪಡಿಗಳನ್ನು ತರಬೇಕೆಂದು ರಾಜ್ ಕಮಿಷನ್‌ನವರು ಹೇಳಿದ್ದಾರೆ. ಆದರೆ ಅವುಗಳನ್ನು ತಾವು ಇನ್‌ಕಾರ್ಪೊರೇಟ್ ಮಾಡಿಲ್ಲ; ಅವುಗಳನ್ನು ಕೈಬಿಡಲು ಏನು ಕಾರಣವೆಂದು ತಾವು ಸ್ಪಷ್ಟೀಕರಣ ಕೊಡಬೇಕು. ಕಾರಣ ತಾವು ಕುಲಪತಿಗಳಿಂದ ಅಧಿಕಾರವನ್ನು ಕಿತ್ತುಕೊಂಡಿದ್ದೀರಿ. ತಾವು ಏನೇ ಮಾಡಿದರೂ ಕೂಡ ಆರ್ಡಿನೆನ್ಸ್ ವಿಚಾರದಲ್ಲಾಗಲಿ, ಅಪಾಯಿಂಟ್‌ಮೆಂಟ್ಸ್ ವಿಚಾರದಲ್ಲಾಗಲಿ ಚಾನ್ಸಲರ್ ಅವರನ್ನು ಅಪಲೇಟ್ ಅಥಾರಿಟಿಯನ್ನಾಗಿ ಮಾಡಬೇಕು ಏಕೆಂದರೆ. ರಾಜ್ ಕಮಿಷನ್‌ನವರ ಶಿಫಾರಸ್ಸಿನ ಪ್ರಕಾರ' ಕುಲಪತಿಗಳನ್ನು ಅಪಲೇಟ್ ಅಥಾರಿಟಿಯನ್ನಾಗಿಟ್ಟುಕೊಳ್ಳುವುದು, ಚೆಕ್ಸ್ ಅಂಡ್ ಬ್ಯಾಲೆನ್ಸ್‌ನ್ನು ಮೇಂಟೇನ್ ಮಾಡಲಿಕ್ಕೆ ಬಹಳ ಅಗತ್ಯ ಎಂಬುದಾಗಿ ಬಹಳ ಸ್ಪಷ್ಟವಾಗಿ ಹೇಳಿದ್ದಾರೆ, ತಾವು ಇದನ್ನು ವ್ಯವಸ್ಥಿತವಾಗಿ ತಮ

ತಿದ್ದುಪಡಿಯಲ್ಲಿ ಮಾಡಿಲ್ಲ ಎಂಬುದು ಈ ಮಸೂದೆಯನ್ನು ನೋಡಿದಾಗ, ನನಗೆ ಕಾಣಿಸುತ್ತದೆ. ಇನ್ನೂ ಅನೇಕ ಸೂಚನೆಗಳನ್ನು ಒಪ್ಪಿದ್ದಾರೆ. ಇದರಲ್ಲಿ ಮೂಲಭೂತವಾದ ಬದಲಾವಣೆಗಳನ್ನು ತಾವು ಮಾಡಿದ್ದೀರಿ

ಇನ್ನು ಸೋಷಿಯಲ್ control and coordinat on of Universities, ಅದೂ ಕೂಡ ರಾಜ್ ಕಮೀಷನ್‌ನ ರೆಕಮೆಂಡೇಷನ್ ಪ್ರಕಾರ ಸರಿಯಾಗಿ ಅದರ ವ್ಯವಸ್ಥೆ ಇದರಲ್ಲಿ ಆಗಿಲ್ಲ. ರಾಜ್ ಕಮೀಷನ್ ಏನು ರೆಕಮೆಂಡೇಷನ್ ಮಾಡಿದ್ದಾರೆ ಅದನ್ನು ತಾವು ವ್ಯವಸ್ಥಿತವಾಗಿ ಕಾಣಿಸಲಿಲ್ಲ. ಆದ್ದರಿಂದ ಈ ಯೂನಿವರ್ಸಿಟಿ ಬಿಲ್ಲು ತಂದ ಸಂದರ್ಭದಲ್ಲಿ ಇದು ಹತೋಟಿ ತಪ್ಪಿ ಯೂನಿವರ್ಸಿಟಿಗಳು ನಡೆಯಲಿಕ್ಕೆ ಕಾರಣ ಕೊಡಬಹುದು ಎನ್ನುವ ಶಂಕೆಯಿಂದ ಆಗುತ್ತದೆ. ಅದನ್ನು ನಿವಾರಿಸತಕ್ಕ ಚೆಕ್ಸ್ ಅಂಡ್ ಬ್ಯಾಲೆನ್ಸ್ ಅದು ಪೂರ್ತಿ ಇಲ್ಲಿ ಕಾಣುತ್ತಿಲ್ಲ. ರಾಜ್ಯ ಸರ್ಕಾರ ಒಂದು ಕಡೆ ಅಧಿಕಾರ ಬೇಡ ಬೇಡ ಎಂದು ಹೇಳುವುದು. ಮತ್ತೆ ಅವುಗಳನ್ನು ಅಟಾನಮಸ್ ಎಂದು ಮಾಡಿದರೂ ಕೂಡ ಅನೇಕ ಕಡೆ...an invisible hand of the State Government is all pervasive in many of the sections. ಇಷ್ಟು ಕಾಲ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಸನ್ಮಾನ್ಯ ಸಭಾಧ್ಯಕ್ಷರೆ, ವಿಶ್ವವಿದ್ಯಾನಿಲಯಗಳ ಆಡಳಿತ ವ್ಯವಸ್ಥೆ ವ್ಯವಸ್ಥಿತವಾಗಿ ನಡೆಯಲಿಕ್ಕೆ ಯೂನಿವರ್ಸಿಟಿ ರಿವ್ಯೂ ಕಮಿಷನ್‌ನವರು ರೆಕಮೆಂಡೇಷನ್ ಮಾಡಿರುವಂಥ ಕೆಲವು ಸಲಹೆಗಳ ಮೇರೆಗೆ ಕೆಲವು ತಿದ್ದುಪಡಿಗಳನ್ನು ಸನ್ಮಾನ್ಯ ಸಚಿವರು ತಂದಿದ್ದಾರೆ. ಈ ಸದನದಲ್ಲಿ ಕೆಲವು ಸಾರಿ ಯೂನಿವರ್ಸಿಟಿಯಲ್ಲಿ ಆಗತಕ್ಕ ಅನ್ಯಾಯ, ಅವ್ಯವಹಾರದ ಬಗ್ಗೆ ಪ್ರಸ್ತಾಪ ಮಾಡಿದಾಗ ಸನ್ಮಾನ್ಯ ಮಂತ್ರಿಗಳು ಎದ್ದು ನಿಂತು ಏನು ಹೇಳುತ್ತಾರೆಂದರೆ ಯೂನಿವರ್ಸಿಟಿ ವ್ಯವಹಾರಗಳು ಸ್ವತಂತ್ರವಾಗಿರುವಂಥದ್ದು ಸರ್ಕಾರ ಪ್ರವೇಶ ಮಾಡಲಿಕ್ಕೆ ಬರುವುದಿಲ್ಲ, ನೀವು ಏನು ಪ್ರಸ್ತಾಪ ಮಾಡಿದ್ದೀರಿ ಅದನ್ನು ಅವರಿಗೆ ಕಳುಹಿಸಿಕೊಡುತ್ತೇನೆಂದು ಹೇಳುತ್ತಿರುತ್ತಾರೆ. ಅದಕ್ಕೋಸ್ಕರ ಒಂದು ಹೆಚ್ಚಿನ ತಿದ್ದುಪಡಿ ಮೂಲಕ ಅಧಿಕಾರ ಕೊಟ್ಟಮೇಲೆ ಮತ್ತೆ ನಮಗೂ ಯೂನಿವರ್ಸಿಟಿಗೂ ಸಂಬಂಧ ಇಲ್ಲ ಎನ್ನುವ ಪರಿಸ್ಥಿತಿ ಬರಬಹುದು ಎನ್ನುವಂಥ ಭಯ ನಮಗೆ ಇದೆ. ಆದ್ದರಿಂದ, ವಿಶ್ವವಿದ್ಯಾನಿಲಯಗಳು ಯಾವರೀತಿ ನಡೆಯುತ್ತವೆ, ಸಮಾಜದಲ್ಲಿ ಅವುಗಳಿಗೆ ಗೌರವ ಇದೆಯೋ ಎಂದು ಪ್ರಸ್ತಾಪ ಮಾಡಬೇಕಾಗಿದೆ. ಆಡಳಿತ ವ್ಯವಸ್ಥೆಯ ಸುಧಾರಣೆಗೋಸ್ಕರ ಕೆಲವೊಂದು ಸಲಹೆಗಳನ್ನು ಕೊಟ್ಟರೂ ಸಹ ಇವತ್ತಿಗೂ ವಿದ್ಯಾರ್ಥಿ ವಿದ್ಯಾರ್ಥಿನಿಯರ ಸ್ಥಿತಿ ಏನಾಗಿದೆ ? ಕೆಲವು ಯೂನಿವರ್ಸಿಟಿಗಳಲ್ಲಿ ಪರೀಕ್ಷೆ ಆದನಂತರ ಬಂದಿರುವಂಥ ರಿಸಲ್ಟ್ಸ್ ಪರಿಶೀಲನೆ ಮಾಡುವಂಥ ವ್ಯವಸ್ಥೆ ಮಾಡಿ. ಮಾನ್ಯ ಬಸವಲಿಂಗಪ್ಪನವರು ಮಾತನಾಡುತ್ತಾ, ಇಲ್ಲಿ ಜಾತೀಯತೆ ತಾಂಡವವಾಡುತ್ತಿದೆ ಅದನ್ನು ತಡೆಯಲಿಕ್ಕೆ ಏನಾದರೂ ಪ್ರಯತ್ನ ಮಾಡುತ್ತೀರಾ ಎಂದು ಕೇಳುತ್ತಿದ್ದರು. ಒಬ್ಬ ವ್ಯಕ್ತಿ ಒಂದು ಸಬ್ಜೆಕ್ಟ್‌ನಲ್ಲಿ ಪ್ರೊಫೆಸರ್ ಇರುತ್ತಾರೆ, ಅವರ ಜನಾಂಗಕ್ಕೆ ಸೇರಿದಂಥ ವಿದ್ಯಾರ್ಥಿಗಳಿಗೆ ಹೆಚ್ಚಿನ ಅಂಕ ಕೊಟ್ಟಿರುವಂಥಾದ್ದನ್ನು ತನಿಖೆ ಮಾಡಿದರೆ ಕಣ್ಣಿಗೆ ಕಾಣುತ್ತದೆ. ಪ್ರತಿಭಾವಂತ ವಿದ್ಯಾರ್ಥಿಗಳು ತಾವು ಎಷ್ಟೇ ಚೆನ್ನಾಗಿ ಪಾಠ ಪ್ರವಚನದ ಕಡೆಗೆ ಗಮನ ಕೊಟ್ಟರೂ ಸಹ ಪ್ರೊಫೆಸರ್ ವಿಮ್ಸ್ ಅಂಡ್ ಫ್ಯಾನ್ಸೀಸ್‌ಗೆ ಹೊಂದಿಕೊಂಡು ಹೋಗದೇ ಇದ್ದರೆ ಬಹಳಸಾರಿ ಅವರು ಅನುತ್ತೀರ್ಣರಾಗಿರತಕ್ಕದ್ದು ಕಡಿಮೆ ಅಂಕಗಳನ್ನು ಪಡೆದಿರತಕ್ಕದ್ದು ಸಾವಿರಾರು ಉದಾಹರಣೆಗಳು ಉಂಟು. ಇದಕ್ಕೆ ಸಾವಿರಾರು ಜನ ವಿದ್ಯಾರ್ಥಿಗಳು ಬಲಿಯಾಗಿರುವುದನ್ನು ನಾವು ಕಾಣುತ್ತಿದ್ದೇವೆ. ಮಾನ್ಯ ಬಸವಲಿಂಗಪ್ಪನವರು ಮಾತನಾಡುತ್ತಾ ಒಂದು ಮಾತನ್ನು ಹೇಳಿದರು. ವೈಸ್‌ಚಾನ್ಸಲರ್‌ರವರು ತಮ್ಮ ಗೌರವ ಕಾಪಾಡಿಕೊಳ್ಳಬೇಕು, ಅವರ ರೀತಿನೀತಿ ಸರಿ ಇಲ್ಲದೇ ಇದ್ದರೆ ಗತಿ ಏನು ಎಂದು ಹೇಳಿದರು. ನಮ್ಮ ಮೈಸೂರು ಯೂನಿವರ್ಸಿಟಿ ಇದೆ, ಒಂದು ತುಂಬಾ ಒಳ್ಳೆಯ ತಿದ್ದುಪಡಿಯನ್ನು ತಂದಿದ್ದೀರಿ. The Vice-Chancellor is made removable from office only after enquired by serving Retired Judge of High Court or Supreme Court ಇದನ್ನು ಅಮೆಂಡ್‌ಮೆಂಟ್‌ನಲ್ಲಿ ಸೇರಿಸಿದ್ದೀರಿ. ಇವೊತ್ತು ವೈಸ್‌ಚಾನ್ಸಲರ್‌ಗೆ ತಾವು ಏನು ಮಾಡಿದರೂ ನಡೆಯುತ್ತದೆ ಎನ್ನುವ ಭಾವನೆ ಇದೆ. ಅದನ್ನು ತಪ್ಪಿಸಲಿಕ್ಕೆ ಈ ಒಂದು ಒಳ್ಳೆಯ ತಿದ್ದುಪಡಿಯನ್ನು ತಂದಿದ್ದೀರಿ. ಅದೇ ರೀತಿಯಲ್ಲಿ ಗ್ರಾಜ್ಯುಯೇಟ್ಸ್ ವಿಶ್ವವಿದ್ಯಾನಿಲಯದ ಆವರಣದಲ್ಲಿ ಕನಿಷ್ಟ ಎರಡು ವರ್ಷ ಆ ಭಾಗದಲ್ಲಿ ಇರಬೇಕು, ಇಲ್ಲದೇ ಹೋದರೆ ಸೆನೆಟ್‌ಗೆ ಚುನಾವಣೆ

ಆಗುವ ಸಂದರ್ಭದಲ್ಲಿ ಅವ್ಯವಹಾರ ಆಗುತ್ತದೆಂದು ಒಂದೆರಡು ಒಳ್ಳೆಯ ತಿದ್ದುಪಡಿ ತಂದಿದ್ದೀರಿ ಅದನ್ನು ನಾನು ಸ್ವಾಗತ ಮಾಡುತ್ತೇನೆ. ಸ್ವಾಮಿ, ವೈಸ್‌ಚಾನ್ಸಲರ್ ರೀತಿನೀತಿಯ ಬಗ್ಗೆ ಮಾನ್ಯ ಬಸವಲಿಂಗಪ್ಪನವರು ಮಾತನಾಡುತ್ತಿದ್ದರು. ಈಗ ತಾವು ವೈಸ್ ಚಾನ್ಸಲರ್ ಮೇಲೆ ತನಿಖೆ ಮಾಡುವ ಕ್ರಮ ತೆಗೆದುಕೊಳ್ಳುತ್ತೇವೆಂದು ತಿದ್ದುಪಡಿ ತಂದಿದ್ದೀರಿ. ಈ ಸಂದರ್ಭದಲ್ಲಿ ತಮಗೆ ಒಂದು ಉದಾಹರಣೆಯನ್ನು ಕೊಡುತ್ತೇನೆ. ನಮ್ಮ ಮೈಸೂರು ವಿಶ್ವವಿದ್ಯಾನಿಲಯದ ಉಪ ಕುಲಪತಿಗಳ ಬಗ್ಗೆ ತುಂಬಾ ನನಗೆ ಗೌರವ ಇದೆ. ಒಂದು ನಿರ್ದಿಷ್ಟವಾದ ಸಂಗತಿಯನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಅವರು ಒಬ್ಬರು ಹಿಂದುಳಿದ ಜನಾಂಗದ, ಹರಿಜನ ಗಿರಿಜನಕ್ಕೆ ಸಂಬಂಧಪಟ್ಟ ವ್ಯಕ್ತಿ, ಅವರಿಂದ ಆ ಜನರಿಗಾದರೂ ನ್ಯಾಯ ಸಿಕ್ಕಬೇಕಲ್ಲವೇ ? ೧೯೮೫ನೇ ಸಾಲಿನಲ್ಲಿ ನಡೆದಿರತಕ್ಕ ಘಟನೆ. ಎಂ.ಬಿ.ಬಿ ಎಸ್.ಗೆ ಹೋಗಬೇಕಾದರೆ ೬೫ ಪರ್‌ಸೆಂಟ್ ಮಿನಿಮಂ ಮಾರ್ಕ್ಸ್ ಪಡೆದಿರಬೇಕು. ಆದರೆ ಅವರ ಮಗ ೩೮ ಪರ್‌ಸೆಂಟ್ ತೆಗೆದುಕೊಂಡಿದ್ದಾರೆ. ೩೮ ಪರ್‌ಸೆಂಟ್ ತೆಗೆದುಕೊಂಡವರಿಗೆ ಮ್ಯಾನೇಜ್‌ಮೆಂಟ್ ಎಸ್.ಸಿ., ಎಸ್.ಟಿ., ಸೀಟಿನಲ್ಲಿ ಸೀಟು ಕೊಡಿಸಿದ್ದಾರೆ. ಅದೇ ಅಂಬೇಡ್ಕರ್ ವಿಶ್ವವಿದ್ಯಾನಿಲಯಕ್ಕೆ ಅರ್ಜಿ ಹಾಕಿದಂಥ ಸುಮಾರು ೧೨ ಅರ್ಜಿದಾರರು, ಹೆಚ್ಚು ಅಂಕಗಳನ್ನು ಪಡೆದಿರತಕ್ಕವರು, ನನಗೆ ಅರ್ಜಿ ಬರೆದು ಈ ತರಹ ಆಗಿದೆ ಎಂದು ತಿಳಿಸಿದ್ದಾರೆ. ಅಂದರೆ, ಇವರು ಕಾನೂನಿಗೆ ಮೇಲೆ ಇರತಕ್ಕವರೆ ? ಇವರು ಕಾನೂನಿನ ಚೌಕಟ್ಟನ್ನು ಪರಿಪಾಲನೆ ಮಾಡುವುದು ಬೇಡವೆ ? ಇಂತಹವರಿಂದ ನ್ಯಾಯ ಸಿಕ್ಕುತ್ತದೆಯೇ ? ಇದು ಒಂದೇ ಅಲ್ಲ ಸ್ವಾಮಿ, ತಮಗೆ ಗೊತ್ತಿದೆ. ವಿದ್ಯಾರ್ಥಿಗಳನ್ನು ಅಂತರ್ ವಿಶ್ವವಿದ್ಯಾನಿಲಯಕ್ಕೆ ವರ್ಗಾವಣೆ ಮಾಡಬೇಕಾದರೆ ಕೆಲವೊಂದು ನಿಯಮಗಳನ್ನು ಅನುಸರಿಸಬೇಕಾಗುತ್ತದೆ. ಅದರಲ್ಲಿ ಒಂದು ಪ್ರಮುಖವಾಗಿರತಕ್ಕದ್ದು ಎಂದರೆ ವಿದ್ಯಾರ್ಥಿ ಆ ವರ್ಷದಲ್ಲಿ ಕೊನೆಯ ಪಕ್ಷ ಎಲ್ಲಾ ಸಬ್ಜೆಕ್‌ನಲ್ಲಿಯೂ ಪಾಸ್ ಮಾಡಿರಬೇಕು. ಆಗ ಅವನು ನನಗೆ ಇಲ್ಲಿಗೆ ಚೇಂಜಸ್ ಬೇಕು ಎಂದು ಕೇಳಬೇಕು. ದಾವಣಗೆರೆಯ ಡೆಂಟಲ್ ಕಾಲೇಜಿನಲ್ಲಿ ಅವರ ಮಗ ಇದ್ದರು, ಅವರನ್ನು ಬೆಂಗಳೂರಿಗೆ ವರ್ಗಾವಣೆ ಮಾಡಿದರು ಆ ಸಬ್ಜೆಕ್ಟ್‌ನಲ್ಲಿ ಇವತ್ತಿಗೂ ಅವರು ಪಾಸ್ ಆಗಿಲ್ಲ. ಯಾರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ರಕ್ಷಣೆ ಮಾಡಬೇಕೆಂದು ರಕ್ಷಣೆಯ ಭಾರವನ್ನು ವಹಿಸಿದ್ದೇವೆಯೋ ಅವರೇ ಸರಿಯಾಗಿ ಇಲ್ಲದೇ ಇದ್ದರೆ ಹೇಗೆ ? ನಿನ್ನೆ ಮೊನ್ನೆ ಪಕ್ಕದ ರಾಜ್ಯದಲ್ಲಿ ಮುಖ್ಯ ಮಂತ್ರಿಗಳು ಮಾಡಿದಂಥ ಯಾವುದೋ ಒಂದು ತಪ್ಪು ವ್ಯವಹಾರದಿಂದ ಅಧಿಕಾರ ಸ್ಥಾನಕ್ಕೆ ರಾಜೀನಾಮೆ ಕೊಡಬೇಕಾಗಿ ಬಂತು ಜನರು ಎಚ್ಚರಿಕೆಯಿಂದ ಕಾಯುವಂಥ ಕಾಲದಲ್ಲಿ, ರಾಜ್ಯದ ಒಂದು ವಿಶ್ವವಿದ್ಯಾನಿಲಯದಲ್ಲಿ ವಿದ್ಯಾರ್ಥಿಗಳಿಗೆ ನ್ಯಾಯ ದೊರಕಿಸಿಕೊಡಬೇಕಾದಂಥ ಒಬ್ಬ ವೈಸ್ ಚಾನ್ಸಲರ್ ಈ ರೀತಿಯಲ್ಲಿ ತಮ್ಮ ಅಧಿಕಾರ ದುರುಪಯೋಗ ಮಾಡಿಕೊಂಡರೆ ಅದಕ್ಕೆ ನಾವು ಏನು ಹೇಳಬೇಕು ? ದಯಮಾಡಿ ಇದರ ಬಗ್ಗೆ ತನಿಖೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಒಂದು ರೀತಿಯ ಗೊಂದಲ ವಾತಾವರಣ ಇದ್ದಾಗ ಅಲ್ಲಿರತಕ್ಕ ವಿದ್ಯಾರ್ಥಿಗಳು ಯಾರ ಬಗ್ಗೆಯೂ ಗೌರವ ಇಟ್ಟುಕೊಳ್ಳಲಿಕ್ಕೆ ಸಾಧ್ಯವಿಲ್ಲ. ತಾವು ಈ ಅಮೆಂಡ್ ಮಾಡಿದ ತಕ್ಷಣ ಎಲ್ಲಾ ವ್ಯವಸ್ಥೆ ಸರಿಹೋಗುತ್ತದೆ ಎನ್ನುವ ನಂಬಿಕೆ ನಮಗೆ ಇಲ್ಲ. ಒಬ್ಬ ಮಂತ್ರಿಯಾಗಿ, ಶಿಕ್ಷಣ ಸಚಿವರಾಗಿ ಈ ಸದನದಲ್ಲಿ ವಿಶ್ವವಿದ್ಯಾನಿಲಯಗಳಿಗೆ ಸಂಬಂಧಪಟ್ಟಂತೆ ವಿಷಯಗಳನ್ನು ಸದಸ್ಯರು ಪ್ರಸ್ತಾಪ ಮಾಡಿದಾಗ ಅದು ನನ್ನ ಕಂಟ್ರೋಲ್‌ನಲ್ಲಿ ಇಲ್ಲ, ನಾನು ಅಲ್ಲಿಗೆ ಕಳುಹಿಸಿ ಕೊಡುತ್ತೇನೆ ಎಂದು ಹೇಳಬೇಡಿ. ಅವರಿಗೆ ಸರ್ಕಾರದ ಭಯ ಇರಬೇಕು. ಆ ಭಯದ ವಾತಾವರಣವನ್ನು ನಿರ್ಮಾಣ ಮಾಡಲಿಕ್ಕೆ ಈ ಅಮೆಂಡ್‌ಮೆಂಟಿನಲ್ಲಿ ತುಂಬಾ ಒಳ್ಳೆಯ ತಿದ್ದುಪಡಿಯನ್ನು ತಂದಿದ್ದೀರಿ. ಈಗ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಏನು ಅವ್ಯವಹಾರ ನಡೆದಿದೆ ಅವರ ಕಡೆ ಮಾನ್ಯ ಮಂತ್ರಿಗಳು ಗಮನ ಕೊಡಬೇಕು. ತಾವು ತಂದಿರತಕ್ಕ ತಿದ್ದುಪಡಿ ಬಹಳ ಒಳ್ಳೆಯದು ಇದೆ. ಮಾನ್ಯ ವೀರಪ್ಪ ಮೊಯಿಲಿಯವರು ಮಾತನಾಡುತ್ತಾ ಡಾ. ಕೆ. ಎಲ್. ರಾಜ್‌ಕಮಿಷನ್‌ನ ಸಲಹೆ ಯೂನಿವರ್ಸಿಟಿ ಸ್ಟ್ಯಾಂಡರ್ಡ್ ಜಾಸ್ತಿ ಮಾಡುವ ದೃಷ್ಟಿಯಿಂದ ತುಂಬಾ ಉಪಯುಕ್ತವಾದುದು, ಅದನ್ನು ತರಬೇಕಾಗಿತ್ತು ಎಂದು ಸಲಹೆ ಕೊಟ್ಟಿದ್ದಾರೆ, ತಾವು ಅದನ್ನು ಗಮನದಲ್ಲಿಟ್ಟುಕೊಳ್ಳಬೇಕು. ಇನ್ನು ವಿಶ್ವವಿದ್ಯಾನಿಲಯಗಳಲ್ಲಿ ಜಾತೀಯತೆ ತಾಂಡವವಾಡುತ್ತಿದೆ, ಪ್ರೊಫೆಸರ್‌ಗಳ ವಿಮ್ಸ್ ಅಂಡ್ ಫ್ಯಾನ್ಸೀಸ್‌ಗೆ ವಿದ್ಯಾರ್ಥಿಗಳು ಬಲಿಯಾಗಬೇಕಾಗಿದೆ. ಕೆಲವು ವಿಚಾರಗಳನ್ನು ನಾನು ಈ ಸದನದಲ್ಲಿ ಹೇಳಲಿಕ್ಕೆ ನಾಚಿಕೆಯಾಗುತ್ತದೆ. ಈ ವಿಚಾರದಲ್ಲಿ ಎಷ್ಟೋ ವಿಚಾರಗಳು ಈಗಾಗಲೇ ಸದನದಲ್ಲಿ ಪ್ರಸ್ತಾಪವಾಗಿದೆ. ಎಷ್ಟೋ ಜನ ಪ್ರತಿಭಾವಂತ ಹೆಣ್ಣುಮಕ್ಕಳು ಇದ್ದರೂ ಸಹ ಅವರು ಪ್ರೊಫೆಸರ್ ವಿಮ್ಸ್ ಅಂಡ್ ಫ್ಯಾನ್ಸೀಸ ಗೆ ಹೊಂದಿಕೊಂಡಿಲ್ಲ ಎನ್ನುವ ಕಾರಣದಿಂದ ತಮ್ಮ ಚಾರಿತ್ರ್ಯವನ್ನು ಕಳೆದುಕೊಂಡಿರತಕ್ಕದ್ದು ಇದೆ. ಇಂಥದ್ದನ್ನು ಕಂಟ್ರೋಲ್ ಮಾಡಲಿಕ್ಕೆ ಈ ತಿದ್ದುಪಡಿಯಲ್ಲಿ ಏನಿದೆ ?

ಶ್ರೀ ಎಂ. ರಘುಪತಿ.—ಈ ವ್ಯವಸ್ಥೆ ತಪ್ಪಿಸಬೇಕೆಂದು ಇನ್ನು ಮುಂದಕ್ಕೆ ಡೀನ್ಸ್‌ಗಳನ್ನು ರೊಟೇಷನ್ ಮಾಡತಕ್ಕದ್ದು ಇದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ವಿದ್ಯಾರ್ಥಿ ವಿದ್ಯಾರ್ಥಿನಿಯರ ಉಳಿವಿಗೋಸ್ಕರ ವಿಶ್ವವಿದ್ಯಾನಿಲಯಗಳ ಬಗ್ಗೆ ಸರಿಯಾದ ಬಿಗಿಯನ್ನು ಇಟ್ಟುಕೊಂಡು ಒಂದು ಒಳ್ಳೆಯ ಭವಿಷ್ಯವನ್ನು ನಿರ್ಮಾಣ ಮಾಡಲಿಕ್ಕೆ ಚಿಂತನೆ ಮಾಡಬೇಕೆಂದು ಹೇಳುತ್ತಾ ಈ ತಿದ್ದುಪಡಿಯನ್ನು ಸ್ವಾಗತ ಮಾಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ (ಗುರಮಿಟಕಲ್).—ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಶಿಕ್ಷಣ ಸಚಿವರು ತಂದಂಥ ಕೆಲವು ತಿದ್ದುಪಡಿಗಳನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ ಕೆಲವನ್ನು ವಿರೋಧಿಸಬೇಕಾಗುತ್ತದೆ. ಕಾರಣ ಇಷ್ಟೇ, ಕರ್ನಾಟಕ ಸ್ಟೇಟ್ ಯೂನಿವರ್ಸಿಟಿ ಆಕ್ಟ್ ಏನು ಬಂದಿದೆ ಅದಕ್ಕೆ ಒಂದು ವಿಶಿಷ್ಟವಾದ ಬ್ಯಾಕ್‌ಗ್ರೌಂಡ್ ಇದೆ ಹಿಂದೆ ಇರತಕ್ಕಂಥ ಯೂನಿವರ್ಸಿಟಿಗಳಲ್ಲಿ ಯಾವುದೇ ಒಂದು ಸರ್ಕಾರವು ಹತೋಟಿಯಲ್ಲಿ ತರುವುದು ಇರಲಿಲ್ಲ. ಪ್ರತಿ ಯೂನಿವರ್ಸಿಟಿ ಅಂದರೆ ಕರ್ನಾಟಕ ಯೂನಿವರ್ಸಿಟಿ ಇರಬಹುದು, ಬೆಂಗಳೂರು ಯೂನಿವರ್ಸಿಟಿ ಇರಬಹುದು ಮೈಸೂರು ಯೂನಿವರ್ಸಿಟಿ ಇರಬಹುದು, ಯಾವುದೇ ಒಂದು ಯೂನಿವರ್ಸಿಟಿಯಲ್ಲಿ ಹಸ್ತಕ್ಷೇಪ ಎನ್ನುವುದಿಲ್ಲ. ಸರ್ಕಾರ ಬಡವರಿಗೆ ಸಹಾಯ ಮಾಡಬೇಕು, ಬಡ ವಿದ್ಯಾರ್ಥಿಗಳಿಗೆ ಸಹಾಯ ಮಾಡಬೇಕು, ಅಪಾಯಿಂಟ್‌ಮೆಂಟ್‌ನಲ್ಲಿ ಸಹಾಯ ಮಾಡಬೇಕೆಂದರೆ ಆಗುತ್ತಾ ಇರಲಿಲ್ಲ. ೧೯೭೬ರಲ್ಲಿ ಸಮಗ್ರವಾಗಿ ಇದನ್ನು ವಿಚಾರ ಮಾಡಿ ಅದರಮೇಲೆ ಚರ್ಚೆ ನಡೆದು ಎಲ್ಲರಿಗೂ ಅನುಕೂಲವಾಗಬೇಕು ಸಾಮಾಜಿಕ ನ್ಯಾಯ ಎಲ್ಲರಿಗೂ ಸಿಗಬೇಕು ಎನ್ನುವ ದೃಷ್ಟಿಯಿಂದ ಕಾನೂನನ್ನು ಮಾಡಲಾಯಿತು. ಇವತ್ತು ವಿಶ್ವವಿದ್ಯಾನಿಲಯಗಳಲ್ಲಿ ಯಾವ ಜನಾಂಗದವರು ಇದ್ದಾರೆ? ಅವರ ಜಾತಿಯವರೆ ಜಾಸ್ತಿಯಾಗಿದ್ದಾರೆ. ಜಾತೀಯತೆ ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲಿಯೂ ತಾಂಡವವಾಡುತ್ತಿದೆ, ಯಾವಯಾವ ಜಾತಿ ಜನ ಸಿಂಡಿಕೇಟ್, ಸೆನೆಟ್, ವೈಸ್ ಚಾನ್ಸಲರುಗಳು, ರಿಜಿಸ್ಟ್ರಾರುಗಳು ಆಗಿ ಬರುತ್ತಾರೋ ಆ ಜಾತಿ ಜನಗಳಿಗೆ ಹೆಚ್ಚಿನ ಅನುಕೂಲ ಮಾಡುವಂತದ್ದು ಇವತ್ತು ನಡೆಯುತ್ತಿದೆ. ಮಾನ್ಯ ಸದಸ್ಯರಾದ ಯಡಿಯೂರಪ್ಪನವರು ಹೇಳಿದಹಾಗೆ ಪಾಸು ಮಾಡುವುದಲ್ಲ ಫೇಲು ಮಾಡುವುದರಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕುತಂತ್ರ ನಡೆಯುತ್ತಿದೆ. ಇದನ್ನೆಲ್ಲಾ ತಡೆಗಟ್ಟುವ ಸಲುವಾಗಿ ಹಿಂದೆ ಸರ್ಕಾರ ಈ ಒಂದು ಕಾನೂನನ್ನು ಜಾರಿಗೆ ತಂದಿತು. ಈ ಕಾನೂನಿನಲ್ಲಿ ಸ್ವಲ್ಪ ಪ್ರತಿಫಲ ಸರ್ಕಾರಕ್ಕೆ ಸಿಕ್ಕಿತ್ತು. ಆದರೆ ಇವತ್ತು ಮಾನ್ಯ ಯಡಿಯೂರಪ್ಪನವರು ಹೇಳುವುದನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ಈ ತಿದ್ದುಪಡಿಯಿಂದ ಮಾನ್ಯ ಮಂತ್ರಿಗಳಿಗೆ ಹೆಚ್ಚಿನ ಶಕ್ತಿ ಇದೆ. ಸರ್ಕಾರಕ್ಕೆ ಹೆಚ್ಚಿನ ಅಧಿಕಾರ ಇದೆಯೆಂದು ಹೇಳಿದರು ಬಹುಶ: ಅವರು ಹಿಂದಿನ ಕಾನೂನನ್ನು ಓದಿದ್ದರೆ ಈ ಮಾತುಗಳನ್ನು ಹೇಳುತ್ತಿರಲಿಲ್ಲ, ಮಾನ್ಯ ಮಂತ್ರಿಯವರು ಈಗ ತಮ್ಮ ಕೊರಳಿಗೆ ತಾವೇ ಉರುಲು ಹಾಕಿಕೊಂಡಿದ್ದಾರೆ. ತಮ್ಮ ಕೈಗಳನ್ನು ತಾವೇ ಕಟ್ಟಿಸಿಕೊಂಡಿದ್ದಾರೆ. ಅಫಿಲಿಯೇಷನ್, ನೇಮಕಾತಿ, ಕಂಟ್ರೋಲ್ ಆಫ್ ಎಕ್ಸಾಮಿನೇಷನ್ ಫೈನಾನ್ಸ್ ಆಫೀಸರ್ ವ್ಯವಹಾರಗಳಾಗಲಿ, ಇವುಗಳಲ್ಲಿ ಸಿಂಡಿಕೇಟ್‌ನವರ ಕೈವಾಡ ಹೆಚ್ಚಿನ ಪ್ರಮಾಣದಲ್ಲಿರುತ್ತದೆ. ಯೂನಿವರ್ಸಿಟಿ ರಿವ್ಯೂ ಕಮಿಟಿಯವರು ಕೆಲವು ವಿಚಾರಗಳನ್ನು ಹೇಳಿದ್ದರೆಂದು ತಾವು ವಾದ ಮಾಡಬಹುದು. ಯೂನಿವರ್ಸಿಟಿ ರಿವ್ಯೂ ಕಮಿಟಿಯವರು ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಇವರು ತಮಗೆ ಬೇಕಾಗಿರುವುದನ್ನು ತೆಗೆದುಕೊಂಡು ಬೇಕಿಲ್ಲದ್ದನ್ನು ಬಿಟ್ಟಿದ್ದಾರೆ. ೧೯೭೬ರಲ್ಲಿ ಆಕ್ಟ್ ಬಂದವರೂ ಕೂಡ ಇವತ್ತಿಗೂ ಸಲಹೆಗಳನ್ನು ಮಾಡುತ್ತಲೇ ಇದ್ದಾರೆ ಕಳೆದ ೯ ವರ್ಷಗಳಲ್ಲಿ ಎಷ್ಟು ಸಲಹೆಗಳು ಬೇಕೋ ಅಷ್ಟನ್ನು ತೆಗೆದುಕೊಂಡಿದ್ದಾರೆಯೇ ಹೊರತು ಅನುಕೂಲವಾಗತಕ್ಕಂಥ ಸಾಮಾಜಿಕ ನ್ಯಾಯ ದೊರಕಿಸಿಕೊಡುವಂಥ ಸಲಹೆಗಳನ್ನು ಮಾತ್ರ ಇವರು ತೆಗೆದುಕೊಂಡಿಲ್ಲ.

(ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಸಮಾಜದಲ್ಲಿ ಏನೊಂದು ಅಸ್ತವ್ಯಸ್ತೆ ಇದೆ ಅಂತರ ಇದೆ ಅಂಥವರಿಗೆ ಸಾಮಾಜಿಕ ನ್ಯಾಯ ದೊರಕಿಸಿಕೊಡಬೇಕೆಂಬ ಕಳಕಳಿ ಏನಿದೆ ಅದನ್ನು ಮಾಡುವುದಕ್ಕಾಗುವುದಿಲ್ಲ. ಸೆಕ್ಷನ್ ೫೩ (ಬಿ)ನಲ್ಲಿ In section 53 of the Principal Act

(1) In sub-section (1) for the words "by the State Government" the words "by the University on the Recommendations made by the State Government" shall be substitu ed

(2) In sub section (5) for the words "shall grant or refuse application or any part there of" the words "shall make their recommendations for the grant of the application or any part there of or refuse the application for any part thereof shall be substituted ಅಂದರೆ ಏನು ಅರ್ಥ, ಹಿಂದೆ ಅನ್ಯಾಯ ಕಂಡುಬಂದರೆ, ಅರ್ಜಿಯನ್ನು ತರಿಸಿಕೊಂಡು, ನೇರವಾಗಿ ಡೈರೆಕ್ಷನ್ ಕೊಡತಕ್ಕಂಥ, ಆರ್ಡರ್ ಮಾಡತಕ್ಕಂಥ ಹಕ್ಕನ್ನು ಚಲಾಯಿಸತಕ್ಕ ಒಂದು ಅಧಿಕಾರ ನಿಮ್ಮ ಕೈಯಲ್ಲಿತ್ತು. ಇವತ್ತು ತಾವು ಏನು ಮಾಡುತ್ತಿದ್ದೀರಿ. ಬರೀ ಶಿಫಾರಸ್ಸು ಮಾಡುವಂಥ ಕೆಲಸ ಮಾಡಿದ್ದೀರಿ.

ಶ್ರೀ ಬಿ. ಎಂ. ಪಾಟೀಲ್.—ವಿಶ್ವವಿದ್ಯಾನಿಲಯಗಳನ್ನು ಅಟಾನಮಸ್ ಬಾಡಿಗಳೆಂದು ಕರೆಯುವುದು ಏತಕ್ಕೆ ಇವುಗಳನ್ನೆಲ್ಲಾ ಇಲಾಖೆಗಳನ್ನಾಗಿ ಮಾಡಿಬಿಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರು ಹೇಳತಕ್ಕ ವಾದದ ಬಗ್ಗೆ ಕೂಡ ಕೆಲವು ಕಲಂಗಳು ಇವೆ. ಕೆಲವೇ ಜನಾಂಗಕ್ಕೆ ಈ ಜಾಗಗಳನ್ನು ಮೀಸಲಾಗಿಡುವುದಕ್ಕಾಗುವುದಿಲ್ಲ. ಎಲ್ಲಿ ಅನ್ಯಾಯ ವಾಗಿದೆ ಅದನ್ನು ಸರಿಪಡಿಸಿ ಸಾಮಾಜಿಕ ನ್ಯಾಯ ಕೊಡುವಂತದ್ದು ಸರ್ಕಾರದ ಧರ್ಮ ಉದಾಹರಣೆ ಹೇಳುತ್ತೇನೆ. ನಮ್ಮ ಭಾಗದಲ್ಲಿ ಹೆಚ್. ಕೆ. ಇ. ಸೊಸೈಟಿ ಪ್ರಾರಂಭವಾಯಿತು. ಅಲ್ಲಿ ಇಂಜಿನಿಯರಿಂಗ್ ಕಾಲೇಜು ಪ್ರಾರಂಭ ಮಾಡಬೇಕಾದರೆ, ವಿಭಾಗಾಧಿಕಾರಿಯವರು ಚೇರ್ಮನ್‌ರಾಗಿದ್ದರು. ಪ್ರತಿಯೊಬ್ಬ ರೈತರಿಂದ, ಒಂದೂ ಎರಡು ರೂಪಾಯಿಗಳನ್ನು ಅವರು ಇದಕ್ಕಾಗಿ ವಸೂಲು ಮಾಡಿದರು, ಹಾಗೆ ಮಾಡಿ ಇಂಜಿನಿಯರಿಂಗ್ ಕಾಲೇಜು ಪ್ರಾರಂಭ ಮಾಡಿದರು. University ಮುಖಾಂತರ ಅರ್ಜಿ ಕರೆದರು ಅನ್ಯಾಯವಾದಾಗ ಸಾಮಾಜಿಕ ನ್ಯಾಯ ಕೊಡಿಸುವಾಗ ಸರ್ಕಾರ ಮಧ್ಯೆ ಪ್ರವೇಶ ಮಾಡ ಬೇಕಾಗುತ್ತದೆ, ಸರ್ಕಾರ ಸದಾಕಾಲ ಮಧ್ಯ ಪ್ರವೇಶ ಮಾಡಬೇಕಾಗಿಲ್ಲ. ಇಲ್ಲದೇ ಹೋದರೆ ಸರ್ಕಾರ ಏತಕ್ಕೆ ಬೇಕು? ಇವತ್ತು ಎಷ್ಟು ಅಟಾನಮಸ್ ಬಾಡಿಯಲ್ಲಿ, ಆಗ್ರೊ ಇಂಡಸ್ಟ್ರೀಸ್ ಕಾರ್ಪೋರೇಷನ್ ನಲ್ಲಿ ಎಷ್ಟು ಯೂನಿವರ್ಸಿಟಿಗಳಲ್ಲಿ ಸರ್ಕಾರದ ಆದೇಶವಿದ್ದರೂ ಸಹ ರಿಸರ್ವೇಷನ್ ಕಾನೂನು ಇದ್ದರೂ ಕೂಡ ಎಷ್ಟೋ ಶಾಲಾ ಕಾಲೇಜುಗಳಲ್ಲಿ ಕನಿಷ್ಟ ಜವಾನರ ಹುದ್ದೆಯನ್ನು ಕೂಡ ಕೊಟ್ಟಿಲ್ಲ. ಅಂಥ ಸಂದರ್ಭದಲ್ಲಿ ಸರ್ಕಾರ ಮಧ್ಯೆ ಪ್ರವೇಶಿಸಬೇಕಾಗುತ್ತದೆ. ತಪ್ಪು ಮಾಡಿದರೆ, ಮೂಗು ಹಿಡಿಯತಕ್ಕ ಅಧಿಕಾರ ಸರ್ಕಾರಕ್ಕೆ ಇರಬೇಕು. ಅದನ್ನು ತೆಗೆದುಕೊಂಡು ಅವರನ್ನು ಸಪ್ರೆಸ್ ಮಾಡಬೇಕೆಂದು ಹೇಳುತ್ತಿಲ್ಲ. ಜುಡಿಸಿಯಸ್ಸಾಗಿ ಇಂಟರ್‌ಫಿಯರ್ ಮಾಡುವಂಥ ಅಧಿಕಾರ ಇರಬೇಕು, ಇಂಜಿನಿಯರ್ ಕಾಲೇಜಿಗೆ ಜಾಗ ಇಲ್ಲದಿದ್ದಾಗ ಜೈಲ್ ವಾರ್ಡ್ ಖಾಲಿ ಮಾಡಿ ಕಾಲೇಜು ಪ್ರಾರಂಭ ಮಾಡಿದರು ಪ್ರಾರಂಭ ದಲ್ಲಿ ಹಣ ಇರಲಿಲ್ಲ, ಕಟ್ಟಡ ಇರಲಿಲ್ಲ. ಇವತ್ತು ಹಣ ಹೇಗೆ ಬಂತು. ರಾಜಕೀಯವಾಗಿ ಅಣ್ಣಾರಾವ್ ಗಣಮುಖಿ, ಮಹದೇವಪ್ಪ ರಾಂಪುರೆ, ವೀರೇಂದ್ರ ಪಾಟೀಲರು ಲೋಕೋಪಯೋಗಿ ಮಂತ್ರಿಗಳಾಗಿದ್ದ ರಿಂದ, ರಾಜಕೀಯವಾಗಿ ಬೆಂಬಲ ಇದ್ದುದರಿಂದ ಈ ಸಂಸ್ಥೆ ಉದ್ಭವವಾಯಿತು. ಇಲ್ಲದಿದ್ದರೆ, ಯಾರೂ ಅದನ್ನು ಕೇಳುತ್ತಿರಲಿಲ್ಲ. ರಾಜಕೀಯವಾದಂಥ ಶಕ್ತಿ ಬಹಳ ಮುಖ್ಯವಾಗಿರುತ್ತದೆ ಅದಕೋಸ್ಕರ ಎಲ್ಲೆಲ್ಲಿ ಅವಶ್ಯಕತೆ ಇದೆ ಅಲ್ಲಿ ನೀವು ಕೈ ಕಟ್ಟಿಸಿಕೊಳ್ಳುವುದಕ್ಕೆ ಹೋಗಬೇಡಿ. ನ್ಯಾಯವಾಗಿಯೂ ಶಿಫಾರಸ್ಸು ಮಾಡುತ್ತಾರೆ ಅದನ್ನು ಇಟ್ಟುಕೊಳ್ಳಬೇಕಾಗುತ್ತವೆ ಅಂಥ ಸಂದರ್ಭದಲ್ಲಿ ಸರ್ಕಾರ ಕೈಹಾಕಬೇಕಾಗುತ್ತದೆ ಕೈಕಟ್ಟಿಸಿಕೊಳ್ಳುವುದಕ್ಕೆ ಹೋಗಬೇಡಿ. ನ್ಯಾಯವಾಗಿರುವಂತಾದ್ದನ್ನು ವಿಶ್ವವಿದ್ಯಾನಿಲಯಗಳು ಶಿಫಾರಸ್ಸು ಮಾಡಿದರೆ ಅದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಅಂಥ ಸೌಜನ್ಯವನ್ನು ಇಟ್ಟುಕೊಳ್ಳ ಬೇಕಾಗುತ್ತದೆ. ಆತುರಾತುರವಾಗಿ ಕಾನೂನು ಕಟ್ಟಳೆಗಳನ್ನು ಮಾಡುವುದು ಬೇಡ. ಕೆಲವು ಸಂದರ್ಭದಲ್ಲಿ ಕೆಲವು ಸಂಸ್ಥೆಗಳು ಕಾನೂನು ಕಟ್ಟಳೆಗಳಿಗೆ ಒಳಪಟ್ಟು ವಿಶ್ವವಿದ್ಯಾನಿಲಯಗಳಿಗೆ ಹೋಗಿ ಅರ್ಜಿಗಳನ್ನು ಕೊಟ್ಟಿದ್ದರೂ ಅಂಥ ಅರ್ಜಿಗಳನ್ನು ಕಳುಹಿಸುವುದಿಲ್ಲ, ಅಲ್ಲಿ ಜಾತಿ ಪ್ರಶ್ನೆ ಬರುತ್ತದೆ. ಈ ಸಂಸ್ಥೆಗಳು ಮುಂದೆ ಬಂದರೆ, ನಮ್ಮ ಸಂಸ್ಥೆಗಳಿಗೆ ತೊಂದರೆಯಾಗುತ್ತದೆ, ಅವುಗಳು ಉಳಿಯುವುದಿಲ್ಲ ಎನ್ನುವ ಭಾವನೆಯಿಂದ ಅರ್ಜಿಗಳನ್ನು ಕಳುಹಿಸುವುದಿಲ್ಲ ಪದವೀಧರರ ಕ್ಷೇತ್ರದಿಂದ ನಾವು ಯಾರು ಆರಿಸಿ ಬರುವುದಕ್ಕೆ ಇನ್ನು ಸಾಧ್ಯವಿಲ್ಲ. ಹರಿಜನ ಗಿರಿಜನರಲ್ಲಿ ಎರಡು ಪರ್ಸೆಂಟ್ ಕೂಡ ಪದವೀಧರರು ಬರುವುದಿಲ್ಲ, ಯಾವುದೇ ಚುನಾವಣೆಯಲ್ಲಾದರೂ ಒಳ್ಳೆಯವರು ಬರಬಹುದು ವೆಸ್ಟೆಡ್ ಇಂಟರೆಸ್ಟ್ ನವರು ಬರಬಹುದು. ಆಗ ಅವರಿಗೆ ನ್ಯಾಯ ದೊರಕಿಸಿಕೊಡಿ ಎಂದು ಯಾರಿಗೆ ಕೇಳಬೇಕು? ಅಂಥ ಒಂದು ಸಂದರ್ಭದಲ್ಲಿ ಅಧಿಕಾರ ಮತ್ತು ಪ್ರಾವಿಷನ್ ತಮ್ಮಲ್ಲಿ ಇಟ್ಟುಕೊಳ್ಳಿ. ೧೯೭೬ರಲ್ಲಿ ಕಾನೂನು

ತಂದಾಗ ಕೂಡ ಅನೇಕ ಜನ ವಿರೋಧ ಮಾಡಿದರು. ಇದರಲ್ಲಿ ಆ ಪಾರ್ಟಿ, ಈ ಪಾರ್ಟಿ ಎಂದು ಏನೂ ಇಲ್ಲ. ಪ್ರತಿಯೊಂದು ಯೂನಿವರ್ಸಿಟಿಯನ್ನು ನಾವು ಹೊಕ್ಕು ನೋಡಿದಾಗ ಕಮಿಷನ್ ರಿಪೋರ್ಟ್ ನೋಡಿದಾಗ ಅನೇಕ ಅಪ್ಲಿಕೇಷನ್‌ಗಳನ್ನು ಕೊಟ್ಟಾಗ, ಮತ್ತು ಅವುಗಳನ್ನು ಸರ್ಕಾರದವರಿಗೆ ಕಳುಹಿಸಲಿಲ್ಲ. ಅದಕ್ಕಾಗಿ ಈ ಕಾನೂನನ್ನು ೧೯೭೬ರಲ್ಲಿ ತಂದಾಯಿತು.

ಆದರೆ ತಾವು ಇವತ್ತು ಕಾನೂನನ್ನು ತಿಳಿವು ಮಾಡಿ ಡಯಲೂಟ್ ಮಾಡಿ ಒಂದು ತಿದ್ದುಪಡಿಯನ್ನು ತಂದು ಶಹಬಾಷ್‌ಗಿರಿಯನ್ನು ಪಡೆದುಕೊಳ್ಳಬೇಕು ಗುಲ್ಬರ್ಗ ಮತ್ತು ಮಂಗಳೂರು ಯೂನಿವರ್ಸಿಟಿಗಳಿಗೆ ಅಫಿಲಿಯೇಷನ್ ಕೊಡುವುದಿಲ್ಲ ಅದಕ್ಕೆ ನಾವು ಅಮೆಂಡ್‌ಮೆಂಟ್ ತಂದಿದ್ದೇವೆ ಎಂದು ಹೇಳಿದರು. ಈ ೯ ವರ್ಷಗಳಿಂದ ಇವರು ಏನು ಮಾಡಿದರು? ಈಗಾಗಲೇ ೧೦ ವರ್ಷಗಳಾಯಿತು. ೮-೯ ವರ್ಷಗಳಿಂದ ಹೀಗೆ ಏತಕ್ಕೆ ಸುಮ್ಮನೆ ಇದ್ದರು? ಆಗ ಸರ್ಕಾರ ಏಕೆ ಇಂಟರ್‌ಫಿಯರ್ ಮಾಡಲಿಲ್ಲ ಎನ್ನತಕ್ಕ ಸಂಶಯ ನಮಗೆ ಬರುತ್ತದೆ. ಈಗಾಗಲೇ ಮಾನ್ಯ ಮೊಯಿಲಿಯವರು ಹೇಳಿದ ಹಾಗೆ ಯು.ಜಿ.ಸಿ.ಯವರ ಪತ್ರ ವ್ಯವಹಾರ ಏನಿದೆ ಅದನ್ನು ಸಭೆಯ ಟೇಬಲ್ ಮೇಲೆ ಇಡಿ. ಕನ್ವಿನ್ಸ್ ಆದರೆ ಅದನ್ನು ಒಪ್ಪಿಕೊಳ್ಳೋಣ. ಸುಮ್ಮನೆ ಯಾರದೋ ಮಾತು ಕೇಳಿ ಸುಮ್ಮನೆ ಹೋದರೆ ಕೆಲವರಿಗೆ ಅನ್ಯಾಯವಾಗುವುದುಂಟು. ಅದಕ್ಕೆ ನೀವು ಅವರಿಗೆ ಸಂಪೂರ್ಣವಾಗಿ ಸ್ವಾಯತ್ತತೆ ಕೊಡುವುದು ಇಂಡಿಪೆಂಡೆಂಟ್ ಕೊಡುವುದಕ್ಕೆ ಯಾವುದೇ ವಾದವಿಲ್ಲ. ಸರ್ಕಾರದ ಧ್ಯೇಯಧೋರಣೆ ಅಥವಾ ಕೇಂದ್ರ ಸರ್ಕಾರದ ಧ್ಯೇಯಧೋರಣೆ ಏನಿದೆ ಅವುಗಳನ್ನು ಇಲ್ಲಿರತಕ್ಕ ನಾವು ಕಾನೂನುಗಳನ್ನು ಮಾಡುತ್ತೇವೆ. ಸರ್ಕಾರ ಆರ್ಡರುಗಳನ್ನು ಇಸ್ಯು ಮಾಡುತ್ತದೆ. ಆ ಆರ್ಡರುಗಳನ್ನು ಇಂಪ್ಲಿಮೆಂಟ್ ಮಾಡತಕ್ಕ ಜವಾಬ್ದಾರಿಯನ್ನು ತಾವು ಹೊತ್ತುಕೊಳ್ಳಬೇಕು. ಸರ್ಕಾರ ಆರ್ಡರ್‌ಗಳನ್ನು ಇಷ್ಯು ಮಾಡುವುದು ಸರ್ಕಾರ ಇಷ್ಯು ಮಾಡಿದಂತಹ ಆರ್ಡರುಗಳನ್ನು ಅವರು ಇಂಪ್ಲಿಮೆಂಟ್ ಮಾಡುವುದಿಲ್ಲ ಅದಕ್ಕಾಗಿ ಆ ಕಡೆಗೆ ಹೆಚ್ಚಿನ ಗಮನಕೊಡಬೇಕು. ೬೧ (ಬಿ)ನಲ್ಲಿ ಕರ್ನಾಟಕ ಸ್ಟೇಟ್ ಇಂಟರ್ ಯೂನಿವರ್ಸಿಟಿ ಬೋರ್ಡ್ ಎಂದು ತಾವು ಹೊಸದಾಗಿ ಸೆಕ್ಷನ್ ಅನ್ನು ಇನ್‌ಸರ್ಟ್ ಮಾಡುತ್ತಿದ್ದೀರಿ. ಇದರಲ್ಲಿ ಏನಿದೆ? ಇದರಲ್ಲಿ ನಿಮಗೆ ಯಾವ ಅಧಿಕಾರವೂ ಇಲ್ಲ. Just like an advisary board ಅದು ಸ್ಟ್ಯಾಚುಟರಿ ಬೋರ್ಡ್ ಮಾಡುತ್ತೇನೆಂದು ತಾವು ಹೇಳಿದ್ದೀರಿ

"There shall be a Karnataka State Inter University Board consisting of the following members–

a) Minister in-charge of University Education,

b) Vice-Chancellors of Universities established under this Act;

c) Commissioner for Public Instructions,

d) Director of Collegiate Education,

e) Director of Technical Education.

f) Director of Medical Education,

g) Chairman, Pre-University Education Board,

h) Secretary to Government, Finance Department,

i) Secretary to Government, Education Department in-charge of University Education.

2) The Minister in-charge of University Education shall be the Chairman of the Board and shall preside over its meeting."

ಇವರ ಕೆಲಸ ಏನೆಂದರೆ, ಸಬ್ ಕ್ಲಾಸ್-೭ನಲ್ಲಿ ಏನು ಹೇಳಿದ್ದಾರೆಂದರೆ ಅದು ಈ ರೀತಿ ಇದೆ.

7) "The Board would be advisory in so for as academic and financial matters are concerned. The recommendations

on academic matters shall be placed before the concerned bodies of the University for their consideration. The recommendations on financial matters shall be placed before the concerned bodies of the University the State Government, as the case may be, for consideration.''

ಸರ್ಕಾರದ ಮುಂದೆ ಆದರೂ ಇಡಬೇಕು ಅಥವಾ ಕನ್ಸರ್ನ್ಡ್ ಯೂನಿವರ್ಸಿಟಿ ಬಾಡೀಸ್‌ಗೆ ಇಡಬೇಕಾದರೆ ನೀವು ಏತಕ್ಕೆ ಬೇಕು? You are above all ರಿಜಿಸ್ಟ್ರಾರ್ ವೈಸ್ ಚಾನ್ಸಲರ್ ಪ್ಯಾನಲ್‌ಗೆ ಹೋಗಿ ತಮ್ಮ ರೆಕಮೆಂಡೇಷನ್ ಅನ್ನು ಪ್ರತ್ಯಕ್ಷವಾಗಿ ಆಗಲಿ ಅಪ್ರತ್ಯಕ್ಷವಾಗಿ ಆಗಲಿ ಈ ಬಾಕಿಯುನಾಗೆ ಸ್ಕಾಲರ್ ಬಾಡಿಗೆ ರೆಕಮಂಡ್ ಮಾಡಿ ಕನ್ಸಿಡರೇಷನ್‌ಗೆ ಇಡಬೇಕು ಎಂದರೆ ಇದು ಯಾವುದು? ಇದು ಸ್ವಲ್ಪ ಕಾಂಟ್ರರಿ ಆಗುತ್ತದೆ. ಇದಕ್ಕಾಗಿ ನೀವು ಒಂದು ಅಥಾರಿಟಿ ಇದ್ದಾಗ ನೀವು ಅವರನ್ನು ಅಡ್ವೈಸ್ ಮಾಡಿ ಎಂದು ಹೇಳುವುದು ಏತಕ್ಕೆ? ಅವರಿಂದ ನೀವು ತರಿಸಿಕೊಂಡು You can take a decision. ಇದನ್ನು ಪುನರ್ ಪರಿಶೀಲನೆ ಮಾಡಬೇಕಾಗುತ್ತದೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನೊಂದು ಸೆಕ್ಷನ್ ೫೬, ಅದರಲ್ಲಿ ಏನಾಗಿದೆ ಅಂದರೆ

"2) in sub-section (6), for the words 'shall made such order as it deems fit'' the words "shall make their recommendations to the University which shall thereafter made such order at is deems fit'' shall be substituted."

೫೬ರಲ್ಲೂ ಯಾವ ರೀತಿಯಾಗಿ ತೊಂದರೆಯಾಗುತ್ತದೆ. ಇದರಲ್ಲಿಯೂ ಕೂಡ ಆಗುತ್ತದೆ. ಅದನ್ನು ತಾವು ದಯವಿಟ್ಟು ವಿಚಾರ ಮಾಡುತ್ತೀರಿ ಎಂದು ನಾನು ತಿಳಿದುಕೊಂಡಿದ್ದೇನೆ. ನಮ್ಮ ಬಿ. ಎಂ. ಪಾಟೀಲ್‌ರವರು ಹೇಳಿದ ಹಾಗೆ ಅಟಾನಮಿಯಿಂದ ಯಾವ ಜನಾಂಗಕ್ಕೂ ನ್ಯಾಯ ಸಿಗುವುದಿಲ್ಲ. ಆ ದೃಷ್ಟಿಯಿಂದ ನಮ್ಮ ವಾದ ಇದೆಯೇ ಹೊರತಾಗಿ ಬೇರೆ ಏನೂ ಇಲ್ಲ. ಬೇರೆಯವರನ್ನೆಲ್ಲ ತೆಗೆದುಹಾಕಿ ಅಧಿಕಾರವನ್ನು ನೀವೇ ಇಟ್ಟುಕೊಂಡು ಅಧಿಕಾರವನ್ನು ಚಲಾಯಿಸಿ. ಅನೇಕ ಸಲ ಅನ್ಯಾಯವಾಗಿದೆ ಅನೇಕ ಸಲ ಯೂನಿವರ್ಸಿಟಿಗಳು ರೆಕಮೆಂಡ್ ಮಾಡಿದರೂ ಸರ್ಕಾರದವರೂ ಮನಸ್ಸು ಮಾಡಲಿಲ್ಲ. ತಮಗೆ ಯಾರಿಗೆ ಕೊಡಬೇಕು ಎಂದು ಇರುತ್ತವೆಯೋ ಅವರಿಗೆ ಕೊಡಬೇಕೆನ್ನುವ ದೃಷ್ಟಿಯಿಂದ ಆರ್ಡರ್ ಮಾಡುತ್ತಾರೆ. ಆಗ ನ್ಯಾಯವಾಗಿ ಹೋಗತಕ್ಕವರಿಗೆ ಅನ್ಯಾಯವಾಗುತ್ತದೆ, ಅದರಲ್ಲಿ ಅವರು ಒಬ್ಬರು. ಅಟಾನಮಸ್ ಎಂದು ಏತಕ್ಕೆ ಮಾಡುತ್ತೀರಿ? ಒಂದು ಕಡೆ ಆ ವಾದ ಸರಿಯಿದೆ. ನ್ಯಾಯವಾಗಿ ಹೋದವರ ಅರ್ಜಿ ಸರ್ಕಾರದವರಿಗೆ ಬರುವುದಿಲ್ಲ. ಈ ಎರಡನ್ನು ಗಮನದಲ್ಲಿಟ್ಟುಕೊಂಡು ಒಂದು ಸೂಕ್ತವಾದ ತೀರ್ಮಾನವನ್ನು ತೆಗೆದುಕೊಳ್ಳುವಂತೆ ಹೇಳಿ ಈಗ ತಂದಿರತಕ್ಕ ಕೆಲವು ತಿದ್ದುಪಡಿಗಳನ್ನು ಸ್ವಾಗತ ಮಾಡುತ್ತೇನೆ. ರಿಸರ್ವೇಶನ್ ಬಗ್ಗೆ ಅವರು ಒಪ್ಪಿಕೊಂಡಿದ್ದಾರೆ, ಐದು ವರ್ಷಕ್ಕೆ ಇದ್ದದನ್ನು ಮೂರು ವರ್ಷಕ್ಕೆ ಇಟ್ಟಿದ್ದೇವೆಂದು ಹೇಳಿದ್ದಾರೆ ಅದನ್ನು ಒಪ್ಪಿಕೊಂಡಿದ್ದಾರೆ. ಈ ಎರಡು ತಿದ್ದುಪಡಿಗಳನ್ನು ನಾನು ಸ್ವಾಗತ ಮಾಡಿ, ಉಳಿದವುಗಳನ್ನು ತಾವು ಪುನರ್ ಪರಿಶೀಲನೆ ಮಾಡಬೇಕೆಂದು ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಬಿ. ಕೋಳಿವಾಡ (ರಾಣಿಬೆನ್ನೂರು).—ಮಾನ್ಯ ಅಧ್ಯಕ್ಷರೆ, ಶಿಕ್ಷಣ ಸಚಿವರು ಕರ್ನಾಟಕ ಯೂನಿವರ್ಸಿಟಿ ಅಮೆಂಡ್‌ಮೆಂಟ್ ಬಿಲ್‌ನ್ನು ಪುನಃ ತಂದಿದ್ದಾರೆ ಆದರಲ್ಲಿ ಬಹುಪಾಲನ್ನು ಸ್ವಾಗತ ಮಾಡಲಿಕ್ಕೆ ಇದ್ದರೂ ಕೂಡ ಕೆಲವೊಂದು ಭಾಗವನ್ನು ಅನಿವಾರ್ಯವಾಗಿ ವಿರೋಧಿಸಿ ಕೆಲವು ಸಲಹೆಗಳನ್ನು ಕೊಡುವುದಕ್ಕೆ ಇಚ್ಛೆಪಡುತ್ತೇನೆ, ಈಗಾಗಲೇ ಮಾನ್ಯ ಖರ್ಗೆಯವರು ಹೇಳಿದ ಹಾಗೆ ಯೂನಿವರ್ಸಿಟಿಗಳಿಗೆ ಸ್ವಾಯತ್ತತೆಯನ್ನು ಕೊಡಬೇಕು. ಆದರೆ ಸ್ವಾಯತ್ತತೆ ಸ್ವೇಚ್ಛಾಚಾರ ಆದಾಗ ಅದರ ಹಿಡಿತ ಸರ್ಕಾರದ ಕೈಯಲ್ಲಿ ಇಲ್ಲದಿದ್ದರೆ ಸಾಮಾಜಿಕ ಜೀವನದಲ್ಲಿ ನ್ಯಾಯವನ್ನು ದೊರಕಿಸಿ ಕೊಡುವುದಕ್ಕೆ ಬಹಳ ಕಷ್ಟವಾಗುತ್ತದೆ. ಆ ಒಂದು ಹೆದರಿಕೆ ನನಗೆ ಬರುತ್ತಾ ಇದೆ. ಏಕೆಂದರೆ ಇಲ್ಲಿ ಮಾತನಾಡಿರತಕ್ಕ ಸದಸ್ಯರುಗಳೆಲ್ಲರ ವಾದ ಒಂದೇ ಇದೆ. ಈಗ ಯೂನಿವರ್ಸಿಟಿಗಳು ಏನಿವೆ ಅವು ಕೆಲವೇ ಜನರ ಹಿಡಿತದಲ್ಲಿರತಕ್ಕ ಸಂಘಗಳಾಗಿ ಬಿಟ್ಟಿವೆ. ಹೀಗಾಗಿ ಹಿಂದುಳಿದ ವರ್ಗಗಳವರಿಗೆ ಅಥವಾ ಸಮಾಜದಲ್ಲಿ ತುಳಿಯಲ್ಪಟ್ಟ ಅನೇಕ ಜನರಿಗೆ ನ್ಯಾಯ ಸಿಗುತ್ತಿಲ್ಲವೆನ್ನುವ ವಾದ ಎಲ್ಲರಿಗೂ ಗೊತ್ತಿದೆ. ಇಂತಹ

ವೇಳೆಯಲ್ಲಿ ಸರ್ಕಾರದ ಹಿಡಿತ ಅವುಗಳ ಮೇಲೆ ಇಲ್ಲದಿದ್ದರೆ ತುಳಿಯಲ್ಪಟ್ಟ ಜನರಿಗೆ ನ್ಯಾಯ ಸಿಗುವುದಿಲ್ಲವೆನ್ನುವ ಮಾತನ್ನು ಹೇಳುತ್ತೇನೆ. Amendmet of Section. ೫೩ನಲ್ಲಿ ಏನು ಹೇಳಿದ್ದೀರಿ ಅದನ್ನು ತಾವು ತಿದ್ದುಪಡಿ ಮಾಡಬೇಕು. ಹಳ್ಳಿಗಳ ಕಡೆ ಒಂದು ಗಾದೆ ಇದೆ ಅದೇನೆಂದರೆ ಬಹಳ ಒಳ್ಳೆಯ ಹೆಣ್ಣುಮಗಳು ಇದ್ದಳು ಅವಳು ಏನು ಮಾಡಿದಳು ಅಂದರೆ ಗಂಡನಿಗೂ ಅಪ್ಪಾ ಅಪ್ಪಾ ಎನ್ನುವುದಕ್ಕೆ ಶುರು ಮಾಡಿದಳಂತೆ ಆ ತರಹ ನೀವು ಅಟಾನಮಸ್ ಬಾಡಿಗಳನ್ನು ಮಾಡುವುದಕ್ಕೆ ಹೊರಟಿದ್ದೀರಿ. ನೀವು ಮಾಡಿರುವ ಕೆಲಸದಿಂದ ಸರ್ಕಾರ ಸಣ್ಣದಾಗಿದೆ. ಇಂತಹ ಒಂದು ಪರಿಸ್ಥಿತಿ ಇರುವಾಗ ಈ ತಿದ್ದುಪಡಿಯನ್ನು ಹೇಗೆ ಒಪ್ಪಿಕೊಳ್ಳುವುದು ? ತಾವು ರೆಕಮಂಡ್ ಮಾಡಬೇಕು ಯೂನಿವರ್ಸಿಟಿಗಳು ಒಪ್ಪಿಕೊಳ್ಳಬೇಕು. ಸೆಕ್ಷನ್ ೬೧ (ಬಿ) ನಲ್ಲಿ Inter University Board ಮಾಡಿದ್ದೀರಿ ತಾವು ಪ್ರಿಸೈಡಿಂಗ್ ಆಫೀಸರ್ ಇದ್ದರೂ ವೈಸ್ ಚಾನ್ಸಲರ್ ಮೆಂಬರ್ ಇದ್ದರೂ ಅವರು ರೆಕಮಂಡ್ ಮಾಡಿ ಸಿಂಡಿಕೇಟ್ ಸೆನೆಟ್‌ನಲ್ಲಿರತಕ್ಕವರಿಗೆ ರೆಕಮಂಡ್ ಮಾಡತಕ್ಕ ಪ್ರಾವಿಷನ್ ಮಾಡಿದ್ದೀರಿ. ಇದಕ್ಕೆ ನಮ್ಮ ಮನಸ್ಸು ಒಪ್ಪುತ್ತಿಲ್ಲ. ಯೂನಿವರ್ಸಿಟಿಗಳಲ್ಲಿ ಕಾಮನ್ ಅಫಿಲಿಯೇಷನ್‌ಗೆ ಸ್ವೇಚ್ಛಾಚಾರವಾಗಿ ಹಣವನ್ನು ದೋಚುತ್ತಿದ್ದಾರೆ. ನಮ್ಮ ಯೂನಿವರ್ಸಿಟಿಯಲ್ಲಿ ಅಫಿಲಿಯೇಷನ್‌ಗೆ ಅಪ್ಲಿಕೇಷನ್ ಹಾಕಬೇಕಾದರೆ ೧೦-೧೫ ಸಾವಿರ ರೂಪಾಯಿಗಳನ್ನು ಕೊಡಬೇಕಾಗುತ್ತದೆ. ಬೆಂಗಳೂರು ಮತ್ತು ಮೈಸೂರು ಯೂನಿವರ್ಸಿಟಿಗಳಲ್ಲಿ ಈ ಕೆಲಸ ಎರಡು ಮೂರು ಸಾವಿರ ರೂಪಾಯಿಗಳಲ್ಲಿ ಆಗುತ್ತದೆ. ಕೇವಲ ಕಾರ್‌ನಲ್ಲಿ ಸಿಂಡಿಕೇಟ್ ಮೆಂಬರ್ ಬಂದು ಒಂದು ತಾಸು ಇನ್ಸ್‌ಪೆಕ್ಷನ್ ಮಾಡಿ ಹೋಗಲಿಕ್ಕೆ ಬೇಕಾದಂತಹ ಖರ್ಚಿಗಾಗಿ ಅಪ್ಲಿಕೇಷನ್ ಜೊತೆಗೆ ಹಣವನ್ನು ಕೊಡಬೇಕಾಗುತ್ತದೆ. ಈಗ ವಿಪರೀತವಾಗಿ ಹಣವನ್ನು ಕೇಳುತ್ತಿದ್ದಾರೆ ೧೦-೧೫ ಸಾವಿರ ರೂಪಾಯಿಗಳನ್ನು ಅಪ್ಲಿಕೇಷನ್ ಜೊತೆಯಲ್ಲಿ ತುಂಬಬೇಕಾಗುತ್ತದೆ ಈ ತರಹ ಹಣ ಇಟ್ಟರೆ ಹಿಂದುಳಿದವರ ಮತ್ತು ಕೆಳದರ್ಜೆಯವರ ಸಂಸ್ಥೆಗಳು ಮತ್ತು ಬಡವರು ವಿದ್ಯಾಕ್ಷೇತ್ರದಲ್ಲಿ ಮುಂದೆ ಬರುವುದಕ್ಕೆ ಆಗುತ್ತದೆಯೇ ? ಇದರ ಬಗ್ಗೆ ಹೆಚ್ಚಿನ ಗಮನವನ್ನು ಹರಿಸಬೇಕು. ಅಫಿಲಿಯೇಷನ್ ಕೊಟ್ಟಮೇಲೂ ಕೂಡ ಯೂನಿವರ್ಸಿಟಿಯವರು ಅನೇಕ ಕರಾರು ಕಂಡೀಷನ್‌ಗಳನ್ನು ಹಾಕಿದರೆ ಲಕ್ಷಾಂತರ ರೂಪಾಯಿಗಳ ಡಿಪಾಸಿಟ್ ಇಡಬೇಕಾಗುತ್ತದೆ. ಕ್ಯಾಷ್ ಸರ್ಟಿಫಿಕೇಟ್ ಇಡಬೇಕಾಗುತ್ತದೆ. ಬ್ಯಾಂಕಿನ ಗ್ಯಾರಂಟಿ ಆಗುವುದಿಲ್ಲವೇ ? ತಾವು ದೊಡ್ಡ ಮನಸ್ಸು ಮಾಡಿ ನನಗೊಂದು ಲಾ ಕಾಲೇಜು ಕೊಟ್ಟಿದ್ದೀರಿ. ಲಾ ಕಾಲೇಜಿನಲ್ಲಿ ಹಣವನ್ನು ದೋಚುವಂತಹ ಪರಿಸ್ಥಿತಿ ಇರುವುದಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಯೂನಿವರ್ಸಿಟಿಯವರು ಕ್ಯಾಷ್ ಡಿಪಾಸಿಟ್ ಇಡಬೇಕೆಂದು ಹೇಳುತ್ತಿದ್ದಾರೆ. ಏತಕ್ಕೆ ಇಡಬೇಕು ? ಸಂಜೆಯ ಕಾನೂನು ಕಾಲೇಜು ಆದಾಗಿದೆ, ಎಲ್ಲಾ ವ್ಯವಸ್ಥೆ ಇದ್ದಾಗ ಯಾವರೀತಿ ತೊಂದರೆ ಬರುತ್ತಿದೆ ದಯಮಾಡಿಟ್ಟು ಇದನ್ನು ವಿಚಾರ ಮಾಡಬೇಕು. ಈ ರೀತಿಯಾದ ಸ್ವೇಚ್ಛಾಚಾರ ಇದ್ದಾಗ ತಾವು ಇವರನ್ನು ಕಂಟ್ರೋಲ್‌ನಲ್ಲಿ ಇಟ್ಟುಕೊಳ್ಳಬೇಕು ಶಿಕ್ಷಣಮಟ್ಟವನ್ನು ಅಭಿವೃದ್ಧಿಗೊಳಿಸಲಿಕ್ಕೆ ಅದನ್ನು ಊರ್ಜಿತಗೊಳಿಸತಕ್ಕ ಈ ಒಂದು ಕ್ಷೇತ್ರದಲ್ಲಿ ಸಂಪೂರ್ಣವಾದ ಪಂಡಿತರು ಇರತಕ್ಕ ವಿದ್ಯಾಕ್ಷೇತ್ರದಲ್ಲಿ ಪ್ರಾಜ್ಞರು ಇರುವ ಕಡೆ ತಾವು ಕೊಡಿ. ಆದರೆ ಅಡ್ಮಿನಿಸ್ಟ್ರೇಷನ್ ದೃಷ್ಟಿಯಿಂದ ಅನ್ಯಾಯವಾಗತಕ್ಕ ಪರಿಸ್ಥಿತಿ ಬಂದಾಗ ಸರ್ಕಾರಕ್ಕೆ ಒಂದು ಹಿಡಿತ ಇರಬೇಕು. ಈ ವಿಚಾರಗಳಲ್ಲಿ ಸರ್ಕಾರಕ್ಕೆ ಜನತೆಗೆ ಉತ್ತರ ಕೊಡತಕ್ಕ ಜವಾಬ್ದಾರಿ ಇದೆ. ಯೂನಿವರ್ಸಿಟಿಗಳಿಗೆ ಆ ಜವಾಬ್ದಾರಿ ಇರುವುದಿಲ್ಲ. ಜನತೆಯ ಪ್ರತಿನಿಧಿಗಳು ನೀವಾಗಿದ್ದೀರಿ ಇವತ್ತು ಸರ್ಕಾರ ಜನತಾ ಪಕ್ಷದ್ದು ಇರಬಹುದು ನಾಳೆ ಮತ್ತೊಂದು ಪಕ್ಷದ್ದು ಬರಬಹುದು ಸರ್ಕಾರದ ಹಿಡಿತದಲ್ಲಿದ್ದರೆ ಅವರು ಏನಾದರೂ ಅನ್ಯಾಯ ಮಾಡಿದರೆ ತಾವು ಕೇಳಬಹುದು. ಜನತೆ ತಮ್ಮನ್ನು ಕೇಳುತ್ತಾರೆ ಹೊರತಾಗಿ ಯೂನಿವರ್ಸಿಟಿಯವರನ್ನು ಹೋಗಿ ಕೇಳುವುದಕ್ಕೆ ಸಾಧ್ಯವಿಲ್ಲ, ಜನರಿಗೆ ಉತ್ತರ ಹೇಳತಕ್ಕ ಜವಾಬ್ದಾರಿ ಇರುವ ತಾವು ಯೂನಿವರ್ಸಿಟಿಗಳ ಮೇಲೆ ಹಿಡಿತವನ್ನು ಇಟ್ಟುಕೊಳ್ಳಬೇಕೆಂದು ಹೇಳುತ್ತಾ ಉಳಿದ ವಿಷಯಗಳನ್ನು ಸ್ವಾಗತ ಮಾಡಿ ನನಗೆ ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಅಧ್ಯಕ್ಷರೆ ವೈಸ್ ಚಾನ್ಸಲರ್ ಬಗ್ಗೆ ಅಮೆಂಡ್‌ಮೆಂಟ್ ತರುವುದಕ್ಕೆ ಒಂದು ಕಾರಣವಿದೆ ಅದಕ್ಕೊಂದು ಚರಿತ್ರೆ ಇದೆ ಅದನ್ನು ಒಂದು ಅನುಭವದಿಂದ ತಂದಿದ್ದಾರೆ. ಪಶ್ಚಿಮ ಬಂಗಾಳದಲ್ಲಿ ಆದಂತಹ ಅನುಭವದಿಂದ ಆಂಧ್ರ ಪ್ರದೇಶದಲ್ಲಿ ಆದಂತಹ ಅನುಭವದಿಂದ ವೈಸ್ ಚಾನ್ಸಲರ್ ಅಪಾಯಿಂಟ್‌ಮೆಂಟ್ ಮಾಡುವಾಗ ಸರ್ಕಾರ ನಾಮಿನೇಟ್ ಮಾಡಿದಂತಹವರನ್ನು ಬಿಟ್ಟು ಅವರಿಗೆ ಇಷ್ಟಬಂದವರನ್ನು ಸೆಲೆಕ್ಟ್ ಮಾಡಿದ್ದಾರೆ. ಐದು ವರ್ಷ

ಇರುವುದು ಅನ್ಯಾಯವೆಂದು ಮೂರು ವರ್ಷ ಮಾಡಿದ್ದಾರೆ. ಇದನ್ನು ಮೂಲಭೂತವಾಗಿ ಯೋಚನೆ ಮಾಡಿ ಅಮೆಂಡ್‌ಮೆಂಟ್ ತಂದಿದ್ದಾರೆ. ಇದನ್ನು ಸ್ವಾಗತ ಮಾಡುತ್ತೇನೆ. ಡೈರೆಕ್ಟರ್ ಆಫ್ ಸ್ಟೂಡೆಂಟ್ ವೆಲ್‌ಫೇರ್ ಎನ್ನುವ ಒಂದು ಅಪಾಯಿಂಟ್‌ಮೆಂಟ್ ಇದೆ. ಇದನ್ನು ತಾವು ಕ್ಲಾರಿಫೈ ಮಾಡಬೇಕು. ಡೈರೆಕ್ಟರ್ ಆಫ್ ಸ್ಟೂಡೆಂಟ್ ವೆಲ್‌ಫೇರ್ ಅವರು ಏನೇನು ಮಾಡಬೇಕು ? ಅವರ ಕರ್ತವ್ಯಗಳು ಏನು ? ಡೈರೆಕ್ಟರ್ ಆಫ್ ಸ್ಟೂಡೆಂ ವೆಲ್‌ಫೇರ್ ಆಫೀಸರ್ ಅವರಿಗೆ ಇರುವಂತಹ ಕೆಲಸವೇನು ? ವರ್ಷಕ್ಕೆ ಒಂದು ದಿವಸ ಸೋಶಿಯಲ್ ಕ್ಯಾಂಪ್ಸ್ ಮಾಡಿ ಕೆಲವು ಬಿಲ್ಸ್‌ಗಳನ್ನು ತಯಾರು ಮಾಡುವುದು. ಕ್ಯಾಂಪ್ ಸಮಾರಂಭಕ್ಕೆ ವೈಸ್ ಚಾನ್ಸಲರ್ ಅಥವಾ ಮಿನಿಸ್ಟರ್ ಕರೆದು ಕೊಂಡು ಹೋಗಿ ಸಿಸಿ ಹೊಡೆಯುವುದು ಇಷ್ಟು ಬಿಟ್ಟರೆ ಇವರು ಬೇರೆ ಏನೂ ಮಾಡುವುದಿಲ್ಲ. ಆತನಿಗೆ ಅಲ್ಲಿ ಕೆಲಸವೇ ಇಲ್ಲ ವರ್ಷದಲ್ಲಿ ಒಂದು ದಿವಸ ಮಿನಿಸ್ಟರ್‌ಗೆ ಹೂವಿನಹಾರ ಹಾಕಿ ಊರೆಲ್ಲಾ ಮೆರವಣಿಗೆ ಮಾಡಿಸುವುದು ವಿದ್ಯಾರ್ಥಿಗಳ ಕೈಯಲ್ಲಿ ಕಸ ಗುಡಿಸುವುದು ಇಂತಹ ಕೆಲಸಕ್ಕೆ ೫೦ ಸಾವಿರದಿಂದ ೨ಲಕ್ಷ ರೂಪಾಯಿಗಳವರೆಗೆ ಬಿಲ್ ಮಾಡುವುದು ಇಷ್ಟೆ ಕೆಲಸ. ಸ್ಟೂಡೆಂಟ್ ಸೋಷಿಯಲ್ ವೆಲ್‌ಫೇರ್ ಆಫೀಸರ್ ಎಂದರೆ ವಿದ್ಯಾರ್ಥಿಗಳಿಗೆ ನಿಜವಾಗಿಯೂ ಏನೇನು ಬೇಕು ಅವರಿಗೆ ಏನೇನು ಅವಶ್ಯಕತೆಗಳು ಇವೆ ರೇಷಿಯೋ ಪ್ರಕಾರ ಟೀಚರ್ಸ್ ಇದ್ದಾರೆಯೆ ? ಲೆಕ್ಚರರ್ಸ್‌ಗಳು ಇದ್ದಾರೋ ಇಲ್ಲವೋ ಅದರ ಬಗ್ಗೆ ಅವರು ಗಮನ ಕೊಡಬೇಕು. ಹಳ್ಳಿಗಾಡಿನ ಪ್ರದೇಶಗಳಿಂದ ಬಂದಿರತಕ್ಕ ವಿದ್ಯಾರ್ಥಿಗಳಿಗೆ ಹಾಸ್ಟೆಲ್‌ನ ವ್ಯವಸ್ಥೆ ಇದೆಯೋ ಇಲ್ಲದಿದ್ದರೆ ಅವರಿಗೆ ಏನು ಅನುಕೂಲ ಮಾಡಿಕೊಡಬೇಕು ಈ ಬಗ್ಗೆ ಅವರು ಗಮನ ಕೊಡಬೇಕು. ಅವರು ಲಯಸನ್ ಆಫೀಸರ್ ಆಗಿರಬೇಕು. ಈ ಒಂದು ಪೋಸ್ಟ್ ಡೆಕೋರೇಟಿವ್ ಆಗಿ ಇದೆ. ಇದಕ್ಕೆ ನಾನು ಒಂದು ಸಣ್ಣ ತಿದ್ದುಪಡಿಯನ್ನು ತಂದಿದ್ದೇನೆ ಅದರ ಬಗ್ಗೆ ಆಮೇಲೆ ಮಾತನಾಡುತ್ತೇನೆ ಮಾನ್ಯ ರಘುಪತಿಯವರು ಸ್ಟೂಡೆಂಟ್ ಮೂವ್‌ಮೆಂಟ್‌ನಿಂದ ಬಂದವರು. ೫ ಜನ ವಿದ್ಯಾರ್ಥಿಗಳನ್ನು ಸಿಂಡಿಕೇಟ್‌ಗೆ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ, ಈ ರೀತಿ ತಾವು ಮಾಡಿರತಕ್ಕದ್ದು ನನಗೆ ಬೇಸರವಾಗುತ್ತದೆ, ನಿಜವಾಗಿಯೂ ಇದು ಒಪ್ಪಿಕೊಳ್ಳತಕ್ಕದ್ದಲ್ಲ. ಎಲೆಕ್ಟ್ರೋಲ್ ಕಾಲೇಜು ಎಂದು ಹೇಳುವುದು ಬೇಡ. ಡೈರೆಕ್ಟಾಗಿ ಯಾವ ಪಾರ್ಟಿಯಿಂದ ಬೇಕಾದರೂ ಬರಲಿ. ಜನತಾ ಸಪೋರ್ಟ್‌ನಿಂದ ಬರಲಿ, ಸ್ಟೂಡೆಂಟ್ ವಿಂಗ್‌ನಿಂದ ಬರಲಿ ಹೇಗೆ ಬರಲಿ ನೇರವಾಗಿ ಬರಲಿ. ಎಲೆಕ್ಟ್ರೋಲ್ ಕಾಲೇಜು ಎಂದು ಕ್ಲಿಪ್ ತಯಾರು ಮಾಡಿ ಕೊಟ್ಟು ಅವರಿಗೆ ಬೇಕಾಗಿರುವ ವಿದ್ಯಾರ್ಥಿಗಳನ್ನು ಸೆಲೆಕ್ಟ್ ಮಾಡಿಕೊಂಡು ಸಿಂಡಿಕೇಟ್‌ನಲ್ಲಿ ಹಾಕಿ ಕೊಳ್ಳುತ್ತಾರೆ.

ಶ್ರೀ ಎಸ್. ಕೆ. ಕಾಂತ.—ಗುಲ್ಬರ್ಗದಲ್ಲಿ ವರ್ಕ್‌ಲೋಡ್ ಕಡಿಮೆ ಇದೆ. ಶಿಫ್ಟ್ ಸಿಸ್ಟಮ್ ಕಳೆದ ಎರಡು ವರ್ಷಗಳಿಂದ ಇದೆ. ಕೋರ್ಟ್‌ನಲ್ಲಿ ಕೇಸುಗಳು ಇವೆ. ಲೇಬರ್ ಕೋರ್ಟ್ ನಿರ್ಣಯ ಕೊಟ್ಟರೂ ಕಳೆದ ಎರಡು ವರ್ಷಗಳಿಂದ ಗೆಜೆಟ್‌ನಲ್ಲಿ ಇದು ಪ್ರಿಂಟ್ ಆಗುತ್ತಾ ಇಲ್ಲ. ಮಾನ್ಯ ದೇವೇ ಗೌಡರು ಅಲ್ಲಿಗೆ ವಿಸಿಟ್ ಮಾಡಿದ್ದಾರೆ. ಅಲ್ಲಿ ಸ್ಟಾಫ್ ಸರಿಯಾಗಿ ಇಲ್ಲ. ಪ್ರೆಸ್‌ಗೆ ಡೆಪ್ಯುಟಿ ಡೈರೆಕ್ಟರ್‌ನ್ನು ಪೋಸ್ಟ್ ಮಾಡಿಲ್ಲ.

ಶ್ರೀ ಎಂ. ರಘುಪತಿ.—ಮುದ್ರಣಾಲಯವನ್ನು ಎಕ್ಸ್‌ಪ್ಯಾನ್‌ಷನ್ ಮಾಡುವ ಯೋಜನೆ ಇದೆ. ಎಕ್ಸ್‌ಪ್ಯಾನ್‌ಷನ್ ಮಾಡುವುದಕ್ಕೆ ಸಾಧ್ಯವೇ ಎಂಬುದನ್ನು ಈ ಅಧಿವೇಶನ ಮುಗಿದ ಮೇಲೆ ಭೇಟಿ ಕೊಟ್ಟು ನೋಡುತ್ತೇನೆ. ಟೆಕ್ಸ್ಟ್ ಬುಕ್ ಪ್ರೆಸ್‌ನ್ನು ಎಕ್ಸ್‌ಪ್ಯಾನ್‌ಷನ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ನಾನು ಸ್ಥಳಕ್ಕೆ ಖುದ್ದಾಗಿ ಹೋಗುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.—ಸೆಕ್ಷನ್ ೪೯ ಬಗ್ಗೆ ತಿದ್ದುಪಡಿಯನ್ನು ತಂದಿದ್ದೇನೆ. ಅದರಲ್ಲಿ ಪ್ರೊಫೆಸರ್ ಮತ್ತು ರೀಡರ್ಸ್ ಬಗ್ಗೆ ಒಂದು ಅನುಮಾನವಿದೆ. ಅಪಾಯಿಂಟ್‌ಮೆಂಟ್ ಬಗ್ಗೆ ಒಂದು ಹೈಕೋರ್ಟ್ ಆರ್ಡರ್ ಇದೆ.

ಶ್ರೀ ಎಂ. ರಘುಪತಿ.—ಅದನ್ನು ನಾನು ಒಪ್ಪಿಕೊಂಡಿದ್ದೇನೆ.

ಶ್ರೀ ಆರ್. ವೆಂಕಟರಾಮಯ್ಯ.—ತಾವು ಒಪ್ಪಿಕೊಂಡಿದ್ದರೆ ನಾನು ಪ್ರೆಸ್ ಮಾಡುವುದಿಲ್ಲ. ಎರಡು ಮೂರು ಸಾರಿ ಓದಿದರೂ ಇದು ಅರ್ಥವಾಗಲಿಲ್ಲ ಪ್ರೊಫೆಸರ್ಸ್ ಮತ್ತು ರೀಡರ್ಸ್ ಎರಡು ಬಾರಿ ಸಾರಿ ಸೇರಿಸಿದ್ದಾರೆ. ಪ್ರೊಫೆಸರ್ ಮತ್ತು ರೀಡರ್ಸ್‌ಗಳು ಹೈಕೋರ್ಟ್‌ನಲ್ಲಿ ರಿಟ್ ಪಿಟಿಷನ್ ಹಾಕಿ ಕೊಂಡಿದ್ದಾರೆ ಅಪಾಯಿಂಟ್‌ಮೆಂಟ್‌ನ ಬಗ್ಗೆ ಎಜುಕೇಷನ್ ಡಿಪಾರ್ಟ್‌ಮೆಂಟ್ ಮೇಲೆ ಕೋರ್ಟ್‌ನಲ್ಲಿ ಪ್ರೊಸಿಡಿಂಗ್ಸ್ ನಡೆಯುತ್ತಿದೆ. ಇದನ್ನು ವಿರೋಧ ಮಾಡುವುದಕ್ಕೆ ನಾನು ತಿದ್ದುಪಡಿಯನ್ನು ತಂದಿದೆ,

ಈಗ ಅದನ್ನು ಒಪ್ಪಿಕೊಳ್ಳುತ್ತಿದ್ದಾರೆ, ಅದಕ್ಕೋಸ್ಕರ ನಾನು ಹೆಚ್ಚಾಗಿ ಕೇಳುವುದಿಲ್ಲ ತಮಗೆ ಧನ್ಯವಾದಗಳನ್ನು ಹೇಳುತ್ತೇನೆ. ಮತ್ತೊಂದು ವಿಷಯ ಹೇಳುವುದಾದರೆ ವಿದ್ಯಾ ಸಂಸ್ಥೆಗಳು ಹೇಗೆ ನಡೆಯುತ್ತಿವೆ ಎಂದರೆ ಒಂದೊಂದು ರಾಜ್ಯಕ್ಕೆ ಒಂದೊಂದು ದೇಶಕ್ಕೆ ಒಂದೊಂದು ಜಾತಿಗೆ ಒಂದೊಂದು ವಿದ್ಯಾ ಸಂಸ್ಥೆ. ನಮ್ಮ ದೇಶದಲ್ಲಿ ಜಾತೀಯ ಪಕ್ಷಗಳು ಇವೆ, ಮೈನಾರಿಟಿಯವರಿಗೆ ಒಂದು ಸಂಸ್ಥೆ. ಈ ತರಹ ಸಂಸ್ಥೆಗಳನ್ನು ಬೆಳೆಸುವುದರ ಮೂಲಕ ಜಾತಿಮತವನ್ನು ಬೆಳೆಸುತ್ತಿದ್ದಾರೆ. ಸಂವಿಧಾನದ ಕನ್‌ರೆಕಂಟ್ ಲಿಸ್ಟನ್ನೂ ತಾವು ಓದಿ ನೋಡಿದರೆ ಗೊತ್ತಾಗುತ್ತದೆ. ಅದು ಈ ರೀತಿ ಇದೆ :

Constitution — List III — Concurrent List says:

> "Education, including technical education, Medical Education and Universities, subject to the provisions of entires 63, 64, 65 and 66 of List I : Vocational and Technical Training of Labour", ಇದರ ಜೊತೆಗೆ

ಸ್ಟೇಟ್ ಲಿಸ್ಟಿನಲ್ಲಿಯೂ ಇದು ಉಂಟು. ಕೊನೆಯ ಪಕ್ಷ ಯೂನಿವರ್ಸಿಟಿ ಎಜುಕೇಷನ್ ಎಂದರೆ ನಾವು ಸಂಕುಚಿತ ಮನೋಭಾವನೆಯನ್ನು ಬಿಟ್ಟು, ಇನ್ನು ಮುಂದೆ ಸ್ಟ್ಯಾಂಡರ್ಡ್ ಎಜುಕೇಷನ್ ಇಲ್ಲದಿದ್ದರೆ, ತಮಿಳುನಾಡಿನಲ್ಲಿ ನಮ್ಮ ನ್ಯಾಷನಲ್ ಲೀಡರ್ ವೀರಪಾಂಡ್ಯಕಟ್ಟಬೊಮ್ಮನ್ ಎಂದು ಹೇಳಿದ ಹಾಗೆ, ನಮ್ಮಲ್ಲಿ ಕಿತ್ತೂರು ರಾಣಿ ಚೆನ್ನಮ್ಮ ಎಂದು ಹೇಳಿದ ಹಾಗೆ, ಮಹಾರಾಷ್ಟ್ರದಲ್ಲಿ ಅವರು ಒಬ್ಬರ ಹೆಸರು ಹೇಳಿದ ಹಾಗೆ. ಇದು ಸರಿಯಾಗುವುದಿಲ್ಲ. ನಾವು ಭಾರತೀಯರು, ನಮ್ಮಲ್ಲಿ ದೊಡ್ಡ ಬುದ್ಧಿ ಇರಬೇಕು. ಮತೀಯ ಭಾವನೆಯನ್ನು ಬೆಳೆಸತಕ್ಕದ್ದು ಸರಿಯಲ್ಲ. ವೆಂಕಟಸ್ವಾಮಿ ಕಮೀಷನ್, ಹಾವನೂರು ಕಮೀಷನ್ ಇಂತಹ ಕಮೀಷನ್‌ಗಳನ್ನು ನೇಮಕ ಮಾಡುವುದರಿಂದ ನಾವೆಲ್ಲ ಒಂದೇ ಎನ್ನುವ ಭಾವನೆಗೆ ಹೆಚ್ಚು ಪ್ರೋತ್ಸಾಹ ಸಿಗುತ್ತಿಲ್ಲ. ಯೂನಿವರ್ಸಿಟಿಗಳಲ್ಲಿ ಆದರೂ ಅದರ ಬಗ್ಗೆ ಯೋಚನೆ ಮಾಡಿ. ಯೂನಿವರ್ಸಿಟಿಗಳಿಗೆ ಒಂದು ಸ್ಟ್ಯಾಂಡರ್ಡ್ ಇದೆ. ಕೊನೆಯ ಪಕ್ಷ ವಿಶ್ವವಿದ್ಯಾಲಯಗಳ ಮಟ್ಟದಲ್ಲಿಯಾದರೂ ಅದರ ಬಗ್ಗೆ ಯೋಚನೆ ಮಾಡಬೇಕು. ನಮ್ಮ ಮೈಸೂರು ಯೂನಿವರ್ಸಿಟಿ ಸಿಂಡಿಕೇಟ್‌ನ ಬಗ್ಗೆ ಒಂದು ಪದ ಉಪಯೋಗ ಮಾಡುತ್ತೇನೆ ತಾವು ಬೇಜಾರು ಮಾಡಿಕೊಳ್ಳಬಾರದು. ಅಲ್ಲಿ ಕೋತಿ ನಾಯಿಗಳು ಕಿತ್ತಾಡಿದ ಹಾಗೆ ಕಿತ್ತಾಡುತ್ತಾರೆ. ಅದು ಪತ್ರಿಕೆಗಳಲ್ಲಿ ಪ್ರಚಾರವಾಗುತ್ತಿದೆ. ಜವಾಬ್ದಾರಿಯುತ ವ್ಯಕ್ತಿಗಳು ಆ ತರಹ ಮಾಡುವುದು ಸರಿಯಲ್ಲ ಅದೆಲ್ಲಾ ಪತ್ರಿಕೆಗಳಲ್ಲಿ ಬರುತ್ತಿದೆ. ಅವರು ಸಣ್ಣ ವಿಚಾರಗಳಿಗೂ ಹೊಡೆದಾಡುತ್ತಾರೆ, ಚಿಕ್ಕ ಮಕ್ಕಳ ತರಹ ಮಾಡುತ್ತಿದ್ದಾರೆ. ಇಂಥವರು ನಮ್ಮ ವಿದ್ಯಾರ್ಥಿಗಳನ್ನು ಸರಿಮಾಡುವಂತಹ ಮಹಾನುಭಾವರು ವಿದ್ಯಾರ್ಥಿಗಳನ್ನು ಸಿಂಡಿಕೇಟ್‌ಗೆ ನಾಮಿನೇಟ್ ಮಾಡಬೇಕೇ ಬೇಡವೇ, ನಾಮಿನೇಟ್ ಮಾಡುವಾಗ ಯೋಚನೆ ಮಾಡಿ. ಇಂತಹವರು ಮಹಾನುಭಾವರು ಆಕಸ್ಮಾತಾಗಿ ಏನೋ ಪ್ರಿನ್ಸಿಪಾಲರಾಗಿರುತ್ತಾರೆ. ಶಿಫಾರಸ್ಸಿನ ಮೇಲೆ ಜವಾಬ್ದಾರಿ ಸ್ಥಾನಗಳಲ್ಲಿರುತ್ತಾರೆ. ಇಂತಹವರನ್ನು ಸಿಂಡಿಕೇಟ್‌ಗೆ ಹಾಕುವುದನ್ನು ಅವಾಯ್ಡ್ ಮಾಡಬೇಕು. ಸಿಂಡಿಕೇಟ್‌ಗೆ ಹಾಕಬೇಕಾದರೆ ಅವರ ಚಾರಿತ್ರ್ಯ ಚೆನ್ನಾಗಿರಬೇಕು. ನಾಮಿನೇಟ್ ಮಾಡುವಾಗ ಇಂತಹ ಷರತ್ತುಗಳನ್ನು ಅನುಸರಿಸಬೇಕು. ಇಲ್ಲದಿದ್ದರೆ ಯೂನಿವರ್ಸಿಟಿಗಳಿಗೆ ಅವರುಗಳಿಂದ ಅಪಮಾನವಾಗುತ್ತದೆ. ರಿಸರ್ವೇಷನ್ ಒಪ್ಪಿಕೊಂಡಿದ್ದಾರೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದರಿಗೆ ಯಾವ ರೀತಿ ರಿಸರ್ವೇಷನ್ ಇದೆ ಅದೇ ರೀತಿ ಗ್ರಾಮಾಂತರ ಪ್ರದೇಶಗಳಿಂದ ಬಂದಂತಹ ವಿದ್ಯಾರ್ಥಿಗಳಿಗೆ ರಿಸರ್ವೇಷನ್ ಇರಬೇಕು. ತಾತ್ವಿಕವಾಗಿ ಅನೇಕ ಕಡೆ ರಿಸರ್ವೇಶನ್‌ಗಳನ್ನು ಒಪ್ಪಿಕೊಂಡಿದ್ದೀರಿ. ಮೆಡಿಕಲ್ ಕಾಲೇಜು ಮತ್ತು ಇಂಜಿನಿಯರಿಂಗ್ ಕಾಲೇಜುಗಳಿಗೆ ಸೇರುವ ವಿದ್ಯಾರ್ಥಿಗಳು ಹಳ್ಳಿಗಾಡು ಪ್ರದೇಶಗಳಿಂದ ಬಂದಿದ್ದರೆ ಅವರಿಗೆ ರಿಸರ್ವೇಶನ್ ಅಪ್ಲೈ ಮಾಡಬೇಕು. ಆ ಒಂದು ತಿದ್ದುಪಡಿಯನ್ನು ತಾವು ಒಪ್ಪಿಕೊಳ್ಳಬೇಕು. ಹಿಂದುಳಿದ ವರ್ಗಗಳವರಿಗೆ ಪರಿಶಿಷ್ಟ ಜಾತಿ ಮತ್ತು ವರ್ಗಗಳವರಿಗೆ ಯಾವ ರೀತಿ ಮೀಸಲಾತಿ ಇದೆ ಅದೇ ರೀತಿ ಹಳ್ಳಿಗಾಡಿನಿಂದ ಬಂದಂತಹ ವಿದ್ಯಾರ್ಥಿಗಳಿಗೆ ಇರಬೇಕೆಂದು ತಿದ್ದುಪಡಿಯನ್ನು ತಂದಿದ್ದಾರೆ. ಅದನ್ನು ಇದರಲ್ಲಿ ಸೇರಿಸಿಕೊಳ್ಳಬೇಕು. ನಾನು ಇಷ್ಟು ಸಮಯ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವೇದಾಂತ ಹೆಮ್ಮಿಗೆ (ಕೃಷ್ಣರಾಜ).—ಮಾನ್ಯ ಅಧ್ಯಕ್ಷರೆ, ವಿಶ್ವವಿದ್ಯಾಲಯ ಎಂದು ಏನು ಹೇಳುತ್ತಾರೆ ಅದನ್ನು ನಾನು ನನ್ನ ದೃಷ್ಟಿಯಲ್ಲಿ ಸರಸ್ವತಿ ದೇಗುಲವೆಂದು ತಿಳಿದುಕೊಂಡಿದ್ದೇನೆ. ನಾನು ಮೈಸೂರು ವಿಶ್ವವಿದ್ಯಾನಿಲಯ ಇರುವಲ್ಲಿಂದ ಬಂದವನು. ಕುವೆಂಪುರವರು ಉಪಕುಲಪತಿಗಳಾಗಿದ್ದ ಕಾಲದಿಂದ ನಾನು ವಿಶ್ವವಿದ್ಯಾನಿಲಯವನ್ನು ಹತ್ತಿರದಿಂದ ಚೆನ್ನಾಗಿ ನೋಡಿದ್ದೇನೆ. ಆ ದೃಷ್ಟಿಯಿಂದ ವಿಶ್ವವಿದ್ಯಾನಿಲಯದ ಬಗ್ಗೆ ಎರಡು ಮಾತುಗಳನ್ನಾಡುವುದಕ್ಕೆ ಇಷ್ಟಪಡುತ್ತಿದ್ದೇನೆ. ಮಾನ್ಯ ಸಚಿವರು ಈ ತಿದ್ದುಪಡಿ ಮಸೂದೆಯಲ್ಲಿ ೩ ವರ್ಷದಿಂದ ೫ ವರ್ಷದವರೆಗೆ ಎಂದು ಹೇಳಿದ್ದಾರೆ. ಈ ಒಂದು ಅಧಿಕಾರಾವಧಿಯನ್ನು ಹೆಚ್ಚು ಮಾಡತಕ್ಕ ಅಗತ್ಯವೇನು ? ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಮೈಸೂರು ವಿಶ್ವವಿದ್ಯಾನಿಲಯವಾಗಲಿ, ಯಾವುದೇ ವಿಶ್ವವಿದ್ಯಾನಿಲಯವಾಗಲಿ, ಯಾವ ರೀತಿ ವಿಶ್ವ ವಿದ್ಯಾನಿಲಯದಲ್ಲಿ ಕಲುಷಿತ ವಾತಾವರಣ ಸೃಷ್ಟಿಯಾಗಿದೆ ಎಂಬುದನ್ನು ನಾವು ಇವತ್ತು ನೋಡುತ್ತಿದ್ದೇವೆ. ಆ ದೃಷ್ಟಿಯಿಂದ ಅಲ್ಲಿ ಬರತಕ್ಕ ಉಪಕುಲಪತಿಗಳಾಗಲಿ, ಸಿಂಡಿಕೇಟ್ ಮೆಂಬರ್ಸ್ ಆಗಲಿ ಸೆನೆಟ್ ಮೆಂಬರ್ಸ್ ಆಗಲಿ ಅವರು ಬೇರೆ ಬೇರೆ ಭಾಗಗಳಾಗಿ ವಿಶ್ವವಿದ್ಯಾನಿಲಯವನ್ನು ರಾಜಕೀಯವಾಗಿ ಬಳಸತಕ್ಕ ಪರಿಸ್ಥಿತಿ ಬಂದರೆ, ವಿಶ್ವವಿದ್ಯಾನಿಲಯದ ಎಲ್ಲಾ ಭಾಗದಲ್ಲೂ ವಿದ್ಯಾರ್ಥಿಗಳಿಗೆ ಪ್ರಾತಿನಿಧ್ಯವಾದರೆ ಈ ದೇಶದ ಪರಿಸ್ಥಿತಿ ಏನಾಗುತ್ತದೆಂಬುದನ್ನು ಚಿಂತನೆ ಮಾಡಬೇಕು. ಇದರ ಜೊತೆಗೆ ಪುಟ ೩೦ರಲ್ಲಿ ಈ ರೀತಿ ಹೇಳಿದ್ದೀರಿ.—

> 'five elected reprsentatives of studei ts of the University, two from among post graduate students and three from among under graduates studen's.'

ವಿಶ್ವವಿದ್ಯಾನಿಲಯದ ಶಿಕ್ಷಣದ ಸೂತ್ರವನ್ನು ತೀರ್ಮಾನ ಮಾಡತಕ್ಕ ಸಮಿತಿ ಎಂದರೆ ಸೆನೆಟ್ ಮತ್ತು ಸಿಂಡಿಕೇಟ್. ಯಾವ ರೀತಿ ಶಿಕ್ಷಣ ಕೊಡಬೇಕು, ಯಾವ ಯಾವ ಶಿಕ್ಷಣ ಕೊಡಬೇಕು, ಯಾವ ಶಿಕ್ಷಣವನ್ನು ಕೊಟ್ಟರೆ ವಿದ್ಯಾರ್ಥಿಯ ಭವಿಷ್ಯ ಉತ್ತಮಗೊಳ್ಳುತ್ತದೆಂಬುದನ್ನು ತೀರ್ಮಾನ ಮಾಡತಕ್ಕ ಸಂಸ್ಥೆ ಏನಿದೆ ಆ ಸಂಸ್ಥೆಯಲ್ಲಿ "ಅಆಇಈ" ಬಾರದೆ ಇರತಕ್ಕವರಿಗೆ ಸ್ಥಾನಮಾನ ಕೊಡುವುದು ಎಂದರೆ ಏನು ಅರ್ಥ ? ನೀವು ವಿದ್ಯಾರ್ಥಿ ನಾಯಕರಾಗಿದ್ದೀರಿ ಎಂಬುದು ನನಗೆ ಗೊತ್ತಿದೆ. ನನಗೂ ವಿದ್ಯಾರ್ಥಿಗಳ ಬಗ್ಗೆ ಕಾಳಜಿ ಇದೆ. ಆದರೆ ವಿಶ್ವವಿದ್ಯಾನಿಲಯದಲ್ಲಿ ಒಬ್ಬ ಸೆನೆಟ್ಟಿಗೆ ಚುನಾಯಿತನಾದಮೇಲೆ Can you Ca l him to contest to the syndicate one of the major institution of the Udiversity ? a Cabinet of the University ಆ ವಿದ್ಯಾರ್ಥಿ ಅಂಡರ್ ಗ್ರಾಜುಯೇಟ್ ಆಗಿದ್ದರೂ ಅಲ್ಲಿ ಬಂದು ಕುಳಿತುಕೊಳ್ಳುತ್ತಾನೆ. ಅವನು ಪೋಸ್ಟ್ ಗ್ರಾಜುಯೇಟ್ ಆಗಿರುವುದಿಲ್ಲ, ಪೋಸ್ಟ್ ಗ್ರಾಜುಯೇಟ್ ಸ್ಟೂಡೆಂಟ್ ಆಗಿರುತ್ತಾನೆ ಅಷ್ಟೆ. ಸ್ನಾತಕೋತ್ತರ ಪದವೀಧರರು, ತಜ್ಞರು ಕೂರತಕ್ಕ ಜಾಗದಲ್ಲಿ ಅವನು ಕೂರುತ್ತಾನೆ. ಅಲ್ಲಿ ಕುಳಿತು ತೀರ್ಮಾನ ಮಾಡಬೇಕಾಗಿರುವವರ ತಜ್ಞರು. ವಿದ್ಯಾರ್ಥಿಗಳ ಬಗ್ಗೆ, ಅವರ ಭವಿಷ್ಯದ ಬಗ್ಗೆ ಕಾಳಜಿ ಇರತಕ್ಕ ಶಿಕ್ಷಣ ತಜ್ಞರು ಅಲ್ಲಿ ಇರಬೇಕು. ಆ ಒಂದು ವ್ಯವಸ್ಥೆ ಆಗಬೇಕು. ಶಿಕ್ಷಣ ಸೂತ್ರವನ್ನು ತೀರ್ಮಾನ ಮಾಡತಕ್ಕ ಸೆನೆಟ್ ಮತ್ತು ಸಿಂಡಿಕೇಟ್ ಸಂಸ್ಥೆಯಲ್ಲಿ ಅಂಡರ್ ಗ್ರಾಜುಯೇಟ್ಸ್, ಪೋಸ್ಟ್ ಗ್ರಾಜುಯೇಟ್ ಸ್ಟೂಡೆಂಟ್ಸ್‌ಗೆ ಜಾಗ ಕೊಡತಕ್ಕದ್ದು ನಿಜವಾಗಿಯೂ ಒಳ್ಳೆಯದಲ್ಲ. ಇದರ ಬಗ್ಗೆ ಪುನರ್ ಪರಿಶೀಲನೆ ಮಾಡಬೇಕೆಂದು ನಾನು ಒತ್ತಾಯಿಸುತ್ತೇನೆ.

ಟೆಂಪರರಿ ಅಪಾಯಿಂಟ್‌ಮೆಂಟ್ಸ್ ಬಗ್ಗೆ ಹೇಳುವುದಾದರೆ ಇದರಲ್ಲಿ ವೈಸ್ ಚಾನ್ಸಲರ್ ೬ ತಿಂಗಳ ವರೆಗೆ ಲೆಕ್ಚರರ್ಸ್ ಅನ್ನು ಅಪಾಯಿಂಟ್ ಮಾಡಿಕೊಳ್ಳಬಹುದೆಂದು ಇದೆ. ಮೈಸೂರು ವಿಶ್ವವಿದ್ಯಾನಿಲಯದ ದುರಂತ ಪರಿಸ್ಥಿತಿಯನ್ನು ನಾನು ನೋಡಿದ್ದೇನೆ. ೬೦–೭೦ ಜನ ಇವತ್ತಿನ ದಿವಸ ವಿಶ್ವವಿದ್ಯಾನಿಲಯದಲ್ಲಿ ಹಂಗಾಮಿಯಾಗಿ ಕೆಲಸ ಮಾಡುತ್ತಿದ್ದಾರೆ. ಅವರು ೭–೮ ವರ್ಷಗಳ ಕಾಲ ಕೆಲಸ ಮಾಡಿದ್ದಾರೆ. ಇವತ್ತಿಗೂ ಅವರು ಹಂಗಾಮಿಯಾಗಿ ಕೆಲಸ ಮಾಡುತ್ತಿದ್ದಾರೆ. ಕಳೆದ ಅಧಿವೇಶನದಲ್ಲಿ ನಾನು ಈ ಬಗ್ಗೆ ಪ್ರಸ್ತಾಪ ಮಾಡಿದ್ದೆ. ಆದರೂ ಹಂಗಾಮಿಯಾಗಿಯೇ ಅವರನ್ನು ಇವತ್ತಿಗೂ ಮುಂದುವರಿಸುತ್ತಿದ್ದಾರೆ ಬಹುಶಃ ಅದು ಯಾವುದೋ ಪ್ರಭಾವದಿಂದ ನಡೆಯುತ್ತಿದೆ ಎಂದು ಕಾಣುತ್ತದೆ. ಹೊಸದಾಗಿ ಹುದ್ದೆಗಳಿಗೆ ಅರ್ಜಿಯನ್ನು ಕರೆದಾಗ ಹಂಗಾಮಿಯಾಗಿ ಕೆಲಸ ಮಾಡುತ್ತಿರುವವರು ಅರ್ಜಿ ಹಾಕಿದ್ದರೂ ಅವರ ಅರ್ಜಿಯನ್ನು ಗಣನೆಗೆ ತೆಗೆದುಕೊಳ್ಳದೆ ಹೊಸಬರನ್ನು ತೆಗೆದು

ಕೊಳ್ಳುತ್ತಾರೆ, ಆದ್ದರಿಂದ ೬ ತಿಂಗಳ ಕಾಲ ಹಂಗಾಮಿಯಾಗಿ ವೈಸ್ ಚಾನ್ಸಲರ್ ನೇಮಕ ಮಾಡಿಕೊಳ್ಳಬಹುದೆಂದು ಏನು ಇದೆ ಆ ರೀತಿ ೬ ತಿಂಗಳ ಮಟ್ಟಿಗೆ ಮಾಡಿಕೊಳ್ಳುವುದಾದರೆ ಮಾಡಿಕೊಂಡು ಹೊಸದಾಗಿ ಹುದ್ದೆಗೆ ಅರ್ಜಿ ಕರೆದಾಗ ಅವರಿಗೆ ಆದ್ಯತೆ ಕೊಡಬೇಕೆಂದು ಹೇಳುತ್ತೇನೆ. ಯಾರನ್ನು ೬ ತಿಂಗಳ ಮಟ್ಟಿಗೆ ನೇಮಕ ಮಾಡಿಕೊಂಡಿರುತ್ತಾರೆ ಅವರಿಗೆ ಆದ್ಯತೆ ಕೊಡಬೇಕೆಂದು ಮತ್ತೊಮ್ಮೆ ಒತ್ತಿ ಹೇಳುತ್ತೇನೆ. ಮೆರಿಟ್, ಕ್ವಾಲಿಫಿಕೇಷನ್ ಇದ್ದರೆ ಅವರಿಗೆ ಆ ಹುದ್ದೆಯಲ್ಲಿ ಆದ್ಯತೆ ಕೊಡುವುದಕ್ಕೆ ಪ್ರಯತ್ನ ಮಾಡಿ. ೬ ತಿಂಗಳ ಮಟ್ಟಿಗೆ ತೆಗೆದುಕೊಂಡಿದ್ದು ಮತ್ತೆ ಹೊಸದಾಗಿ ಹುದ್ದೆಗಳಿಗೆ ಅರ್ಜಿಯನ್ನು ಕರೆದಾಗ ಅವರನ್ನು ಕೈಬಿಡತಕ್ಕ ಪದ್ಧತಿಯನ್ನು ತಪ್ಪಿಸಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಈ ಶಿಕ್ಷಣ ಮಸೂದೆಯನ್ನು ಏನು ತಂದಿದ್ದಾರೆ ಇದರ ಬಗ್ಗೆ ನಾನು ಒಂದೆರಡು ಸಲಹೆಗಳನ್ನು ಮಾಡಿದ್ದೇನೆ. ವಿದ್ಯಾರ್ಥಿಗಳದ್ದು ಒಂದು, ೫ ವರ್ಷದ್ದು ಒಂದು, ಹುದ್ದೆಗಳನ್ನು ೬ ತಿಂಗಳ ಮಟ್ಟಿಗೆ ವೈಸ್ ಚಾನ್ಸಲರ್ ಭರ್ತಿ ಮಾಡುವುದು. ಇವುಗಳ ಬಗ್ಗೆ ಚಿಂತನೆ ಮಾಡಿ ವಿಶ್ವವಿದ್ಯಾನಿಲಯದಲ್ಲಿ ವಿದ್ಯಾರ್ಥಿಗಳಿಗೆ ಒಳ್ಳೆಯ ಶಿಕ್ಷಣ ದೊರಕಬೇಕು ಅವರು ಈ ದೇಶದ ಮೂರ್ತಿಗಳಾಗಿ ಆಗಬೇಕು, ಶಿಲ್ಪಿ ಆಗಬೇಕೆಂದು ಏನು ಹೇಳುತ್ತಾರೆ ಅದಕ್ಕೆ ಕಾರಣಕರ್ತರಾಗತಕ್ಕ ವ್ಯವಸ್ಥೆಯನ್ನು ಶಿಕ್ಷಣ ಸಚಿವರು ಮಾಡಲಿ ಎಂದು ಹೇಳಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ರಘುಪತಿ (ಶಿಕ್ಷಣ ಸಚಿವರು).—ಮಾನ್ಯ ಅಧ್ಯಕ್ಷರೆ, ಈ ತಿದ್ದುಪಡಿ ಮಸೂದೆಯನ್ನು ಈ ಸಭೆಯ ಮುಂದೆ ಮಂಡಿಸಿದಾಗ ಹಿರಿಯರು ಶಿಕ್ಷಣ ಕ್ಷೇತ್ರದಲ್ಲಿ ಬಹಳ ಅನುಭವವುಳ್ಳವರು ಹಾಗೂ ತಾವೇ ಸ್ವತಃ ಹಲವಾರು ಶಿಕ್ಷಣ ಸಂಸ್ಥೆಗಳನ್ನು ಕಟ್ಟಿ ಬೆಳಸಿ ಒಳ್ಳೆಯ ಹೆಸರನ್ನು ಪಡೆದಂಥ ಕೆ. ಹೆಚ್. ಪಾಟೀಲರು ಹಲವಾರು ಸೂಚನೆಗಳನ್ನು ಕೊಟ್ಟಿದ್ದಾರೆ. ಈಗ ವಿಶ್ವವಿದ್ಯಾನಿಲಯಗಳ ಆಡಿಟ್ ವಿಷಯದಲ್ಲಿ ನಾವು ಕಡ್ಡಾಯ ಮಾಡಿದ್ದೇವೆ. ಡಿಸೆಂಬರ್ ತಿಂಗಳೊಳಗೆ ಆಡಿಟ್ ಮಾಡಿ ವಿಶ್ವವಿದ್ಯಾನಿಲಯಗಳು ಸರ್ಕಾರಕ್ಕೆ ಕಳುಹಿಸಿಕೊಡಬೇಕೆಂದು ಮಾಡಿದ್ದೇವೆ. ಸರ್ಕಾರಕ್ಕೆ ಕಳುಹಿಸಿಕೊಟ್ಟ ಮೇಲೆ ಅದನ್ನು ಸದನದ ಮುಂದೆ ನಾವು ಇಡುತ್ತೇವೆ. ಈ ರೀತಿ ಮಾಡುವುದರಿಂದ ಸರ್ಕಾರದ ಪರಿಶೀಲನೆಗೆ ಅನುಕೂಲವಾಗುತ್ತದೆಂದು ಕಡ್ಡಾಯ ಮಾಡಿದ್ದೇವೆ. ಪ್ರೊ. ಚಾನ್ಸಲರ್ ಕಾರ್ಯವ್ಯಾಪ್ತಿಯನ್ನು ಜಾಸ್ತಿ ಮಾಡಬೇಕೆಂದು ಹೇಳಿದ್ದಾರೆ. ಆದರೆ ಈ ಸಂದರ್ಭದಲ್ಲಿ ಅದನ್ನು ಜಾಸ್ತಿ ಮಾಡುವುದು ಅಷ್ಟು ಒಳ್ಳೆಯದಲ್ಲವೆಂದು ನನ್ನ ಅಭಿಪ್ರಾಯ. ಏಕೆಂದರೆ ಪ್ರೊ. ಚಾನ್ಸಲರ ಹುದ್ದೆಯನ್ನು ಸೃಷ್ಟಿ ಮಾಡಿದ ಉದ್ದೇಶ ಏನೆಂದರೆ ಇಷ್ಟೆ. ವೈಸ್ ಚಾನ್ಸಲರ್ ಕಾನ್‌ವೊಕೇಷನ್ ಮಾಡಬೇಕೆಂದು ಯೋಚನೆ ಮಾಡಿದಾಗ ಅವರಿಗೆ ಟೈಂ ಸಿಗುವುದಿಲ್ಲ. ಅಂಥ ಸಂದರ್ಭದಲ್ಲಿ ತಿಂಗಳಾನುಗಟ್ಟಲೆ ಆ ಕಾರ್ಯಕ್ರಮ ಮುಂದಕ್ಕೆ ಹೋಗುತ್ತದೆ. ಡಿಗ್ರಿ ಸರ್ಟಿಫಿಕೇಟ್ ಪಡೆಯದೆ ಇದ್ದರೆ ಬೇರೆ ವಿಶ್ವವಿದ್ಯಾನಿಲಯಕ್ಕೆ ಅಥವಾ ಅಂತರಾಷ್ಟ್ರೀಯ ವಿಶ್ವವಿದ್ಯಾನಿಲಯಕ್ಕೆ ಹೋಗಬೇಕಾದರೆ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತದೆ. ಕೆಲವು ಹುದ್ದೆಗಳಿಗೆ ಅದನ್ನು ಇನ್‌ಸಿಸ್ಟ್ ಮಾಡುತ್ತಾರೆ. ಅದರಲ್ಲಿಯೂ ವಿದೇಶಕ್ಕೆ ಹೋಗುವಾಗ ಅದರ ಅವಶ್ಯಕತೆ ಬಹಳವಾಗಿರುತ್ತದೆ ಅಂಥ ಸಂದರ್ಭದಲ್ಲಿ ಅವರಿಗೆ ವಿಳಂಬವಾಗುವುದರಿಂದ ಅದನ್ನು ತಪ್ಪಿಸಬೇಕೆಂದು ಅನೇಕರು ಸೂಚನೆ ಕೊಟ್ಟರು ಅದನ್ನು ಎಲ್ಲಾ ವಿಶ್ವವಿದ್ಯಾನಿಲಯಗಳ ಕುಲಪತಿಗಳು ವಿಚಾರ ಮಾಡಿ ಅಭಿಪ್ರಾಯ ಸೂಚಿಸಿದ ಮೇಲೆ ಕೇವಲ ಕಾನ್‌ವೊಕೇಷನ್‌ನಲ್ಲಿ ಪ್ರಿಸೈಡ್ ಮಾಡುವುದಕ್ಕೋಸ್ಕರ ಪ್ರೊ-ಚಾನ್ಸಲರ್ ಹುದ್ದೆಯನ್ನು ಸೃಷ್ಟಿ ಮಾಡಿದ್ದೇವೆ. ಇದೇ ರೀತಿ ಇನ್ನೂ ಹಲವಾರು ಸೂಚನೆಗಳನ್ನು ಸದಸ್ಯರುಗಳು ಕೊಟ್ಟಿದ್ದಾರೆ ವಿಶ್ವವಿದ್ಯಾನಿಲಯಗಳಲ್ಲಿ ಜಾತಿ ಭಾವನೆ ಜಾಸ್ತಿಯಾಗಿದ್ದು ಕೆಲವು ಜಾತಿಗಳು ಮಾತ್ರ ಅನುಕೂಲತೆ ಪಡೆಯುತ್ತಿವೆ ಎಂದು ಹೇಳಿದ್ದಾರೆ. ನಾನು ಕೂಡ ಅದನ್ನು ಒಪ್ಪಿಕೊಳ್ಳುತ್ತೇನೆ. ಆದರೆ ಸರ್ಕಾರವನ್ನೇ ಆಗಲಿ, ವಿಶ್ವವಿದ್ಯಾನಿಲಯವನ್ನೇ ಆಗಲಿ ನಡೆಸುವಾಗ ಕಷ್ಟವನ್ನು ಎದುರಿಸಬೇಕಾಗುತ್ತದೆ. ಮಾನ್ಯ ಖರ್ಗೆಯವರು ಹೇಳಿದರು, ವಿಶ್ವವಿದ್ಯಾನಿಲಯಗಳಿಗೆ ಅಪೆಲೆಟ್ ಅಥಾರಿಟಿ ಕೊಡತಕ್ಕ ಸಂದರ್ಭದಲ್ಲಿ ವಿಶ್ವವಿದ್ಯಾನಿಲಯಗಳಿಗೆ ಅಧಿಕಾರಗಳನ್ನು ಕೊಟ್ಟಿದ್ದೀರಿ ಎಂದು. ಆ ಕರ್‌ಸ್ಪಾಂಡೆನ್ಸ್ ಅನ್ನು ಸಂಪೂರ್ಣವಾಗಿ ತಮಗೆ ಕಳುಹಿಸಿಕೊಡುತ್ತೇನೆ. ಅದನ್ನು ತಾವು ಬೇಕಾದರೆ ನೋಡಿ. ನಾನು ಈ ಬಗ್ಗೆ ಪದೇ ಪದೇ ವಾದ ಮಾಡಿದ್ದೇನೆ. ಕೆ.ಸಿ. ಪಂತ್‌ರ್‌ರವರು ವೈಸ್ ಚಾನ್ಸಲರ್ ಆಗಿದ್ದಾಗ ಕೇಂದ್ರ ಸರ್ಕಾರದಲ್ಲಿ ಅವರ ಸಮಕ್ಷಮದಲ್ಲಿ ವಾದ ವಿವಾದ ನಡೆಯಿತು, ಸಮಾಜದಲ್ಲಿ ಯಾರು ಅನ್ಯಾಯಕ್ಕೆ ಒಳಗಾಗಿದ್ದಾರೆ. ಅವರು ಶಿಕ್ಷಣ ಸಂಸ್ಥೆಗಳನ್ನು ನಡೆಸಬೇಕಾದರೆ. ಬೆಳೆಸಬೇಕಾದರೆ ಕಷ್ಟವಾಗುತ್ತದೆ. ಆದ್ದರಿಂದ ಸರ್ಕಾರಕ್ಕೆ ಸ್ವಲ್ಪವಾದರೂ ಹತೋಟಿ ಇರಬೇಕು, ಇಲ್ಲದಿದ್ದರೆ ಅಂಥ ಸಂಸ್ಥೆಗಳನ್ನು ಬೆಳೆಯುವುದಕ್ಕೆ ಬಿಡುವುದಿಲ್ಲವೆಂದು ವಾದ ಮಾಡಿದೆ.

ಆ ವಾದ ಮಾಡಿದ ಮೇಲೆ ಮತ್ತೆ ಶ್ರೀ ಪಿ.ವಿ. ನರಸಿಂಹರಾವ್ ರವರು ಶಿಕ್ಷಣ ಮಂತ್ರಿಗಳಾದ ಮೇಲೆ ಮತ್ತೆ ಇದೇ ರೀತಿಯ ವಾದ ನಡೆಯಿತು. ಇದು ನಡೆದು ಸುಮಾರು ೬ ತಿಂಗಳ ಕಾಲ ನಮಗೂ ಯಂ.ಜಿ.ಸಿ. ಅವರಿಗೂ ವಾದ ವಿವಾದ ನಡೆದು ಕೊನೆಗೆ ಈ ಸೂತ್ರವನ್ನು ವಿಧಿ ಇಲ್ಲದೇ ನಾವು ಒಪ್ಪಿ ಕೊಳ್ಳಬೇಕಾಯಿತು. ಆದುದರಿಂದ ಈ ಹಿನ್ನೆಲೆಯಲ್ಲಿ ನಾವು ಈ ತಿದ್ದುಪಡಿಯನ್ನು ತಂದಿದ್ದೇವೆ ನಾನು ಬೇಕಾದರೆ ಸಂಪೂರ್ಣ ಮಾಹಿತಿಯನ್ನು ತಮಗೆ ಒದಗಿಸಿಕೊಡುತ್ತೇನೆ ಮಾನ್ಯ ಸದಸ್ಯರುಗಳು ಹೇಳಿದ ಅಭಿಪ್ರಾಯಗಳನ್ನು ಒಪ್ಪಿಕೊಂಡಿರುವುದರಿಂದ ಹಲವಾರು ತೊಂದರೆಗಳು ಇವೆ. ಏಕೆಂದರೆ ಯು.ಜಿ.ಸಿ. ಯವರು ಈ ಎರಡು ವಿಶ್ವವಿದ್ಯಾನಿಲಯಗಳಿಗೆ ಮಾನ್ಯತೆ ಕೊಡಬೇಕಾಗಿತ್ತು, ಈ ಮಾನ್ಯತೆ ಕೊಡುವ ಸಂದರ್ಭದಲ್ಲಿ ಅವರ ನಿಬಂಧನೆಗಳನ್ನು ಒಪ್ಪಲೇಬೇಕು ಎಂದು ಹೇಳಿದಾಗ ನಮಗೆ ಸ್ವಲ್ಪ ಕಷ್ಟ ಆಯಿತು ಈ ಎರಡು ವಿಶ್ವವಿದ್ಯಾನಿಲಯಗಳಿಗೆ ಮಾನ್ಯತೆ ಪಡೆಯಲು ಮತ್ತು ಯಂ.ಜಿ.ಸಿಯವರು ಯಾವುದೇ ಯೋಚನೆ ಮಾಡಿದರೂ ಕೂಡ ಎಲ್ಲವನ್ನು ಸಮಗ್ರವಾಗಿ ಯೋಚಿಸಿಯೇ ಮಾಡುತ್ತಾರೆ ಎನ್ನುವ ದೃಷ್ಟಿಯಿಂದ ಈ ತಿದ್ದುಪಡಿಯನ್ನು ಒಪ್ಪಿಕೊಂಡಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ನಾವು ನಿಮ್ಮ ಕನ್‌ವಿಕ್ಷನ್ ಬಗ್ಗೆ ಅಥವಾ ವಿಶ್ವವಿದ್ಯಾನಿಲಯಗಳ ಬಗ್ಗೆ ಇರುವ ಅನುಕಂಪದ ಬಗ್ಗೆ ಹೇಳುತ್ತಾ ಇಲ್ಲ. ನಾವು ಹೇಳುವುದು ಏನೆಂದರೆ ನೀವು ಅಪೆಲೇಟ್ ಅಥಾರಿಟಿಯನ್ನು ಇಟ್ಟುಕೊಂಡಿದ್ದರೆ ಅದನ್ನು ಜುಡಿಷಿಯಸ್ ಆಗಿ ಉಪಯೋಗಿಸದೇ ಇದ್ದ ಪಕ್ಷದಲ್ಲಿ ಅದಕ್ಕೆ ಯಾವ ಅರ್ಥವೂ ಇರುವುದಿಲ್ಲ. ಆದರೆ ಅದು ಮಿಸ್‌ಯೂಸ್ ಆದಾಗ ಮಾತ್ರ ಯಾರೂ ಅದನ್ನು ಒಪ್ಪುವುದಿಲ್ಲ. ಆದುದರಿಂದ ತಾವು ಈ ಅಪೆಲೇಟ್ ಅಥಾರಿಟಿಯನ್ನು ಜುಡಿಷಿಯಸ್ ಆಗಿ ಯೂಸ್ ಮಾಡಲು ಇಟ್ಟುಕೊಂಡರೆ ಒಳ್ಳೆಯದು ಎಂದು ಹೇಳಲು ಇಚ್ಛೆಪಡುತ್ತೇನೆ.

ಶ್ರೀ ಎಂ. ರಘುಪತಿ.— ನಾನು ಈ ವಾದವನ್ನು ಮತ್ತೆ ಯು.ಜಿ.ಸಿ.ಯವರ ಮುಂದೆ ಇಡುತ್ತೇನೆ. ಈ ವಿಷಯದಲ್ಲಿ ಅವರಿಗೆ ಕಾಗದ ಬರೆಯುತ್ತೇನೆ, ಮತ್ತೆ ಶ್ರೀ ಬಸವಲಿಂಗಪ್ಪನವರು ರಿಸರ್‌ವೇಷನ್ ಬಗ್ಗೆ ಹೇಳಿದ್ದಾರೆ. ಅವರ ಅಭಿಪ್ರಾಯವನ್ನು ನಾನು ಯಾವಾಗಲೂ ಒಪ್ಪಿಕೊಂಡಿದ್ದೇವೆ. ವಿಶ್ವವಿದ್ಯಾನಿಲಯಗಳಲ್ಲಿ ಯಾವ ಮಟ್ಟದಲ್ಲಿ ರಿಸರ್‌ವೇಷನ್ ಆಗಬೇಕಾಗಿತ್ತೊ ಆ ಮಟ್ಟದಲ್ಲಿ ಆಗಿಲ್ಲ ಎಂದು ಹೇಳಿದ್ದಾರೆ. In principle, we have agreed. We have accepted, all they but due to some financial constraints, we could not do it. We are going to do it. ಈ ದಿವಸಗಳಲ್ಲಿ ಯೂನಿವರ್ಸಿಟಿಗಳಲ್ಲಿ ರಾಜಕೀಯ ಜಾಸ್ತಿ ಆಗುತ್ತಿದೆ. ಅದು ಕಡಿಮೆ ಆಗಬೇಕು ವಿಶ್ವವಿದ್ಯಾನಿಲಯಗಳಲ್ಲಿ ರಿಸರ್ಚ್ ಓರಿಯಂಟೆಡ್ ಎಜುಕೇಷನ್ ಇರಬೇಕು. ಅದನ್ನು ಬಿಟ್ಟು ವಿದ್ಯಾರ್ಥಿಗಳು ಬೇರೆ ಕಡೆಯ ವಿಷಯಗಳಿಗೆ ಗಮನ ಕೊಡುತ್ತಿದ್ದಾರೆ. ಈ ಮೂರು ಅಭಿಪ್ರಾಯಗಳನ್ನು ಗಮನದಲ್ಲಿ ಇಟ್ಟುಕೊಂಡು ಈ ತಿದ್ದುಪಡಿಗಳನ್ನು ತಂದಿದ್ದೇನೆ. ನಾನು ಎಲ್ಲವನ್ನೂ ಸರಿ ಮಾಡಿದ್ದೇವೆ ಎಂದು ಹೇಳುವುದಿಲ್ಲ. ಸ್ವಲ್ಪ ಮಟ್ಟಿಗೆ ಗುಣಮಟ್ಟವನ್ನು ಕಾಪಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಮಾನ್ಯ ಮೊಯಿಲಿಯವರು ಮಂಡಿಸಿದ ವಾದವನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ ಅಕಾಡೆಮಿಕ್ ಸ್ಟಾಂಡರ್ಡ್ ಮೈನ್‌ಟೈನ್ ಮಾಡಲು ನಾವು ವಿಶ್ವವಿದ್ಯಾನಿಲಯಗಳಿಗೆ ಪ್ರೋತ್ಸಾಹ ಕೊಡಬೇಕು ಎಂದು ಹೇಳಿದ್ದಾರೆ. ಮತ್ತೆ ಇಂಟರ್ ಯೂನಿವರ್ಸಿಟಿ ಬಗ್ಗೆ ಹೇಳಿದ್ದಾರೆ. ಅದನ್ನು ಪರಿಶೀಲನೆ ಮಾಡುತ್ತೇನೆ. ಅದನ್ನು ನಾನು ತಳ್ಳಿ ಹಾಕುವುದಿಲ್ಲ. ಮಾನ್ಯ ಸದಸರಾದ ಎಡಿಯೂರಪ್ಪನವರು ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳ ಮಗನಿಗೆ ಬೆಂಗಳೂರಿನಲ್ಲಿ ಮೆಡಿಕಲ್ ಕಾಲೇಜು ಸೀಟ್ ಸಿಕ್ಕಿರುವ ಬಗ್ಗೆ ಹೇಳಿದ್ದಾರೆ. ಈ ವಿಷಯದ ಬಗ್ಗೆ ನನ್ನ ಬಳಿ ಸಂಪೂರ್ಣ ಮಾಹಿತಿ ಇಲ್ಲ. ಅವರು ಎರಡು ವಿಷಯಗಳ ಬಗ್ಗೆ ಹೇಳಿದ್ದಾರೆ. ನನಗೆ ಈ ವಿಷಯಗಳು ಗೊತ್ತಿಲ್ಲ. ಮತ್ತು ಆ ಕಾರ್ಯವ್ಯಾಪ್ತಿ ನನಗೆ ಬರುವುದಿಲ್ಲ. ಅದು ಆರೋಗ್ಯ ಸಚಿವರ ಇಲಾಖೆಗೆ ಸೇರುತ್ತದೆ. ನಾನು ಈ ವಿಷಯವನ್ನು ಮಾನ್ಯ ಆರೋಗ್ಯ ಸಚಿವರ ಗಮನಕ್ಕೆ ತರುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ.— ಮಾನ್ಯ ಸದಸ್ಯರಾದ ಎಡಿಯೂರಪ್ಪನವರು ಸ್ಪಷ್ಟವಾದ ವಿಚಾರವನ್ನು ತಿಳಿಸಬೇಕು. ಸಚಿವರಿಗೂ ಕೂಡ ಈ ವಿಷಯ ಸರಿಯಾಗಿ ಗೊತ್ತಿಲ್ಲ. ಮಾನ್ಯ ಸದಸ್ಯರು ಮಾತನಾಡುವಾಗ ನಾನು ಇರಲಿಲ್ಲ. ಮಾನ್ಯ ಸಚಿವರು ಮಧ್ಯದಲ್ಲಿ ಈ ವಿಷಯವನ್ನು ಬಿಟ್ಟು ಬಿಟ್ಟರೆ ಅದು ಸಮಸ್ಯೆಯಾಗುತ್ತದೆ. ಉಪಕುಲಪತಿಗಳು ಉನ್ನತವಾದ ಹುದ್ದೆಯಲ್ಲಿ ಇರುವವರು ಅವರ ಇಂಟೆಗ್ರಿಟಿ ಬಗ್ಗೆ ಯಾರೂ ಪ್ರಶ್ನೆ ಮಾಡುವ ಹಾಗಿಲ್ಲ. ಒಬ್ಬ ಶ್ರೇಷ್ಠ ವ್ಯಕ್ತಿಗೆ ಕುಲಪತಿಗಳ ಹುದ್ದೆಯನ್ನು ವಹಿಸಿ ಕೊಟ್ಟಿದ್ದೇವೆ, ಅಂತಹವರ ಬಗ್ಗೆ ಲಘುವಾಗಿ ಮಾತನಾಡುವುದು ಸರಿಯಲ್ಲ, ಈ ಬಗ್ಗೆ ಸದನ

ಮಾಗಿಯುವುದರೊಳಗೆ ವರದಿ ಕೊಟ್ಟರೆ ಒಳ್ಳೆಯದು ಇಲ್ಲದೆ ಹೋದಲ್ಲಿ ಇಲ್ಲಿ ಒಂದು ರೀತಿಯ ಸಂಶಯಕ್ಕೆ ಅವಕಾಶ ಮಾಡಿಕೊಟ್ಟ ಹಾಗೆ ಆಗುತ್ತದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.— ನನ್ನ ಬಳಿ ಸಂಪೂರ್ಣ ದಾಖಲೆಗಳಿವೆ.

ಶ್ರೀ ಎಂ. ರಘುಪತಿ.— ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರುವ ವಿಷಯದ ಬಗ್ಗೆ ನಾನು ರುದ್ರಪ್ಪನವರನ್ನು ಸಂಪರ್ಕಿಸಿ ಮಾಹಿತಿ ಪಡೆಯುತ್ತೇನೆ. ಸಾಧ್ಯವಾದರೆ ಇವತ್ತೇ ಮಾಹಿತಿಯನ್ನು ಒದಗಿಸುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.— ಈ ವಿಷಯದ ಬಗ್ಗೆ ನನ್ನ ಬಳಿ ಸಂಪೂರ್ಣ ಮಾಹಿತಿ ಇದೆ. ಒಂದು ವಿಷಯ ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳು ಅವರ ಮಗನಿಗೆ ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಅಂಬೇಡ್ಕರ್ ಕಾಲೇಜಿನಲ್ಲಿ ಮೆಡಿಕಲ್ ಸೀಟ್ ಕೊಟ್ಟಿರುವ ಬಗ್ಗೆ, ಮತ್ತೊಂದು ವಿಷಯ ದಾವಣಗೆರೆ ಡೆಂಟಲ್ ಕಾಲೇಜಿನಿಂದ ಇಲ್ಲಿಗೆ ಇವರು ಪ್ರಭಾವ ಬೀರಿ ಒಂದು ವಿಶ್ವವಿದ್ಯಾನಿಲಯದಿಂದ ಮತ್ತೊಂದು ವಿಶ್ವವಿದ್ಯಾನಿಲಯಕ್ಕೆ ಬರಬೇಕಾದರೆ ಬೇಕಾಗಿರುವ ಮಿನಿಮಂ ಮಾರ್ಕ್ಸ್ ನಿಬಂಧನೆಯನ್ನು ಉಲ್ಲಂಘನೆ ಮಾಡಿ ಸೀಟ್ ಕೊಟ್ಟಿರುವ ಬಗ್ಗೆ ಈ ಎರಡು ವಿಷಯಗಳ ಬಗ್ಗೆ ನನ್ನ ಬಳಿ ಸಂಪೂರ್ಣವಾದಂತಹ ದಾಖಲೆಗಳಿವೆ.

SRI M. VEERAPPA MOILY.— We are not questioning their integrity. Before the House concludes, it is better if he makes a statement, otherwise, it will feed to some misappeehension in the minds of the people.

SRI BASAVARAJ.— When a question was asked, a reply was given that it has come to the notice that one student has been admitted without the approval of the Govt. And the explanation of the principal, Govt. Dental College has been called for.

ಶ್ರೀ ಎಂ. ರಘುಪತಿ. ಇದು ಮೆಡಿಕಲ್ ಎಜುಕೇಷನ್‌ಗೆ ಸಂಬಂಧಪಟ್ಟ ವಿಷಯವಾಗಿರುವುದರಿಂದ ಇದರ ಬಗ್ಗೆ ಸಂಬಂಧಪಟ್ಟ ಮಂತ್ರಿಗಳು ವಿವರಣೆ ಕೊಡುತ್ತಾರೆ. ಈ ಮಸೂದ ಆದ ಕೂಡಲೇ ಬೇರೆ ರೂಪದಲ್ಲಿ ಈ ವಿಷಯವನ್ನು ನಾವು ಚರ್ಚೆ ಮಾಡಬಹುದು. ನನಗೆ ಈ ವಿಷಯ ಗೊತ್ತಿಲ್ಲ. ಮತ್ತು ನನ್ನ ಕಾರ್ಯವ್ಯಾಪ್ತಿಗೆ ಇದು ಬರುವುದಿಲ್ಲ. ಮತ್ತು ವಿದ್ಯಾರ್ಥಿ ಪ್ರಾತಿನಿಧ್ಯದ ಬಗ್ಗೆ ಮಾನ್ಯ ಸದಸ್ಯರಾದ ವೇದಾಂತ ಹೆಮ್ಮಿಗೆಯವರು ಹೇಳಿದ್ದಾರೆ. ಅಸ್ಸಾಂ ಮುಖ್ಯಮಂತ್ರಿಗಳು ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ಆಗಿದ್ದರು. ಮಾನ್ಯ ಸದಸ್ಯರಾದ ವೇದಾಂತ ಹೆಮ್ಮಿಗೆಯವರು ಹೇಳಿರುವ ವಿಷಯದ ಬಗ್ಗೆ ನನಗೆ ಸಂಪೂರ್ಣ ಅನುಕಂಪ ಇದೆ. ಅನುಸೂಚಿತ ಜಾತಿ ಮತ್ತು ಪಂಗಡಗಳು ಹಾಗೂ ಹಿಂದುಳಿದ ವರ್ಗಗಳ ರಕ್ಷಣೆಗಾಗಿ ಈ ತಿದ್ದುಪಡಿಗಳನ್ನು ತಂದಿದ್ದೇವೆ. ಇನ್ನೂ ಹೆಚ್ಚು ತಿದ್ದುಪಡಿಗಳನ್ನು ತರಬೇಕಾದರೆ ನಾನು ಈ ವಿದ್ಯಾ ಕ್ಷೇತ್ರದಲ್ಲಿ ನೈಪುಣ್ಯತೆ ಹೊಂದಿರುವವರನ್ನು ಕರೆದು ಚರ್ಚೆ ಮಾಡುತ್ತೇನೆ. ಮಾನ್ಯ ಸದಸ್ಯರಾದ ಮೊಯಿಲಿಯವರು ಹಾಗೂ ಕೆ. ಹೆಚ್. ಪಾಟೀಲ್‌ರವರು ಈ ಮಸೂದೆಯನ್ನು ತರುವ ಮುಂಚೆ ವಿರೋಧ ಪಕ್ಷದವರೊಡನೆ ಸಮಾಲೋಚನೆ ಮಾಡಬೇಕಾಗಿತ್ತು ಎನ್ನುವ ಮಾತನ್ನು ಹೇಳಿದ್ದಾರೆ. ನಾನು ಈ ವಿಚಾರ ಮಾತ್ರ ಅಲ್ಲ ಪ್ರತಿಯೊಂದು ವಿಚಾರದಲ್ಲೂ ಈ ಕಡೆಯ ಸದಸ್ಯರನ್ನೂ ಆ ಕಡೆಯ ಸದಸ್ಯರನ್ನೂ ವಿಧಾನಪರಿಷತ್ತಿನ ಸದಸ್ಯರನ್ನೂ ಕರೆದು ಸಮಾಲೋಚನೆ ಮಾಡುತ್ತೇನೆಂದು ಹೇಳುತ್ತೇನೆ. ಕ್ಯಾಪಿಟೇಷನ್ ಫೀ ಮತ್ತು ಇತರ ಪ್ರಾಮುಖ್ಯವಾದ ವಿಷಯಗಳಲ್ಲಿ ಎಲ್ಲರಲ್ಲಿಯೂ ಚರ್ಚೆ ಮಾಡುತ್ತೇನೆ. ಆದುದರಿಂದ ಮಾನ್ಯ ಸದಸ್ಯರು ಈ ಮಸೂದೆಗೆ ಅಂಗೀಕಾರ ನೀಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಕೆ. ಹೆಚ್. ಪಾಟೀಲ್.—ಅಧ್ಯಕ್ಷರೇ, ಈ ಯೂನಿವರ್ಸಿಟಿಯವರು ಅಫಿಲಿಯೇಷನ್ ಹಣವನ್ನು ಒಂದು ಕಾಲೇಜಿನಿಂದ ಮತ್ತೊಂದು ಕಾಲೇಜಿಗೆ ಹೆಚ್ಚಿಗೆ ತೆಗೆದುಕೊಳ್ಳುತ್ತಾರೆ. ಇದರ ಬಗ್ಗೆ ಏನು ಹೇಳುತ್ತೀರಿ ? ಎರಡನೆಯದು ಸಿಂಡಿಕೇಟ್ ಅಕಾಡೆಮಿಕ್ ಕೌನ್ಸಿಲ್ ಎಲ್ಲವೂ ಕೂಡ, ಬಿ.ಎಂ. ಪಾಟೀಲ್ ಕಾಲೇಜಿಗೆ ಮಂಜೂರಾತಿಯನ್ನು ಕೊಟ್ಟಾಗ ಸರ್ಕಾರದವರು ರೆಕಗ್ನಿಷನ್‌ನ್ನು ಏತಕ್ಕೆ ತಡೆಹಿಡಿಯುತ್ತೀರಿ ?

ಶ್ರೀ ಎಂ. ರಘುಪತಿ.—ರೆಕಗ್ನಿಷನ್ ವಿಷಯದಲ್ಲಿ ಹೇಳುತ್ತೇನೆ. ಅದು ಹೈಕೋರ್ಟ್‌ನಲ್ಲಿದೆ. ಹೈಕೋರ್ಟ್‌ನಲ್ಲಿರುವುದರಿಂದ ಆ ವಿಷಯದಲ್ಲಿ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಮತ್ತೆ ಒಂದು ಕಾಲೇಜಿನಿಂದ ಕಾಲೇಜಿಗೆ ಹೆಚ್ಚಿಗೆ ಅಫಿಯೇಲೀಷನ್ ಫೀಜ್ ತೆಗೆದುಕೊಳ್ಳುತ್ತಾರೆ ಮತ್ತು ಗ್ಯಾರಂಟಿ ಮನಿಯನ್ನು ಸಹ ಜಾಸ್ತಿ ತೆಗೆದುಕೊಳ್ಳುತ್ತಾರೆಂದು ಹೇಳಿದ್ದಾರೆ. ಈ ತರಹ ನ್ಯೂನತೆಗಳನ್ನು ತಪ್ಪಿಸುವುದಕ್ಕೆ ಏರ್ಪಾಡು ಮಾಡುತ್ತೇನೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಬಿ.ಎಂ. ಇದಿನಬ್ಬ.— ವಿಶ್ವವಿದ್ಯಾನಿಲಯಗಳಲ್ಲಿ ಜಾತಿಯ ಪಿಡಂಬೂತವನ್ನು ಸಂಪೂರ್ಣವಾಗಿ ನಿಲ್ಲಿಸುವುದಕ್ಕೆ ಹೊಸ ಉಪಕ್ರಮಗಳೇನಾದರೂ ನಿಮ್ಮಲ್ಲಿ ಇದೆಯೇ ? ಅಥವಾ ಹೊಸ ಔಷಧಿಗಳು ಏನಾದರೂ ಇದೆಯೇ ತಿಳಿಸುತ್ತೀರಾ ?

ಶ್ರೀ ಎಂ. ರಘುಪತಿ.—ಜಾತಿ ಭಾವನೆಯನ್ನು ತೊಲಗಿಸುವುದಕ್ಕೆ ಯಾರಿಂದಲೂ ಸಾಧ್ಯವಿಲ್ಲ, ಈ ಸಮಾಜದಲ್ಲಿ ಎಲ್ಲಿಯವರೆಗೆ ರಾಜಕೀಯ ಮತ್ತು ಜಾತೀಯ ಆಧಾರದಲ್ಲಿ ಚುನಾವಣೆಗಳು ನಡೆಯುತ್ತವೆ. ಅಲ್ಲಿಯವರೆಗೆ ಜಾತಿಗಳು ಇದ್ದೇ ಇರುತ್ತವೆ. ಇದು ಒಂದಕ್ಕೊಂದು ಸಂಬಂಧ ಇದೆ. ಜಾತಿ ಎಲ್ಲಿಯವರೆಗೆ ಇರುತ್ತದೆಯೋ ಅಲ್ಲಿಯವರೆಗೂ ರಾಜಕೀಯ ಇರುತ್ತದೆ. ರಾಜಕೀಯ ಎಲ್ಲಿಯವರೆಗೆ ಇರುತ್ತದೆಯೋ ಅಲ್ಲಿಯವರೆಗೆ ಜಾತಿ ಇರುತ್ತದೆ. ಇದನ್ನು ತಪ್ಪಿಸುವುದು ಕಷ್ಟ. ಇಡೀ ಸಮಾಜದಲ್ಲಿ ಇದರ ಬಗ್ಗೆ ಪರಿವರ್ತನೆ ಆಗಬೇಕು. ಕ್ಲಾಸ್ ಸ್ಟ್ರಗಲ್ ಆಗಬೇಕು. ಕ್ಯಾಸ್ಟ್ ಸ್ಟ್ರಗಲ್ ಅಲ್ಲ. ಇದು ಹೋಗಬೇಕು, ಇದು ಹೋದರೆ ಜಾತೀಯ ಪಿಡಂಬೂತವನ್ನು ತಪ್ಪಿಸುವುದಕ್ಕೆ ಸಾಧ್ಯ ಉಂಟು. ಕ್ಲಾಸ್ ಸ್ಟ್ರಗಲ್‌ನಿಂದ ಇವನ್ನು ಸಾಧನೆ ಮಾಡಬಹುದೇ ಹೊರತು ಬೇರೆ ಯಾರಿಂದಲೂ ಸಾಧ್ಯವಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಸಚಿವರು ೬೧(ಬಿ) ಕರ್ನಾಟಕ ಇಂಟರ್ ಯೂನಿವರ್ಸಿಟಿ ಬೋರ್ಡ್ ಬಗ್ಗೆ ಏನನ್ನೂ ಹೇಳಲಿಲ್ಲ.

ಅಧ್ಯಕ್ಷರು.—ಹೇಳಿದರು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಏಕೆಂದರೆ ಇದು ಅಡ್ವೈಸರಿ ರೂಪದಲ್ಲಿ ಇದೆ, ಅದಕ್ಕೆ ಏನಾದರೂ ಒಂದು ವ್ಯವಸ್ಥೆ ಮಾಡಬೇಕು. ೫೩ರಲ್ಲಿ ತಾವು ಕೈ ಕಟ್ಟಿಸಿಕೊಂಡಿದ್ದೀರಿ. ಕೈ ಕಟ್ಟಿಸಿಕೊಂಡಿರುವುದನ್ನು ಯಾವ ರೀತಿ ಬಿಡಿಸಿಕೊಳ್ಳುತ್ತೀರಿ ?

ಶ್ರೀ ಎಂ. ರಘುಪತಿ.—ಯು.ಜಿ.ಸಿ.ಯವರಿಗೆ ಸದಸ್ಯರ ಅಭಿಪ್ರಾಯಗಳನ್ನು ಬರೆದು ತಿಳಿಸುತ್ತೇನೆ. ಉತ್ತರ ಬಂದಮೇಲೆ ಮತ್ತೊಂದು ತಿದ್ದುಪಡಿ ತರಬೇಕಾದರೆ ತರೋಣ.

ಶ್ರೀ ಕೆ.ಬಿ. ಕೋಳಿವಾಡ್.—ಒಂದು ಕಾಲೇಜಿನಿಂದ ಮತ್ತೊಂದು ಕಾಲೇಜಿಗೆ ಅಫಿಲಿಯೇಷನ್ ಫೀಜ್ ಜಾಸ್ತಿಯಾಗುತ್ತದೆ ಯೂನಿವರ್ಸಿಟಿ. ಯೂನಿವರ್ಸಿಟಿಗೂ ಇದು ಬಹಳ ವ್ಯತ್ಯಾಸ ಆಗುತ್ತದೆ, ಡಿಪಾಸಿಟ್ ಎಂದು ಯೂನಿವರ್ಸಿಟಿಯವರು ೧೦-೧೫ ಸಾವಿರ ರೂಪಾಯಿಗಳನ್ನು ತೆಗೆದುಕೊಳ್ಳುತ್ತಿದ್ದಾರೆ.

ಶ್ರೀ ಎಂ. ರಘುಪತಿ.—ಅದನ್ನು ಕಾಮನ್ ಮಾಡುತ್ತೇನೆಂದು ಹೇಳುತ್ತೇನೆ,

ಅಧ್ಯಕ್ಷರು.— ಈಗ ಪ್ರಸ್ತಾಪವನ್ನು ಸಭೆಯ ಮತಕ್ಕೆ ಹಾಕುತ್ತೇನೆ.

ಪ್ರಸ್ತಾವ ಹೀಗಿದೆ :

"೧೯೭೬ನೇ ಇಸವಿಯ ಕರ್ನಾಟಕ ವಿಶ್ವವಿದ್ಯಾನಿಲಯಗಳ ತಿದ್ದುಪಡಿಯ ವಿಧೇಯಕವನ್ನು ಪರ್ಯಾಯಾಲೋಚಿಸುವುದು."

ಪ್ರಸ್ತಾವಕ್ಕೆ ಅನುಮೋದನೆ ದೊರಕಿತು

ಪ್ರಸ್ತಾವವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು

ಖಂಡ ೨ ರಿಂದ ೬

ಅಧ್ಯಕ್ಷರು.—ಈಗ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ.

ಪ್ರಸ್ತಾವ ಹೀಗಿದೆ :

"ಖಂಡ ೨ ರಿಂದ ೬ ರವರೆಗೆ ವಿಧೇಯಕದ ಅಂಗವಾಗಿರಬೇಕು"

ಪ್ರಸ್ತಾವಕ್ಕೆ ಒಪ್ಪಿಗೆ ದೊರಕಿತು. ಖಂಡಗಳು ೨ ರಿಂದ ೬ ರವರೆಗೆ

ವಿಧೇಯಕದ ಅಂಗವಾಯಿತು

CLAUSE 7

ಶ್ರೀ ಎಂ. ರಘುಪತಿ.—ಮಾನ್ಯ ಅಧ್ಯಕ್ಷರೇ, ಇದು ಇಂಗ್ಲೀಷ್‌ನಲ್ಲಿದೆ. ಸಭೆಯ ಕ್ಷಮೆ ಕೇಳಿ ಇದನ್ನು ಓದುತ್ತೇನೆ.

I beg to move the following amendment to Clause 7 ;

"That in Clause 7, in sub-clause (3) for the words and punctuation marks" (3) for sub-section (4) and the proviso thereto, the following shall be substituted, namely,—

"(4) The Vice-Chancellor shall, subject to the pleasure of the Chancellor and the provisions of sub-section (3) hold office for a period of five years and he shall not be eligible for re-appointment in the same University ; , the following shall be substituted, namely.—

"(3) In sub-section (4), at the end the following proviso shall be inserted, namely :—"

The amendment was proposed

MR. SAEAKER.—The question is :

"That in clause 7, in sub-clause (3) for the words and punctation marks, " (3) for sub-section (4) and the proviso thereto, the following shall be substituted, namely.—

"(4) The Vice-Chancellor shall, subject to the pleasure of the Chancellor and the provisions of sub-section (3) hold office for a period of five years and he shall not be eligible for re-appointment in the same University : . the following shall be substituted namely.—

"(3) In sub-section (4), at the end the following proviso shall be inserted, namely.— "

The amendment was adopted

ಅಧ್ಯಕ್ಷರು.—ಈಗ ಪ್ರಸ್ತಾಪವನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಹೀಗಿದೆ.

"ತಿದ್ದುಪಡಿಯಾದ ೭ನೇ ಖಂಡವು ವಿಧೇಯಕದ ಅಂಗವಾಗಿರಬೇಕು"

ಪ್ರಸ್ತಾವಕ್ಕೆ ಒಪ್ಪಿಗೆ ದೊರಕಿತು.

ತಿದ್ದುಪಡಿಯಾದ ೭ನೇ ಖಂಡವು ವಿಧೇಯಕದ ಅಂಗವಾಯಿತು.

CLAUSE 8

Sri M. RAGHUPATHY (Min. for Education).—Sri, I beg to move the following amendment to Clause 8 .—

"That in clause 8 in sub-clause (1), for the words " and the Pro-Chancellor," "the words and at the convocation in the absence of the Chancellor and the Pro-Chancellor" shall be substituted."

The amendment was proposed

Mr. SPEAKER.—The question is .—

"That in clause 8 in sub-clause(1), for the words "and the Pro-Chancellor", the words "and at the convocation in the absence of the Chancellor and the Pro-Chancellor" shall be substituted."

The amendment was adopted

ಅಧ್ಯಕ್ಷರು.—ಈಗ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಹೀಗಿದೆ —

"ತಿದ್ದುಪಡಿಯಾದ ೮ನೇ ಖಂಡವು ವಿಧೇಯಕದ ಅಂಗವಾಗಿರಬೇಕು"

ಪ್ರಸ್ತಾವಕ್ಕೆ ಒಪ್ಪಿಗೆ ದೊರಕಿತು. ತಿದ್ದುಪಡಿಯಾದ ೮ನೇ ಖಂಡವು ವಿಧೇಯಕದ ಅಂಗವಾಯಿತು.

CLAUSE 9 to 17

ಅಧ್ಯಕ್ಷರು.—"ಖಂಡ ೯ ರಿಂದ ೧೭ರ ವರೆಗೆ ವಿಧೇಯಕದ ಅಂಗವಾಗಿರಬೇಕೆಂಬುದು ಸಭೆಯ ಮುಂದಿರುವ ವಿಷಯ"

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಖಂಡ ೯ ರಿಂದ ೧೭ರ ವರೆಗೆ ವಿಧೇಯಕಕ್ಕೆ ಸೇರಿಸಲಾಯಿತು.

CLAUSE 18

ಅಧ್ಯಕ್ಷರು.—ಮಾನ್ಯ ಸದಸ್ಯರಾದ ಶ್ರೀ ಆರ್. ವೆಂಕಟರಾಮಯ್ಯನವರು ಇದಕ್ಕೆ ತಿದ್ದುಪಡಿಯನ್ನು ಸೂಚಿಸಿದ್ದಾರೆ. ಅವರು ತಮ್ಮ ತಿದ್ದುಪಡಿಯನ್ನು ಮಂಡಿಸಬೇಕು.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಸಭಾಧ್ಯಕ್ಷರೇ, ಈಗಾಗಲೇ ನಾನು ಹೇಳಿದಂತೆ ಮಾನ್ಯ ಸಚಿವರು ವಿದ್ಯಾರ್ಥಿ ದೆಸೆಯಿಂದ ಹೋರಾಟ ಮಾಡಿ ರಾಜಕೀಯ ರಂಗಕ್ಕೆ ಬಂದು ಈಗ ಮಂತ್ರಿಗಳಾಗಿದ್ದಾರೆ. ನನ್ನ ತಿದ್ದುಪಡಿ ನ್ಯಾಯವಾಗಿದೆ. ಆದ್ದರಿಂದ ಅವರು ಇದನ್ನು ಒಪ್ಪಿಕೊಳ್ಳುತ್ತಾರೆಂದು ನಂಬುತ್ತೇನೆ. ನನ್ನ ತಿದ್ದುಪಡಿ ಹೀಗಿದೆ.—

"That in the fourth line of sub-clause(4), for the words" elected through such electoral college", the words" elected by the students directly" shall be substituted.

That in the fourth line of proviso to sub-clause(4), for the words'' such electoral college'' the words'' elected directly from students'' shall be substituted.''

The amendment was proposed

ಶ್ರೀ ಆರ್. ವೆಂಕಟರಾಮಯ್ಯ.—ವಿದ್ಯಾರ್ಥಿಗಳು ಹೋರಾಟ ಮಾಡಿ ಅಸ್ಸಾಂನಲ್ಲಿ ಒಂದು ರಾಜ್ಯವನ್ನೇ ನಡೆಸುತ್ತಿದ್ದಾರೆ. ಇಲ್ಲಿ ಏನು ಮಾಡುತ್ತಾರೆಂದರೆ ೧೦ ಜನರನ್ನು ಕೂಡಿ ಹಾಕಿ ಎಲ್ಲಿಯೋ ಇಟ್ಟುಕೊಂಡು ಸಿಂಡಿಕೇಟ್ ಮೆಂಬರ್ ಮಾಡಿಸಿಕೊಳ್ಳುತ್ತಾರೆ. ಯಾರು ಗ್ರೂಪ್ ಲೀಡರ್ಸ್, ಗ್ಯಾಂಗ್ ಲೀಡರ್ಸ್ ಇರುತ್ತಾರೆ ಅವರು ಆರಿಸಿ ಬರುತ್ತಾರೆ. ಅದನ್ನು ತಪ್ಪಿಸುವುದಕ್ಕೆ ಪ್ರಯತ್ನ ಮಾಡಬೇಕು. ವಿದ್ಯಾರ್ಥಿಗಳಲ್ಲಿ ಗ್ರೂಪ್ಸ್, ಗ್ಯಾಂಗ್ ಇರುವುದು ರಘುಪತಿಯವರಿಗೂ ಗೊತ್ತು, ಎಲೆಕ್ಟೊರಲ್ ಕಾಲೇಜ್ ಎಂದು ಹೇಳಿದರೆ ಗ್ಯಾಂಗ್ಸ್, ಗ್ರೂಪ್ಸ್ ಇಟ್ಟುಕೊಂಡು ಅವರೇ ಎಲೆಕ್ಟೊರಲ್, ಕಾಲೇಜ್ ಸೃಷ್ಟಿ ಮಾಡಿಕೊಂಡು ಅವರಿಗೆಲ್ಲಾ ಕುಡಿಸಿ ಕೆಟ್ಟ ಹವ್ಯಾಸಕ್ಕೆ ಇಳಿಸಿ ಎಲೆಕ್ಟ್ ಮಾಡಿಸಿಕೊಳ್ಳುವ ಪರಿಸ್ಥಿತಿ ಬರುತ್ತದೆ. ಆದ್ದರಿಂದ ಡೈರೆಕ್ಟಾಗಿ ಎಲೆಕ್ಷನ್ಸ್ ನಡೆಯಲಿ, ಎಂದು ಸೂಚನೆ ಕೊಟ್ಟಿದ್ದೇನೆ. ಯಾವುದಾದರೂ ಪಾರ್ಟಿ ಬರಲಿ. ಸ್ವಾತಂತ್ರ್ಯ ಬಂದು ೩೮ ವರ್ಷ ಆಯಿತು. ಈಗಲಾದರೂ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇರತಕ್ಕ ರಘುಪತಿಯವರು ಇದನ್ನು ಒಪ್ಪಿಕೊಳ್ಳಬೇಕು. ಇವುಗಳಿಗೆ ಡೈರೆಕ್ಟಾಗಿ ಎಲೆಕ್ಷನ್ ಆಗಬೇಕು. ಮೊನ್ನೆ ವಿದ್ಯಾರ್ಥಿಗಳೆಲ್ಲಾ ಹೋರಾಟ ಮಾಡಿಕೊಂಡು ಎಸ್.ಎಫ್.ಐ.ನವರು ೧೦ ಸಾವಿರ ಜನ ಇಲ್ಲಿಗೆ ಬಂದಿದ್ದರು. ೫ ಜನರಿಗೆ ರೆಪ್ರಸೆಂಟೇಷನ್ ಕೊಡುತ್ತೇವೆ ಎಂದು ಇವರೇ ಒಪ್ಪಿಕೊಂಡಿದ್ದಾರೆ. ನಾವು ಹಿಂದೆಯೇ ಡೈರೆಕ್ಟಾಗಿ ಎಲೆಕ್ಷನ್ ಆಗಲಿ, ವಿದ್ಯಾರ್ಥಿಗಳೆಲ್ಲಾ ಸೇರಿ ಎಲೆಕ್ಟ್ ಮಾಡಲಿ ಎಂದು ಹೇಳಿದ್ದರೂ ಕೂಡ ಎಲೆಕ್ಟೊರಲ್ ಕಾಲೇಜು ಎಂದು ಸೇರಿಸಿದ್ದಾರೆ. ಇದು ಸರಿಯಲ್ಲ. ನಮ್ಮ ಬೇಡಿಕೆ ನ್ಯಾಯವಾಗಿದೆ. ಡೈರೆಕ್ಟಾಗಿ ಇವರೂ ಎಲೆಕ್ಟ್ ಆಗಲಿ. ನಮ್ಮ ತಿದ್ದುಪಡಿಯನ್ನು ತಾವು ಒಪ್ಪಿಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಎಂ.ರಘುಪತಿ.—ಈ ಸಂದರ್ಭದಲ್ಲಿ ಇಷ್ಟೇ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಎಲೆಕ್ಟೋರಲ್ ಕಾಲೇಜು ಎಂದರೆ ಅಲ್ಲಿ ಡೈರೆಕ್ಟ್ ಎಲೆಕ್ಷನ್ ಆಗಬಹುದು, ಇನ್‌ಡೈರೆಕ್ಟ್ ಎಲೆಕ್ಷನ್ ಆಗಬಹುದು. ಎರಡಕ್ಕೂ ಅವಕಾಶ ಇದೆ. ಸ್ಟ್ಯಾಚೂಟ್ ಮಾಡುವಾಗ ಅದನ್ನು ಯೂನಿವರ್ಸಿಟಿಯಲ್ಲಿ ಮಾಡುತ್ತಾರೆ. ಆದ್ದರಿಂದ ಈ ಹಂತದಲ್ಲಿ ತಾವು ಇದಕ್ಕೆ ಒತ್ತಾಯ ಮಾಡಬೇಡಿ, ಇಲ್ಲಿಗೇ ಇದನ್ನು ಬಿಡಿ ಎಂದು ತಮ್ಮನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ತಮ್ಮ ಅಮೆಂಡ್‌ಮೆಂಟ್ ವಾಪಸ್ ತೆಗೆದುಕೊಳ್ಳಿ ಎಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಮಾನ್ಯ ವೆಂಕಟರಾಮಯ್ಯನವರು ತಮ್ಮ ತಿದ್ದುಪಡಿಯನ್ನು ವಾಪಸ್ ತೆಗೆದುಕೊಳ್ಳುತ್ತೀರಾ ?

ಶ್ರೀ ಆರ್. ವೆಂಕಟರಾಮಯ್ಯ.—ಇಲ್ಲ ಸ್ವಾಮಿ. ಡೈರೆಕ್ಟಾಗಿ ಎಲೆಕ್ಷನ್ ಆಗಬೇಕು ಎಂಬುದು ನಮ್ಮ ನಿಲುವು. ಆದ್ದರಿಂದ ಈಗಲೂ ಇದನ್ನು ಒತ್ತಾಯ ಮಾಡುತ್ತೇನೆ.

ಅಧ್ಯಕ್ಷರು.—ತಿದ್ದುಪಡಿಯನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ.

''That in the fourth line of sub-clause(4), for the words elected through snch electoral college'' the words ''elected by the students directly'' shall be substituted.''

That in the fourth line of proviso to sub-clause(4). for the words ''such electoral college'', the words ''elected directly from students'' shall be substituted.''

(ತಿದ್ದುಪಡಿ ಬಿದ್ದುಹೋಯಿತು.)

ಅಧ್ಯಕ್ಷರು.—ಪ್ರಸ್ತಾವವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ.

ಪ್ರಸ್ತಾವ ಹೀಗಿದೆ.—

"೧೮ನೇ ಖಂಡವು ವಿಧೇಯಕದ ಅಂಗವಾಗಿರಬೇಕೆಂಬುದು ಸಭೆಯ ಮುಂದಿರುವ ವಿಷಯ"

ಪ್ರಸ್ತಾವಕ್ಕೆ ಅನುಮೋದನೆ ದೊರಕಿತು ಮತ್ತು ೧೮ನೇ ಖಂಡವು ವಿಧೇಯಕದ ಅಂಗವಾಯಿತು.

೧೯ನೇ ಖಂಡ.—

ಅಧ್ಯಕ್ಷರು.—ಈಗ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ.

ಪ್ರಸ್ತಾವ ಹೀಗಿದೆ.—

"೧೯ನೇ ಖಂಡವು ವಿಧೇಯಕದ ಅಂಗವಾಗಿರಬೇಕು."

ಪ್ರಸ್ತಾವಕ್ಕೆ ಒಪ್ಪಿಗೆ ದೊರಕಿತು ಮತ್ತು ೧೯ನೇ ಖಂಡವು ವಿಧೇಯಕದ ಅಂಗವಾಯಿತು.

CLAUSE-20

SRI M. RAGHUPATHY.—Sir, In Clause 20, in sub-clause ( ), in item (v) after the words "nominated by the Chancellor", the word "in consultation with the State Government" shall be inserted.

ಅಧ್ಯಕ್ಷರು.—ತಿದ್ದುಪಡಿಯನ್ನು ಮಂಡಿಸಲಾಗಿದೆ. ತಿದ್ದುಪಡಿಯನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ.

"In clause-20, In sub-clause (1) in item (v) after the words "nominated by the Chancellor" the words "in consultation with the State Govt." shall be inserted."

ತಿದ್ದುಪಡಿ ಅಂಗೀಕೃತವಾಯಿತು.

ಅಧ್ಯಕ್ಷರು.—ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಹೀಗಿದೆ.

"೨೦ನೇ ಖಂಡವು ತಿದ್ದುಪಡಿಯಾದಂತೆ ವಿಧೇಯಕದ ಅಂಗವಾಗಿರಬೇಕು"

ಪ್ರಸ್ತಾವಕ್ಕೆ ಒಪ್ಪಿಗೆ ದೊರಕಿತು. ತಿದ್ದುಪಡಿಯಾದಂತೆ ೨೦ನೇ ಖಂಡವು ವಿಧೇಯಕದ ಅಂಗವಾಯಿತು.

ಖಂಡ ೨೧ ರಿಂದ ೩೩ರವರೆಗೆ.

ಅಧ್ಯಕ್ಷರು.—ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಹೀಗಿದೆ.

"ಖಂಡ ೨೧ ರಿಂದ ೩೩ರ ವರೆಗೆ ಎರಡೂ ಸೇರಿದಂತೆ ವಿಧೇಯಕದ ಅಂಗವಾಗಿರಬೇಕು"

ಪ್ರಸ್ತಾವಕ್ಕೆ ಒಪ್ಪಿಗೆ ದೊರಕಿತು. ಖಂಡಗಳು ೨೧ ರಿಂದ ೩೩ರ ವರೆಗೆ ಎರಡು ಸೇರಿದಂತೆ ವಿಧೇಯಕದ ಅಂಗವಾದವು.

CLAUSE-34

SRI M. RAGHUPATHY.—In clause 34, the existing sub-clause (4), shall be re-numbered as sub-clause (5) and before the sub-clause so re-numbered, the following sub-clause shall be inserted, namely.

"(4) In sub-section (8), the words "merit a little above" shall be omitted.

For sub-clause (4) the following shall be substituted.

"(4) after sub-section (9) the following sub-section shall be inserted. namely–.

(10) Notwithstanding anything contained in the preceeding sub-section the Syndicate shall be competent to invite, on the recommendations of the Vice-Chancellor, a person of high academic distinction and Professional attainments to accept the post of Visiting Professor in the University on such terms and conditions as may be mutually agreed upon.

Provided that there shall not be more than four such Visiting Professors in an University at any given time."

ಅಧ್ಯಕ್ಷರು.—ತಿದ್ದುಪಡಿಯನ್ನು ಮಂಡಿಸಲಾಗಿದೆ. ಈಗ ತಿದ್ದುಪಡಿಯನ್ನು ಸಭೆಯ ಮತಕ್ಕೆ ಹಾಕುತ್ತೇನೆ. The question is,

In clause 34, the existing sub-clause (4), shall be re-numbered as sub-clause (5) and before the sub-clause so re-numbered, the following sub-clause shall be inserted namely.

" (4) In sub-section (8), the words "merit a little above" shall be omitted.

For sub-clause (4) the following shall be substituted.

" (4) after Sub-section (9) the following sub-section shall be inserted, namely.

(10) Notwithstanding anything contained in the preceeding section the Syndicate shall be competent to invite, on the recommendations of the Vice-Chancellor, a person of high academic distinction and Professional attainments to accept the post of Visiting Professor in the University on such terms and conditions as may be mutually agreed upon.

Provided that there shall not be more than four such Visiting Professors in an University at any given time."

ಪ್ರಸ್ತಾವಕ್ಕೆ ಒಪ್ಪಿಗೆ ದೊರಕಿತು ತಿದ್ದುಪಡಿ ಅಂಗೀಕೃತವಾಯಿತು.

ಅಧ್ಯಕ್ಷರು.—ಈಗ ಖಂಡ ೩೪ನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಹೀಗಿದೆ.

"ತಿದ್ದುಪಡಿಯಾದ ೩೪ನೇ ಖಂಡವು ವಿಧೇಯಕದ ಅಂಗವಾಗಿರಬೇಕು"

ಪ್ರಸ್ತಾವಕ್ಕೆ ಒಪ್ಪಿಗೆ ದೊರಕಿತು. ತಿದ್ದುಪಡಿಯಾದ ೩೪ನೇ ಖಂಡವು ವಿಧೇಯಕದ ಅಂಗವಾಯಿತು.

CLAUSE–35

SRI M. RAGHUPATHY.—Sir, I beg to move that. (i) Clauses 35 to 43 shall be renumbered as clauses 36 to 44 respectively.

(ii) after clause 34 the following clause shall be inserted, namely.–

35. Insertion of new Section 49A. After Section 49 of the Principal Act, the following section shall be inserted, namely–.

49A. Appointment in accordance with promotion schemes

Not with standing anything contained in Section 49 but subject to the rules and orders issued by the State Government from time to time for reservation of appointments and posts for Scheduled Castes, Scheduled Tribes and other Backward Classes, appointments to the post of Readers and Professors in University institutions and departments may be made by the syndicate in accordance with promotion scheme. if any, prescribed by statutes made in this behalf if the University, institution or department has both Under-Graduate and Post-Graduate Courses".

MR. SPEAKER.—The question is,

(i) Clauses 35 to 43 shall be renumbered as clauses 63 to 44 respectively,

(ii) after clause 34 the following clause shall be inserted, namely,

"35. **Insertion of new section 49A.**—After Section 49 of the the Principal Act, the following Section shall be inserted, namely,

49A Appointment in accordance with promotion schemes.

Notwithstanding anything contained in Section 49 but subject to the rules and orders issued by the State Government from time to time for reservation of appointments and posts for Scheduled Castes, Scheduled Tribes and other Backward Classes, appointments to the post of Readers and Professors in Unsversity institutions and departments may be made by the Syndicate in accordance with promotion scheme, if any, prescribed by statutes made in this behalf if the University, institution or department has both Under-Gradu ate and post graduate Courses"

"The motion was adopted and the Clauses were added to the Bill."

ಅಧ್ಯಕ್ಷರು.—ಹೊಸದಾಗಿ ಸೇರಿಸಲಾಗಿರುವ ೩೫ನೇ ಖಂಡವು ವಿಧೇಯಕದ ಅಂಗವಾಗಿರಬೇಕೆಂಬುದು ಸಭೆಯ ಮುಂದಿರುವ ವಿಷಯ.

ಪ್ರಸ್ತಾವಕ್ಕೆ ಒಪ್ಪಿಗೆ ದೊರಕಿತು. ಹೊಸದಾಗಿ ಸೇರಿಸಿದ ೩೫ನೇ ಖಂಡವು ವಿಧೇಯಕದ ಅಂಗವಾಯಿತು.

ಖಂಡ ೩೬ ಮತ್ತು ೩೭

ಅಧ್ಯಕ್ಷರು.—ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಹೀಗಿದೆ. "೩೬ ಮತ್ತು ೩೭ನೇ ಖಂಡಗಳು ವಿಧೇಯಕದ ಅಂಗವಾಗಿರಬೇಕು''

ಪ್ರಸ್ತಾವಕ್ಕೆ ಒಪ್ಪಿಗೆ ದೊರಕಿತು, ೩೬ ಮತ್ತು ೩೭ನೇ ಖಂಡಗಳು ವಿಧೇಯಕದ ಅಂಗವಾದವು.

CLAUSE–38

SRI M. RAGHUPATHY..—In clause 38 for sub-clause (2), the following sub-clause shall be substituted, namely.—

"(2) in sub-section (5), for the words shall grant or refuse the application or any part there of", the words "shall make their recommendations for the grant of the application or any part there of or refuse the application or any part there of and the University shall issue orders accordingly."

ಅಧ್ಯಕ್ಷರು.—ತಿದ್ದುಪಡಿಯನ್ನು ಮಂಡಿಸಲಾಗಿದೆ. ತಿದ್ದುಪಡಿಯನ್ನು ಸಭೆಯ ಮತಕ್ಕೆ ಹಾಕುತ್ತೇನೆ. The question is:

In Clause 38 for Sub-clause (2), the following sub-clause shall be substituted, namely.—

"(2) in Sub-section (5), for the words shall grant or refuse the application or any part there of" the word" shall make thei recommendations for the grant of the application or any part there of or refuse the application or any part there of and the University shall issue orders accordingly."

(*Motion was adopted and amendment was added to the Bill*)

ಅಧ್ಯಕ್ಷರು.—ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಹೀಗಿದೆ. —
"ತಿದ್ದುಪಡಿಯಾದ ೩೮ನೇ ಖಂಡವು ವಿಧೇಯಕದ ಅಂಗವಾಗಿರಬೇಕೆಂಬುದು ಸಭೆಯ ಮುಂದಿರುವ ವಿಷಯ''

ಪ್ರಸ್ತಾವಕ್ಕೆ ಒಪ್ಪಿಗೆ ದೊರೆಯಿತು. ತಿದ್ದುಪಡಿಯಾದ 38ನೇ ಖಂಡವು ವಿಧೇಯಕದ ಅಂಗವಾಯಿತು.

CLAUSES–39 TO 41

MR. SPEAKER.—The question is,

"That clauses 39 to 41 both inclusive do stand part of the Bill"

The Motion was adopted and the clauses 39 to 41 both inclusive were added to the Bill.

Clause-42

ಶ್ರೀ ಬಿ. ಬಸವಲಿಂಗಪ್ಪ.—ನನ್ನ ತಿದ್ದುಪಡಿಯನ್ನು ನಾನು ಒತ್ತಾಯ ಮಾಡುವುದಿಲ್ಲ.

ಅಧ್ಯಕ್ಷರು.—ಆಗಬಹುದು. ವಿದ್ಯಾ ಮಂತ್ರಿಯವರು ತಿದ್ದುಪಡಿಯನ್ನು ಮಂಡಿಸಬಹುದು.

Sri M. Raghupathy (Minister for Education).—Sir, I beg to move:

"That in Clause-42, in sub-clause (6) after (c), the following shall be inserted, namely.—

"[d) acting as a co-ordinating agency for the financial programme of the Universities funded by the University Grants Commission, and by the State Government respectively."

Sir, I also further beg to move:

"That after sub-clause (7) of Clause-42, the following new sub-clause shall be inserted.—

"(8) the Board will review the appointments made, and posts filled by the Syndicate of the Universities and to safeguard the interests of the Scheduled Castes and Scheduled Tribes in the matter of recruitment and reservation of posts as per the Constitution and general rules of recruitment and reservation of post and set right injustice done, if any."

The question was proposed

Mr. Speaker.—Now, I will put both these amendments to the vote of the House.— The question is:

"That in clause-42, in sub-clause (6) after (c) the following shall be inserted, namely.—

"(d) acting as a co-ordinating agency for the financial programme of the Universities funded by the University Grants Commission, and by the State Government respectively."

AND

"That after sub-clause (7) of Clause-42, the following new sub-clause shall be inserted,—

"8 the Board will review the appointments made, and Posts filled by the Syndicate of the Universities and to safeguard the interests of the Scheduled Castes and Scheduled Tribes in the matter of recruitment and reservation of posts as per the Constitution and general rules of recruitment and reservation of post and set right injustice done, if any."

The Motion was adopted and Clause-42 as amended was added to the Bill.

MR. SPEAKER.—Now I will put the motion.—

"Clause 42 as amended do stand part of the Bill."

The Motion was adopted and Clause 42 as amended was added to the Bill.

CLAUSE 43

MR. SPEAKER.—Now, I will put Clause 43 to the vote of the House. The question is:

"That Clause-43 do stand part of the Bill."

The Motion was adopted and Clause 43 was added to the Bill.

Clause 1, etc.,

MR. SPEAKER.—The question is.-

"That Clause 1, the Long Title, the Preamble and Enacting Formula do stand part of the Bill."

The Motion was adopted

Clause 1, the Long Title, the Preamble and the Enacting Formula were added to the Bill.

Motion to Pass

SRI M. RAGHUPATHY (Minister for Education).—Sir, I beg to move:

"That the Karnataka State Universities (Amendment) Bill, 1986 as amended be passed."

MR. SPEAKER.—The question is:

"That the Karnataka State Universities (Amendment) Bill, 1986 as amended be passed."

The Motion was adopted and the Bill was passed

ಪ್ರಶ್ನೋತ್ತರಗಳು

(ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ನೀಡಲಾದ ಬಾಯಿ ಮಾತಿನ ಉತ್ತರಗಳು)

ಶ್ರೀ ಬಿ. ಅಪ್ಪಾಜಿಗೌಡ.—ಅಧ್ಯಕ್ಷರೇ, ಅಲ್ಲಿ ಸುಮಾರು ೩ ತಿಂಗಳಿಂದ ಕಾರ್ಮಿಕರ ಮುಷ್ಕರ ನಡೆಯುತ್ತಿದೆ. ಈ ಮುಷ್ಕರದ ಬಗ್ಗೆ ನಾನು ಸಂಬಂಧಪಟ್ಟ ಸಚಿವರ ಜೊತೆ ಬಹಳ ವಿವರವಾಗಿ ಹೇಳಿದ್ದೇನೆ. ತಕ್ಷಣ ತೀರ್ಮಾನ ತೆಗೆದುಕೊಳ್ಳುತ್ತೇನೆಂದು ಅವರು ಭರವಸೆಯನ್ನೂ ಕೂಡಾ ಕೊಟ್ಟಿದ್ದಾರೆ. ಆದರೆ ೩ ತಿಂಗಳಿಂದ ಇನ್ನೂ ಏನೂ ಆಗಿಲ್ಲ. ಅವರಿಗೆ ಕಾರ್ಮಿಕರ ಕಷ್ಟ ಏನು ಎಂದು ಗೊತ್ತಾಗಿಲ್ಲವೆನಿಸುತ್ತದೆ. ಅಧಿಕಾರಿಗಳು ಬಂಡವಾಳಶಾಹಿಗಳ ಜೊತೆಯಲ್ಲಿ ಒಂದುಗೂಡಿ ಇವರಿಗೆ ತೊಂದರೆ ಕೊಡುತ್ತಿದ್ದಾರೆ ಹೀಗೆ ಅಲ್ಲಿ ಆಗಬಾರದು. ಆದ್ದರಿಂದ ಆದಷ್ಟು ಜಾಗ್ರತೆ ಪರಿಹಾರವನ್ನು ದೊರಕಿಸಿಕೊಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.